ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 26 ಶನಿವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 100 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕೃತಜ್ಞತೆಗಳು



ಡಾ ಕೆ ಬಿ ಗಣಪತಿ
(27.12.1939 – 13.07.2025)

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಯವರು ಜುಲೈ 13, 2025ರ ಭಾನುವಾರ ದಂದು ನಮ್ಮನ್ನು ಅಗಲಿದ ವೇಳೆ ಅವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡು ಸಂತಾಪ ಸೂಚಿಸುವುದರೊಂದಿಗೆ ನಮ್ಮ ದುಃಖದಲ್ಲಿ ಭಾಗಿಗಳಾದ ಎಲ್ಲರಿಗೂ ನಾವು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಮೇಲಾಗಿ, ನಮ್ಮ ಕುಟುಂಬ ಇಂತಹ ಒಂದು ದುಃಖದ ಸನ್ನಿವೇಶದಿಂದ ಹೊರಬರಲು ಸಾಂತ್ವನ ಹೇಳುವುದರೊಂದಿಗೆ ಸಹಾಯ ಮಾಡಿದಂತಹ ಕಲ್ಯಾಟಂಡ ಕುಟುಂಬದ ಸದಸ್ಯರು, ನಮ್ಮೆಲ್ಲಾ ಸಂಬಂಧಿಕರು, ಸ್ನೇಹಿತರು, ನೆರೆ–ಹೊರೆಯವರು, ಹಿತೈಷಿಗಳು, ಕೊಡವ ಸಮಾಜ, ಮೈಸೂರು, ಶ್ರೀ ಕಾವೇರಿ ಕೊಡವ ಅಸೋಸಿಯೇಷನ್, ಮೈಸೂರು ಪೂರ್ವ ಒಳಗೊಂಡಂತೆ ವಿವಿಧ ಕೊಡವ ಸಂಘಗಳ ಸದಸ್ಯರು, ನಮ್ಮ ಓದುಗರು, ಜಾಹೀರಾತುದಾರರು, ಪೋಷಕರು, ಚಂದಾದಾರರು, ಪತ್ರಿಕಾ ವಿತರಕರು, ಪತ್ರಿಕಾ ಏಜೆಂಟರು ಹಾಗೂ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಿಬ್ಬಂದಿವರ್ಗದವರಿಗೂ ನಾವು ಕೃತಜ್ಞರಾಗಿದ್ದೇವೆ.

ಅಲ್ಲದೇ, ನಮ್ಮೊಂದಿಗೆ ಡಾ॥ ಕೆ.ಬಿ.ಗಣಪತಿ (ಗಾಂಧಿ) ಅವರ ಜೀವನವನ್ನು ಸ್ತುತಿಸಿದ್ದಕ್ಕಾಗಿ ನಾವು ಸದಾ ಆಭಾರಿಯಾಗಿರುತ್ತೇವೆ.

– ರ್‍ಯಾಲಿ ಗಣಪತಿ, ವಿಕ್ರಂ ಮುತ್ತಣ್ಣ, ಮಿಕ್ಕಿ ಬೋಪಣ್ಣ ಮತ್ತು ಕುಟುಂಬವರ್ಗ.

ವಿವಿಧ ಬೇಡಿಕೆಗಳ ಮುಂದಿಟ್ಟು ಪಿಂಚಣಿದಾರರ ಪ್ರತಿಭಟನೆ



ಮೈಸೂರಿನ ಜಯಲಕ್ಷ್ಮೀಪುರಂನ ಬಿಎಸ್‌ಎನ್‌ಎಲ್ ಕಚೇರಿ ಬಳಿ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರು, ಜು.25(ಎಂಟಿವೈ)– ಎಂಟನೇ ಕೇಂದ್ರ ವೇತನ ಆಯೋಗ ರಚಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಯಲಕ್ಷ್ಮೀಪುರಂನ ಬಿಎಸ್‌ಎನ್‌ಎಲ್ ಕಚೇರಿ ಬಳಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದ ಪಿಂಚಣಿದಾರರು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು. ಫೈನಾನ್ಸ್ ಆಕ್ಟ್ 2025ರ ಪ್ರಕಾರ ಪೆನ್ಷನ್ ಕಾನ್ಸೆಪ್ಟ್ ಬದಲ್ಲಿಗೊಳಿಸುವುದನ್ನು ತಕ್ಷಣ ಹಿಂಪಡೆಯಬೇಕು. 8ನೇ ಕೇಂದ್ರ ವೇತನ ಆಯೋಗವನ್ನು ಶೀಘ್ರವೇ ರಚಿಸಬೇಕು. ಬಿಎಸ್‌ಎನ್‌ಎಲ್ ಮತ್ತು ಸ್ಥಾಯಿತ ಸಂಸ್ಥೆಗಳ ನಿವೃತ್ತ ನೌಕರರ ಪೆನ್ಷನ್ ಪರಿಷ್ಕರಣೆಯನ್ನು 8ನೇ ಕೇಂದ್ರ ವೇತನ ಆಯೋಗದ ಉಲ್ಲೇಖ ವಿಷಯದಲ್ಲಿ ಸೇರ್ಪಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಪರಮೇಶ್ವರಯ್ಯ, ಸಂಚಾಲಕ ಸಿ.ಆರ್.ಕೃಷ್ಣಮೂರ್ತಿ, ಜಿಲ್ಲಾ ಕಾರ್ಯದರ್ಶಿ ಎಸ್.ವಿಶ್ವಕಂಠಮೂರ್ತಿ, ರಾಜಶೇಖರ, ಡಾ.ಚಂದ್ರಶೇಖರ್, ಪ್ರೊ.ಜಗನ್ನಾಥ್, ಗೋಪಾಲಕೃಷ್ಣ, ಡಿ.ಸಿ.ಎನ್. ರಾವ್, ಎಸ್.ಬಿ.ಬಲರಾಂ, ಎಸ್.ಶ್ರೀಧರ, ವೃಷಭ‌ರಾಜ್, ಜೆ.ಜಯರಾಂ, ಪಾರ್ಥಸಾರಥಿ, ಎನ್.ಕೆ.ಬಾಲಾಜಿರಾವ್, ಉಮಾಕಾಂತ್, ರಾಜಗೋಪಾಲ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅರಣ್ಯ ಶಾಸ್ತ್ರದ ಪದವಿ ಕಾಲೇಜು ಆರಂಭಿಸುವಂತೆ ಕೃಷಿ ಸಚಿವರಿಗೆ ಎಂಎಲ್‌ಸಿ ವಿವೇಕಾನಂದ ಆಗ್ರಹ

ಮೈಸೂರು, ಜು.25(ಬಿಎಲ್‌ಯು)– ಮೈಸೂರು ದಕ್ಷಿಣ ಶಿಕ್ಷಕರ ಕ್ಷೇತ್ರದ ಜಿಲ್ಲೆಗಳನ್ನು ಒಳಗೊಂಡಂತೆ ಅರಣ್ಯ ಶಾಸ್ತ್ರದ ಪದವಿ ಕಾಲೇಜು ಆರಂಭಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಕೆ. ವಿವೇಕಾನಂದ ಅವರು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಸಚಿವರಿಗೆ ಪತ್ರ ಬರೆದಿರುವ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಪರಿಸರ ಕಾಪಾಡುವಲ್ಲಿ ಯುವ ಪೀಳಿಗೆಯಲ್ಲಿ ಜಾಗೃತಿ ಮೂಡಿಸುವ ಸಂಕಲ್ಪ ಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲೆಯ 3730.59 ಚದರ ಕಿಲೋ ಮೀಟರ್, ಚಾಮರಾಜ ನಗರ ಜಿಲ್ಲೆಯ 2,467 ಚದರ ಕಿಲೋ ಮೀಟರ್, ಹಾಸನ ಜಿಲ್ಲೆಯ 509.76 ಚದರ ಕಿಲೋ ಮೀಟರ್, ಮಂಡ್ಯ ಜಿಲ್ಲೆಯ 271 ಚದರ ಕಿ.ಮೀ.ಅರಣ್ಯ ಪ್ರದೇಶ ಹೊಂದಿದೆ. ಈ ಜಿಲ್ಲೆಗಳ ವ್ಯಾಪ್ತಿಯಲ್ಲಿ ರಾಷ್ಟ್ರೀಯ ವನ್ಯಜೀವಿ ಅರಣ್ಯ ಪ್ರದೇಶ ಸೇರಿದೆ ಎಂದು ಹೇಳಿದ್ದಾರೆ. ಪ್ರಸಕ್ತ ಸನ್ನಿವೇಶದಲ್ಲಿ ಪರಿಸರಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವುದು ಅಗತ್ಯವಾಗಿದೆ. ಈ ಮೂಲಕ ಪರಿಸರ ಸಂರಕ್ಷಣೆ ಮಾಡುವ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಸಲು ಅರಣ್ಯ ಶಾಸ್ತ್ರದ ಪದವಿ ಕಾಲೇಜು ತೆರೆಯುವಂತೆ ವಿವೇಕಾನಂದ ಅವರು ಆಗ್ರಹಿಸಿದ್ದಾರೆ.

ಅನುದಾನ ಸ್ಥಗಿತ ಖಂಡಿಸಿ ಮೈಸೂರು ವಿವಿ ಸಂಶೋಧಕರ ಪ್ರತಿಭಟನೆ

ಸಮಾಜ ಕಲ್ಯಾಣ ಸಚಿವರಿಗೆ ಕಪ್ಪುಪಟ್ಟಿ ಪ್ರದರ್ಶನ ನಿರ್ಧಾರ



ಮೈಸೂರು ವಿವಿ ಸಂಶೋಧಕರ ಸಂಘದ ವತಿಯಿಂದ ಪತ್ರಕಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.25(ಎಂಕೆ)– ದಲಿತ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ನೀಡುತ್ತಿದ್ದ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನವನ್ನು ಪ್ರಸಕ್ತ ಸಾಲಿನಿಂದ ತಡೆ ಹಿಡಿದು ಆದೇಶ ಹೊರಡಿಸಿರುವ ಸರ್ಕಾರದ ನಡೆ ಖಂಡಿಸಿ ಮೈಸೂರು ವಿವಿ ಸಂಶೋಧಕರ ಸಂಘದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎದುರು ಜಮಾವಣೆಗೊಂಡ ಸಂಶೋಧಕರು, ಆದೇಶದ ಪ್ರತಿಯನ್ನು ಹರಿದು ಹಾಕಿ, ಆಕ್ರೋಶ ವ್ಯಕ್ತಪಡಿಸಿದರು. ಹೊಸ ಆದೇಶವು ಅವೈಜ್ಞಾನಿಕವಾಗಿದ್ದು, ದಲಿತ ವಿದ್ಯಾರ್ಥಿಗಳ ಹಕ್ಕನ್ನು ಹನನಗೊಳಿಸುವ ಹುನ್ನಾರ ನಡೆಯುತ್ತಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ವಿರುದ್ಧ ಧಿಕ್ಕಾರ ಕೂಗಿದರು.

ಈ ಕೂಡಲೇ ಆದೇಶವನ್ನು ರದ್ದುಪಡಿಸಿ, ಸಂಶೋಧನಾ ವಿದ್ಯಾರ್ಥಿಗಳಿಗೆ ನ್ಯಾಯವಾಗಿ ದೊರಕಬೇಕಾದ ಅನುದಾನ ಮುಂದುವರೆಸುವಂತೆ ಆಗ್ರಹಿಸಿದರು. ನಾಳೆ(ಜು.26) ಸೆನೆಟ್ ಭವನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಆಗಮಿಸುವ ಸಮಾಜ ಕಲ್ಯಾಣ ಸಚಿವರಿಗೆ ಕಪ್ಪು ಪಟ್ಟಿ ಪ್ರದರ್ಶನ ಮಾಡಲು ತೀರ್ಮಾನಿಸಿದರು.

ಸಂಶೋಧಕರ ಸಂಘದ ಅಧ್ಯಕ್ಷ ಶಿವಕಂಠ, ಸದಸ್ಯರಾದ ಕಾರ್ತಿಕ್ ಲಿಂಗರಾಜು, ಪ್ರದೀಪ್ ಮುಮ್ಮಡಿ, ವರಹಳ್ಳಿ ಆನಂದ ಲಿಂಗರಾಜು, ಶಿವರಾಜು, ಮಹೇಶ್, ನಾಗರಾಜ್, ಪೇಪರ್ ಬಾಬು, ಶಶಿಕುಮಾರ್ ದೀಪು ಪ್ರಸಾದ್, ವಿಶ್ವಾಸ್, ಮಲ್ಲೇಶ್, ಶೇಷಣ್ಣ, ಧೀರಜ್, ಯೋಗೇಶ್ ಮತ್ತಿತರರಿದ್ದರು.

ಇಂದು ಸಕಲೇಶಪುರ, ಬೇಲೂರು ತಾಲೂಕಿನಲ್ಲಿ ಶಾಲೆಗಳಿಗೆ ರಜೆ

ಹಾಸನ, ಜು.25–ಜಿಲ್ಲೆಯಲ್ಲಿ ವ್ಯಾಪಕ ಮಳೆ ಸುರಿಯುತ್ತಿರುವುದರಿಂದ ಸಕಲೇಶಪುರ ಮತ್ತು ಬೇಲೂರು ತಾಲೂಕಿನಲ್ಲಿ ಶನಿವಾರ (ಜು.26) ಶಾಲೆಗಳಿಗೆ ರಜೆ ನೀಡಿ ಜಿಲ್ಲಾಧಿಕಾರಿ ಲತಾಕುಮಾರಿ ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ವ್ಯಾಪಕ ಮಳೆಯಿಂದ ಸಕಲೇಶಪುರ ಮತ್ತು ಬೇಲೂರು ತಾಲೂಕಿನ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶನಿವಾರ ರಜೆ ಘೋಷಿಸಲಾಗಿದೆ. ನಾಳೆ (ಶನಿವಾರ)ಯೂ ಮಳೆ ಮುಂದುವರೆಯುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಡಿಪ್ಲೊಮಾ ಪ್ರವೇಶಕ್ಕೆ ದಿನಾಂಕ ವಿಸ್ತರಣೆ

ಮೈಸೂರು, ಜು. 25– ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2025–26ನೇ ಸಾಲಿನಲ್ಲಿ ಸರ್ಕಾರಿ ಕೋಟಾದಡಿ ಖಾಲಿ ಉಳಿದಿರುವ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ಆ. 11 ರವರೆಗೆ ವಿಸ್ತರಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ಅಂಕಗಳೊಂದಿಗೆ ಪಾಸಾದ ಅರ್ಹ ವಿದ್ಯಾರ್ಥಿನಿಯರು ಮೊದಲನೇ ವರ್ಷಕ್ಕೆ ಪ್ರವೇಶ ಪಡೆಯಬಹುದು. ಐಟಿಐ/ಪಿಯುಸಿ (ಸೈನ್ಸ್) ನಲ್ಲಿ ಪಾಸಾದ ವಿದ್ಯಾರ್ಥಿನಿಯರು ಡಿಪ್ಲೊಮಾ 3ನೇ ಸೆಮಿಸ್ಟರ್ ಕೋರ್ಸ್‌ಗಳಿಗೆ ನೇರವಾಗಿ ಪ್ರವೇಶವನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದ್ದು, ಪ್ರವೇಶ ಪ್ರಕ್ರಿಯೆಯನ್ನು ಆ. 11 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಶ್ರೀಮತಿ ಸವಿತ ಎಂ. ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಮುಖ್ಯಸ್ಥರು (ಮೊ. 9591650765), ವಿ.ಬಿ.ಲೋಕೇಶ, ಪ್ರಾಂಶುಪಾಲರು (ಮೊ. 8050216873) ಇವರುಗಳನ್ನು ಸಂಪರ್ಕಿಸಿ.

ನೀವು ಕಳ್ಳರನ್ನ ಹ್ಯಾಗೆ ಕಂಡುಹಿಡೀತೀರಾ...!

ಮಕ್ಕಳಿಗೆ ಪೊಲೀಸ್ ಠಾಣೆ, ಪೊಲೀಸರ ಕಾರ್ಯವೈಖರಿ ಪರಿಚಯ ಮಾಡಿಕೊಡುವ 'ತೆರೆದ ಮನೆ'; ಪ್ರತಿ ಗುರುವಾರ ಠಾಣೆಗಳಿಗೆ ಮಕ್ಕಳ ಭೇಟಿ

ಮೈಸೂರು, ಜು.25(ಜಿಎ)–ಪೊಲೀಸ್ ಇಲಾಖೆ ಮತ್ತಷ್ಟು ಜನಸ್ನೇಹಿ ಆಗುವುದರ ಜೊತೆಗೆ ಮಕ್ಕಳಿಗೆ ಕಾನೂನು ಕಲಿಕಾ ಮನೆಯಾಗುತ್ತಿದೆ. ಪೊಲೀಸರು ಹಾಗೂ ಅವರ ಕಾರ್ಯವೈಖರಿ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ 'ತೆರೆದ ಮನೆ' ಕಾರ್ಯಕ್ರಮವನ್ನು ಮೈಸೂರು ನಗರ ಪೊಲೀಸ್ ಠಾಣೆಗಳಲ್ಲಿ ಈಗ ಆರಂಭಿಸಲಾಗಿದೆ.

ಅಪರಾಧ ಮಾಡುವವರು ಹಾಗೂ ಸಮಸ್ಯೆಗೀಡಾದವರು ಮಾತ್ರ ಪೊಲೀಸ್ ಠಾಣೆಗೆ ಭೇಟಿ ನೀಡುತ್ತಾರೆ. ಕಳ್ಳರನ್ನು ಪೊಲೀಸರು ಹಿಡಿಯುತ್ತಾರೆ ಎಂಬುದು ಮಾತ್ರ ಮಕ್ಕಳ ಮನಸ್ಸಿನಲ್ಲಿರುತ್ತದೆ. ಪೋಷಕರು ಸಹ ಕೆಲವೊಮ್ಮೆ ಮಕ್ಕಳಿಗೆ ಒಮ್ಮೊಮ್ಮೆ ನಿಮ್ಮನ್ನು ಪೊಲೀಸರಿಗೆ ಹಿಡಿದು ಕೊಡುತ್ತೇನೆ ಎಂದು ಹೆದರಿಸುತ್ತಾರೆ. ಹೀಗೆ ಮಕ್ಕಳ ಮನಸ್ಸಲ್ಲಿ ಪೊಲೀಸರು ಮತ್ತು ಪೊಲೀಸ್ ಠಾಣೆ ಬಗ್ಗೆ ಒಂದು ವಿಧದ ಭಯ ಇದೆ. ಹಾಗಾಗಿ ಪೊಲೀಸ್ ಠಾಣೆಗಳು ಜನಸ್ನೇಹಿ, ನಮ್ಮೊಂದಿಗಿರುವ ಒಂದು ರಕ್ಷಣಾ ವ್ಯವಸ್ಥೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕಿದೆ.

ಪೊಲೀಸ್ ಮತ್ತು ಪೊಲೀಸ್ ಠಾಣೆಯ ಬಗ್ಗೆ ಮಕ್ಕಳ ಮನಸ್ಸಲಿರುವ ಗೊಂದಲ, ಭಯವನ್ನು ನಿವಾರಿಸಿ, ಅವರಲ್ಲಿ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಮೈಸೂರಿನ ದೇವರಾಜ, ಕೃಷ್ಣರಾಜ, ನರಸಿಂಹರಾಜ, ವಿಜಯನಗರ ಉಪವಿಭಾಗದ ಎಲ್ಲಾ ಠಾಣೆಗಳನ್ನು ಪ್ರತಿ ಗುರುವಾರ 'ತೆರೆದ ಮನೆ' ಪರಿಕಲ್ಪನೆಯಡಿ ಮಕ್ಕಳಿಗೆ ಅರಿವು ಮೂಡಿಸಲಾಗುತ್ತಿದೆ.



ಮೈಸೂರಿನ ವಿಜಯನಗರ ಉಪವಿಭಾಗದ ವ್ಯಾಪ್ತಿಯ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಶಾಲಾ ಮಕ್ಕಳಿಗೆ 'ತೆರೆದ ಮನೆ' ಕಾರ್ಯಕ್ರಮದಡಿ ಅರಿವು ಮೂಡಿಸುತ್ತಿರುವುದು.

> ಉನ್ನತ ಅಧಿಕಾರಿಗಳ ಆದೇಶದಂತೆ 'ತೆರೆದ ಮನೆ' ಕಾರ್ಯಕ್ರಮವನ್ನು ಎಲ್ಲಾ ಠಾಣೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಠಾಣೆಯಲ್ಲಿನ ಚಟುವಟಿಕೆ, ಪೊಲೀಸರ ಕಾರ್ಯವೈಖರಿ ಹಾಗೂ ದೂರು ನೀಡುವ ವಿಧಾನ ಸೇರಿದಂತೆ ಪೊಲೀಸ್ ಠಾಣೆ ಹೇಗೆ ಕಾರ್ಯನಿರ್ವಹಿಸುತ್ತದೆ. ಸೈಬರ್ ವಂಚನೆ, ಪೊಲೀಸ್ ಸಹಾಯವಾಣಿ 112 ಬಗ್ಗೆ ಹಿಗೆ ಸರ್ಕಾರಿ, ಖಾಸಗಿ ಶಾಲೆಗಳ ಮಕ್ಕಳಿಗೆ ಕಾನೂನಿನ ಅರಿವು ಮೂಡಿಸಲಾಗುತ್ತಿದೆ.
>
> -ಆರ್.ಎನ್.ಬಿಂದುಮಣಿ, ಡಿಸಿಪಿ


ಅಂದು ಶಾಲೆಗಳಿಂದ ಮಕ್ಕಳನ್ನು ಠಾಣೆಗೆ ಕರೆತಂದು ಅವರಿಗೆ ಠಾಣೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಪರಿಚಯ ಮಾಡಿಕೊಡಲಾಗುತ್ತದೆ. ನಂತರ ಠಾಣೆ ಯಲ್ಲಿರುವ ವಿವಿಧ ವಿಭಾಗಗಳ ಬಗ್ಗೆ ತಿಳಿಸಿಕೊಟ್ಟು, ಎಫ್‌ಐಆರ್ ಹಾಗೂ ಇತರ ವಿಚಾರಗಳ ಬಗ್ಗೆ ಸವಿವರವಾಗಿ ಮಾಹಿತಿ ನೀಡಿ, ಠಾಣೆಯ ಸರಹದ್ದಿನ ಬಗ್ಗೆ ತಿಳಿಸಿ ಕೊಡಲಾಗುತ್ತಿದೆ. ಯಾವುದಾದರೂ ಅಪರಾಧ ಕೃತ್ಯದ ಬಗ್ಗೆ ಮಾಹಿತಿ ತಿಳಿದ ತಕ್ಷಣ ಸಹಾಯವಾಣಿ 112ಗೆ ಕರೆ ಮಾಡಿದರೆ, ಪೊಲೀಸರು ಹೇಗೆ ಸ್ಪಂದಿಸುತ್ತಾರೆ ಎಂಬುದು ಸೇರಿದಂತೆ ಪೊಲೀಸರ ಕಾರ್ಯವೈಖರಿಯ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ.

ಕೊರೊನಾ ನಂತರ ಮಕ್ಕಳು ಹೆಚ್ಚಿನ ಸಮಯವನ್ನು ಮೊಬೈಲ್‌ನೊಂದಿಗೆ ಕಳೆಯುತ್ತಿರುವುದರಿಂದ ಇತ್ತೀಚೆಗೆ ನಡೆಯುತ್ತಿರುವ ಸೈಬರ್ ವಂಚನೆಯ ಬಗ್ಗೆಯೂ ಪೊಲೀಸರು ಮಾಹಿತಿ ನೀಡಿ, ಸೈಬರ್ ಸಹಾಯವಾಣಿ ಸಂಖ್ಯೆ 1930ರ ಬಗ್ಗೆಯೂ ಅರಿವು ಮೂಡಿಸುತ್ತಿದ್ದಾರೆ.

ಪೊಲೀಸರ ಈ ವಿಭಿನ್ನ ಪ್ರಯತ್ನದಿಂದ ಮಕ್ಕಳು ಪೊಲೀಸ್ ಠಾಣೆಯಲ್ಲಿ ನಡೆಯುವ ಚಟುವಟಿಕೆ ಮತ್ತು ಪೊಲೀಸರ ಕಾರ್ಯವೈಖರಿ ಕುರಿತು ಕುತೂಹಲದಿಂದ ಮಾಹಿತಿ ಪಡೆದುಕೊಂಡು ತಮ್ಮಲಿನ ಭಯದಿಂದ ಹೊರ ಬಂದು ಕಾನೂನಿನ ಅರಿವು ಪಡೆಯುತ್ತಿದ್ದಾರೆ.

> ಮಕ್ಕಳು ಬಹಳ ಉತ್ಸಾಹದಿಂದ ತೆರೆದ ಮನೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಠಾಣೆ ಹಾಗೂ ಪೊಲೀಸರ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಎಫ್‌ಐಆರ್ ಬಗ್ಗೆ ಪ್ರಶ್ನಿಸಿದರು. ಅದರ ಬಗ್ಗೆ ವಿವರವಾಗಿ ತಿಳಿಸಲಾಯಿತು. ಹಾಗೇ ಕಳ್ಳರನ್ನು ಹೇಗೆ ಪತ್ತೆ ಹಚ್ಚುತ್ತೀರಾ ಎಂದು ಕೇಳಿದರು. ಮೊದಲು ಕೃತ್ಯದ ಬಗ್ಗೆ ಮಾಹಿತಿ ಪಡೆದು ನಂತರ ಈ ಹಿಂದೆ ಇಂತಹ ಅಪರಾಧ ನಡೆದಿದೆಯೇ, ಶಂಕಿತ ನಮ್ಮ ದಾಖಲೆಯಲ್ಲಿ ಇದ್ದಾನ ಎಂದು ಪರಿಶೀಲನೆ ನಡೆಸಲಾಗುತ್ತದೆ. ತದನಂತರ ಮೊಬೈಲ್ ಲೋಕೇಶನ್ ಮೂಲಕವೂ ಪತ್ತೆ ಹಚ್ಚಬಹುದಾಗಿದೆ ಎಂದು ವಿವರಿಸಲಾಗುತ್ತಿದೆ.
>
> -ದಿವಾಕರ್, ಇನ್ಸ್‌ಪೆಕ್ಟರ್, ಮಂಡಿ ಪೊಲೀಸ್ ಠಾಣೆ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.07.2025 ಶನಿವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 9ರಿಂದ 10.30 ರವರೆಗೆ

■ **ಸಮಸ್ತ ಜೈನ ಸಮಾಜ** : ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಮಂಗಳ ಪುರಪ್ರವೇಶ ಮತ್ತು ಗುರುವಂದನಾ ಕಾರ್ಯಕ್ರಮ, ಬೆಳಗ್ಗೆ 8ಕ್ಕೆ ಅರಮನೆ ಬ್ರಹ್ಮಪುರಿ ಮಹಾದ್ವಾರದಲ್ಲಿ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಪುರಪ್ರವೇಶ, ಬೆಳಗ್ಗೆ 8.45ಕ್ಕೆ ಕೋಟೆ ಶ್ರೀ ಶಾಂತಿನಾಥ ಬಸದಿಯಲ್ಲಿ ತೀರ್ಥಂಕರರಿಗೆ ಅಭಿಷೇಕ, ಪೂಜೆ, ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಕೋಟೆ ಬಸದಿಯಿಂದ ಎಂ.ಎಲ್.ಜೈನ್ ಬೋರ್ಡಿಂಗ್ ಹೋಂವರೆಗೆ ಮೆರವಣಿಗೆ, ಮಧ್ಯಾಹ್ನ 2ಕ್ಕೆ ಎಂ.ಎಲ್. ಜೈನ್ ಬೋರ್ಡಿಂಗ್ ಹೋಂನಲ್ಲಿ ಸಭಾ ಕಾರ್ಯಕ್ರಮ, ಸಾನ್ನಿಧ್ಯ : 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರು, ಉಪಸ್ಥಿತರು: ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು, ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.

■ **ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ** : ಕಾರ್ಗಿಲ್ ವಿಜಯೋತ್ಸವ, ಸ್ಥಳ: ಮೆಟ್ರೋಪೋಲ್ ಸರ್ಕಲ್, ಬೆಳಗ್ಗೆ 9ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ** : ಪತ್ರಕರ್ತರ ಕ್ರೀಡಾಕೂಟ, ಉದ್ಘಾಟನೆ : ಶಾಸಕ ಅನಿಲ್ ಚಿಕ್ಕಮಾದು, ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ : ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಸಂಯೋಜಕ ಆರ್.ಕೆ. ಹರಿಕೃಷ್ಣ ಕುಮಾರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ದೀಪಕ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ. ಸಿ. ವೆಂಕಟೇಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಉದ್ಯಮಿ ಗಗನ್‌ದೀಪ್, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಭಾಸ್ಕರ್, ಸ್ಥಳ: ಓವಲ್ ಮೈದಾನ, ಕ್ರಾಫರ್ಡ್ ಹಾಲ್ ಎದುರು, ಬೆಳಗ್ಗೆ 9.30ಕ್ಕೆ.

■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ, ಮೈಸೂರು ವಿಭಾಗ** : ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಮನೋರಖ್ಖಿತ ಬಂತೇಜಿ, ಜ್ಞಾನಪ್ರಕಾಶ ಸ್ವಾಮೀಜಿ, ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ಎಚ್.ಎಂ. ನಾರಾಯಣ, ಪ್ರಾಸ್ತಾವಿಕ ನುಡಿ : ಸಂಘದ ರಾಜ್ಯಾಧ್ಯಕ್ಷ ಡಾ. ಡಿ. ಚಂದ್ರಶೇಖರಯ್ಯ, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಕೀಟಿಬಕುಷ್ಠ (ಸೋರಿಯಾಸಿಸ್), ಮಕ್ಕಳಲ್ಲಿ ಕಂಡುಬರುವ ನೆಗಡಿ, ಕೆಮ್ಮು, ಅಸ್ತಮಾ ಮತ್ತು ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕ, ರೋಟರಿ ಕ್ಲಬ್ ಆಫ್ ಹೆರಿಟೇಜ್** : ಕಾರ್ಗಿಲ್ ವಿಜಯ್ ದಿವಸದ ಅಂಗವಾಗಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕರಾದ ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ಪ್ರಭಾಕರ್, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ರೊ.ಎಂ.ಎಸ್.ರಾಜು, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಡಾ. ಕೃಷ್ಣಮೂರ್ತಿ ಶತಮಾನೋತ್ಸವ ಸಮಿತಿ** : ಡಾ. ಕೆ. ಕೃಷ್ಣಮೂರ್ತಿ ಜನ್ಮ ಶತಾಬ್ದಿ ಸಮಾರಂಭ, 'ಕೃಷ್ಣಾಲೋಕ' ಸಂಸ್ಮರಣಾ ಗ್ರಂಥ ಮತ್ತು 'ಕಾವ್ಯತತ್ತ್ವೋಲ್ಲೇಖ' ಗ್ರಂಥಗಳ ಲೋಕಾರ್ಪಣೆ ಹಾಗೂ ಸಾಹಿತ್ಯ ಸೇವೆಗಾಗಿ ಶ್ರಮಿಸಿದ ಸಾರ್ಥಕ ಮಹನೀಯರಿಗೆ ಸನ್ಮಾನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ವಿದ್ವಾಂಸರಾದ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು : ಡಾ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕರಾದ ಡಾ. ಕೆ. ಲೀಲಾಪ್ರಕಾಶ್, ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಪ್ರಾಸ್ತಾವಿಕ ನುಡಿ : ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಕೃತಿಗಳ ಲೋಕಾರ್ಪಣೆ : ಕೇಂದ್ರೀಯ ಸಂಸ್ಕೃತ ವಿವಿ, ನವದೆಹಲಿ ಕುಲಪತಿ ಡಾ. ಶ್ರೀನಿವಾಸ ವರಖೇಡಿ, ಕೃತಿ ಕುರಿತು : ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ವಿದ್ವಾಂಸ ಶತಾವಧಾನಿ ಡಾ. ಆರ್. ಗಣೇಶ್, ಮುಖ್ಯ ಅತಿಥಿಗಳು : ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಶ್ರೀಮತಿ ಡಾ. ಅಹಲ್ಯಾ ಶರ್ಮಾ, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಸ್ಥಳ: ನಿತ್ಯೋತ್ಸವ ಕನ್ವೆನ್ಷನ್ ಹಾಲ್, ಬಲ್ಲಾಳ್ ಸರ್ಕಲ್, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಮತ್ತು ನೌಕರರ ಕಲ್ಯಾಣ ಸಂಘ** : ಸಂಘದ ಉದ್ಘಾಟನೆ ಹಾಗೂ ರಾಜ್ಯ ಮಟ್ಟದ ಸಮಾವೇಶ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಭಾವಚಿತ್ರಕ್ಕೆ ಪುಷ್ಪಾರ್ಚನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಾನ್ನಿಧ್ಯ : ಡಾ. ಜ್ಞಾನಪ್ರಕಾಶ ಸ್ವಾಮೀಜಿ, ಉಪಸ್ಥಿತರು : ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ, ಅಧ್ಯಕ್ಷತೆ: ಸಂಘದ ರಾಜ್ಯಾಧ್ಯಕ್ಷ ಎಂ. ಸುರೇಶ್ ಕುಮಾರ್, ಮುಖ್ಯ ಅತಿಥಿಗಳು : ಸಚಿವರಾದ ಡಾ. ಜಿ. ಪರಮೇಶ್ವರ್, ಸತೀಶ್ ಜಾರಕಿ ಹೊಳಿ, ಕೆ.ಹೆಚ್. ಮುನಿಯಪ್ಪ, ಕೆ.ಎನ್. ರಾಜಣ್ಣ, ತಂಗಡಗಿ ಶಿವರಾಜ್ ಸಂಗಪ್ಪ, ಆರ್.ಬಿ. ತಿಮ್ಮಾಪೂರ, ಸಂಸದರಾದ ಸುನೀಲ್ ಬೋಸ್, ಇ. ತುಕಾರಾಂ, ರಾಧಾಕೃಷ್ಣ ದೊಡ್ಡಮನಿ, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರದು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿ ರಾವ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಜಿ. ಪುಷ್ಪಲತಾ ಹಾಗೂ ಸಿ.ವಿಶ್ವನಾಥ್, ವ್ಯಾಖ್ಯಾನ– ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ, ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 9.05 ಸರ್ಕೋಮಾ– ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ–ಮಕ್ಕಳ ಸಾಹಿತ್ಯರಂಗ ಮಕ್ಕಳ ಪತ್ರ ಮತ್ತು ಬರಹಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ .ಬಿ ಹಾಗೂ ಕವಿತ ಬಿ.ಜಿ., 4.00 ನಾಟಕ ಕೊನೆ ಅರಿಯದ ಪಯಣ, ರಚನೆ–ಅಲಕಾ ಕಟ್ಟೆಮನೆ, ನಿರ್ಮಾಣ–ಶ್ರೀನಿವಾಸ್ ಪ್ರಸಾದ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಕೃಷಿ ಹಾಗೂ ಮಹಿಳೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಡಾ. ಆರ್. ಪಿ. ಛಾಯಾ ಮತ್ತು ಮಂಡ್ಯ ತಾಲೂಕು ಶಿವಳ್ಳಿ ಗ್ರಾಮದ ಹರೀಶರವಿಕುಮಾರ್, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಇಸ್ ಸಪ್ತಾಹ್ ಮೆ ಸಂಸದ್, 8.15 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮನ್ನದ್ ರಾವ್ –ಸ್ಯಾಕ್ಸೋಫೋನ್ ವಾದನ

■ **ವಿದ್ಯಾವರ್ಧಕ ಸಂಘ, ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು** : ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಎನ್.ನಾಗರಾಜು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು** : ಪಠ್ಯೇತರ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ, ಉದ್ಘಾಟನೆ : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಎಲ್. ಚಿದಾನಂದಕುಮಾರ್, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಜಿ. ಶಶಿಧರ ಪ್ರಸಾದ್, ಮುಖ್ಯ ಅತಿಥಿಗಳು : ಹುಣಸೂರು ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಎ. ರಾಮೇಗೌಡ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಕಾರ್ಯದರ್ಶಿ ಶಿವಸುಂದರ ಸತ್ಯೇಂದ್ರ, ಜಿ. ರಮೇಶ್, ಸ್ಥಳ: ಶ್ರೀ ಕುವೆಂಪು ರಂಗ ಮಂದಿರ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು** : ಪದವಿ ಪ್ರದಾನ ಸಮಾರಂಭ, ಪದವಿ ಪ್ರದಾನ ಭಾಷಣ : ಆದಿಚುಂಚನಗಿರಿ ವಿವಿ ಕುಲಪತಿ ಡಾ. ಎಂ.ಎ. ಶೇಖರ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಪ್ರಿನ್ಸಿಪಾಲ್ ಡಾ.ಬಿ.ಆರ್. ಜಯಕುಮಾರಿ, ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರೀಮತಿ ಶ್ರುತಿ ಪೂಣಚ್ಚ, ಡೀನ್ ಡಾ. ಹೆಚ್. ಶ್ರೀಧರ್, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಕನ್ನಡ ವೇದಿಕೆ** : ವಿಶ್ವ ವೈದ್ಯ ದಿನಾಚರಣೆ ಅಂಗವಾಗಿ ವೈದ್ಯರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಪ್ರಧಾನ ಭಾಷಣ : ಡಾ.ಹೆಚ್.ಪಿ. ಶೋಭಾ, ಉಪಸ್ಥಿತರು : ಡಾ. ವಿ. ಲಕ್ಷ್ಮೀನಾರಾಯಣ್, ಡಾ. ಕುಮಾರಸ್ವಾಮಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಸುರುಚಿ ರಂಗ ಮನೆ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 890, ಕಥೆ ಹೇಳುವವರು: ಶ್ರೀಮತಿ ಜಿ.ಎಸ್.ಕಲಾವತಿ ಮಧುಸೂದನ್, ಲೇಖಕಿ, ಸಂಸ್ಥಾಪಕ ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸ್ಪಂದನ ಸಿರಿ ವೇದಿಕೆ, ಹಾಸನ, ಸ್ಥಳ: ಸುರುಚಿ ರಂಗ ಮನೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್** : ಯುವ ಸೌರಭ ನೂತನ ಮಾಲಿಕೆ, ರಾಜ್ಯದ ಯುವ ಕಲಾವಿದರ ಪ್ರತಿಭಾ ಪ್ರದರ್ಶನ, ಮುಖ್ಯ ಅತಿಥಿಗಳು : ಮೃದಂಗ ಕಲಾವಿದ ಗಾನಕಲಾಭೂಷಣ ವಿದ್ವಾನ್ ಜಿ.ಎಸ್. ರಾಮಾನುಜನ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ವಿದ್ವಾನ್ ಅನೂರು ಫಣೀಂದ್ರ ಶರ್ಮ ಅವರಿಂದ ಗಾಯನ, ವಿದ್ವಾನ್ ಅನಿರುದ್ಧ ಭಾರದ್ವಾಜ್ –ವಯೋಲಿನ್, ವಿದ್ವಾನ್ ನಾಗೇಂದ್ರ ಪ್ರಸಾದ್ – ಮೃದಂಗ, ಸ್ಥಳ: ಗಾನಭಾರತೀಯ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ)** : ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀಕಾರ್ಯಸ್ವಾಮಿ ಮಠದ ಶ್ರೀ ಮಹೇಶ್ವರ ಸ್ವಾಮೀಜಿ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಮತ್ತು ಎಸ್‌ವಿವೈಎಂ:** 8ನೇ ಮೈಸೂರು ವಿಜ್ಞಾನ ನಾಟಕೋತ್ಸವ, ಸಂಜೆ 5 ರಿಂದ 2025 ರಲ್ಲಿ ಭಾರತೀಯ ಮಹಿಳಾ ವಿಜ್ಞಾನ: ಒಂದು ಸಂವಾದ, ಉಪಸ್ಥಿತರು : ವಿಜ್ಞಾನ ಪತ್ರಕರ್ತೆ ಕು. ನಂದಿತಾ ಜಯರಾಜ್, ಹಿರಿಯ ಸಂಪಾದಕಿ ಡಾ.ಬಿತಾಸ್ತಾ ದಾಸ್, ಬಿ.ಎಸ್. ಕೃಷ್ಣಮೂರ್ತಿ ಅವರಿಂದ ಗಣಿತ ಕುಣಿತ, ಸಂಜೆ 6.30 ರಿಂದ ಕಲಾಸುರುಚಿ ರಂಗ ತಂಡದಿಂದ ರಾಮನ್ : ಬೆಳಕು, ಶಬ್ದ, ಸಿಡಿಲು ನಾಟಕ ಪ್ರದರ್ಶನ, ರಚನೆ : ಶಶಿಧರ ಡೋಂಗ್ರೆ, ನಿರ್ದೇಶನ : ಪ್ರೊ. ಎಚ್.ಎಸ್. ಉಮೇಶ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ.

■ **ಜನಜಾಗರಣ ಟ್ರಸ್ಟ್, ಮಂಥನ** : ಭುಗಿಲು ಕೃತಿ ಲೋಕಾರ್ಪಣಾ ಸಮಾರಂಭ, ಪುಸ್ತಕ ಬಿಡುಗಡೆ : ರಾಯಚೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಹರೀಶ್ ರಾಮಸ್ವಾಮಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜ್ಯೇಷ್ಠ ಪ್ರಚಾರಕ ದಾ.ಮ. ರವೀಂದ್ರ ಅವರೊಂದಿಗೆ ಪುಸ್ತಕ ಕುರಿತು ಸಂವಾದ, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಶಾಲೆ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷತ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 26 ಶನಿವಾರ 2025

ಸಂಪುಟ: 46 | ಸಂಚಿಕೆ: 100 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಖಾಸಗಿ ಮನೆಯಲ್ಲಿ ಮೈಸೂರು ಪಾಲಿಕೆ
ಇ–ಖಾತೆ ದಾಖಲೆಗಳು ಪತ್ತೆ!

- ಲಂಚದ ಹಾವಳಿ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳ ದಾಳಿ ವೇಳೆ ಅಕ್ರಮ ಜಾಲ ಬೆಳಕಿಗೆ
- ಲೋಕಾಯುಕ್ತ ಅಧಿಕಾರಿಗಳಿಂದ ಪಾಲಿಕೆ ವಲಯ ಕಚೇರಿಗಳು, ವಿವಿಧ ಪಪಂ, ಹೂಟಗಳ್ಳಿ ನಗರ ಸಭೆಗೆ ದಾಳಿ; ದಾಖಲೆ ಪರಿಶೀಲನೆ
- ಧೂಳಿಡಿದಿರುವ ಸಾವಿರಾರು ಇ–ಖಾತ ಅರ್ಜಿಗಳು; ಹಣ ನೀಡಿದರೆ ಇ–ಖಾತೆ!

ಮೈಸೂರು, ಜು.25(ಬಿಎಲ್‌ಯು)– ಇ–ಖಾತೆ ನೀಡಲು ನಗರ ಪಾಲಿಕೆಯಲ್ಲಿ ಲಂಚ ತಾಂಡವವಾಡುತ್ತಿದೆ. ಮಧ್ಯವರ್ತಿಗಳ ಹಾವಳಿ ಮಿತಿ ಮೀರಿದೆ ಎಂದು ವ್ಯಾಪಕ ದೂರುಗಳು ಕೇಳಿಬರುತ್ತಿವೆ. ಅದಕ್ಕೆ ಪುಷ್ಟಿ ನೀಡುವಂತೆ ಶುಕ್ರವಾರ ಲೋಕಾಯುಕ್ತ ಪೊಲೀಸರು ನಡೆಸಿದ ದಾಳಿ ವೇಳೆ ಖಾಸಗಿ ಮನೆಯೊಂದರಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಇ–ಖಾತೆಗೆ ಸಂಬಂಧಿಸಿದ ದಾಖಲೆಗಳು ಪತ್ತೆಯಾಗಿವೆ.

ವ್ಯಾಪಕ ದೂರುಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಇಂದು ಐದು ನಗರ ಪಾಲಿಕೆ ವಲಯ ಕಚೇರಿಗಳು, 3 ಪಟ್ಟಣ ಪಂಚಾಯ್ತಿ ಹಾಗೂ 1 ನಗರ ಸಭೆ ಸೇರಿದಂತೆ ಮೈಸೂರು ನಗರ ಹಾಗೂ ಸುತ್ತಮುತ್ತ 10 ಕಡೆ ಏಕ ಕಾಲಕ್ಕೆ ದಾಳಿ ನಡೆಸಿದರು. ಮೈಸೂರು ನಗರ ಪಾಲಿಕೆಯ ವಲಯ ಕಚೇರಿ–2, 3, 7, 8, 9, ಶ್ರೀರಾಂಪುರ, ಬೋಗಾದಿ, ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಮತ್ತು ಹೂಟಗಳ್ಳಿ ನಗರ ಸಭೆ ಕಚೇರಿಗಳ ಮೇಲೆ ದಾಳಿ ನಡೆಸಲಾಯಿತು. ಈ ವೇಳೆ ಕಚೇರಿ ಕೆಲಸಕ್ಕಾಗಿ ಬಂದಿದ್ದ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ದಾಖಲೆಗಳನ್ನು ಪರಿಶೀಲಿಸಲಾಯಿತು.

ಬೆಚ್ಚಿ ಬೀಳುವಂತಹ ವಿಷಯವೆಂದರೆ ನಗರ ಪಾಲಿಕೆಗೆ ಸೇರಿದ ಇ–ಖಾತೆಗೆ ಸಂಬಂಧಿಸಿದ ಹಲವು ದಾಖಲೆಗಳು ಖಾಸಗಿ ಮನೆಯೊಂದರಲ್ಲಿ ಪತ್ತೆ ಹಚ್ಚಲಾಗಿದ್ದು, ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಈ ಮನೆ ಯಾರಿಗೆ ಸೇರಿದ್ದು? ಪಾಲಿಕೆಯಲ್ಲಿ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯದ್ದೇ ಅಥವಾ ಅಧಿಕಾರಿ ಯಾರಾದರೂ ಈ ಮನೆಯನ್ನು ಬಳಸುತ್ತಿದ್ದಾರೆಯೇ? ಎಂಬುದರ ಬಗ್ಗೆ ತನಿಖೆಯ ನಂತರವೇ ತಿಳಿಯಬೇಕಾಗಿದೆ.

ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ಪ್ರತೀ ಕಚೇರಿಯಲ್ಲೂ 500 ರಿಂದ 2000 ಇ–ಖಾತಾ ಅರ್ಜಿಗಳು ವಿಲೇವಾರಿ ಆಗದೇ ಧೂಳು ಹಿಡಿಯುತ್ತಿದ್ದುದು ಕಂಡು ಬಂದಿದೆ. ಲಂಚದ ಹಣ ತಲುಪದ ಕಾರಣ ಈ ಅರ್ಜಿಗಳನ್ನು ಅಧಿಕಾರಿಗಳು ವಿಲೇವಾರಿ ಮಾಡದೇ ಇಟ್ಟುಕೊಂಡಿರಬಹುದೇ ಎಂಬ ನಿಟ್ಟಿನಲ್ಲಿ ತನಿಖೆ ನಡೆಯುತ್ತಿದೆ. ಕಾರ್ಯಾಚರಣೆ ಅಂತಿಮಗೊಂಡು ಸಮಗ್ರ ಪರಿಶೀಲನೆ ನಂತರ ನಗರ ಪಾಲಿಕೆ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು, ಪಟ್ಟಣ ಪಂಚಾಯ್ತಿ ಮತ್ತು ನಗರ ಸಭೆ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಪ್ರಧಾನ ಕಚೇರಿಗೆ ■ 10ನೇ ಪುಟಕ್ಕೆ




ಪಾಲಿಕೆ ವಲಯ ಕಚೇರಿ–2ರಲ್ಲಿ ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿರುವುದು.

ಲಂಚ ಕೊಡದೆ ಇ–ಖಾತೆ ನೀಡುತ್ತಿಲ್ಲ ಎಂಬ ಸಾರ್ವಜನಿಕರ ದೂರಿನ ಮೇರೆಗೆ ಮೈಸೂರು ನಗರ ಪಾಲಿಕೆ ವಲಯ ಕಚೇರಿ, ಪಟ್ಟಣ ಪಂಚಾಯ್ತಿ, ನಗರ ಸಭೆ ಸೇರಿದಂತೆ 10 ಸ್ಥಳಗಳಲ್ಲಿ ಇಂದು ದಾಳಿ ನಡೆಸಲಾಯಿತು. ಪ್ರತಿಯೊಂದು ಕಚೇರಿಯಲ್ಲೂ ಕನಿಷ್ಠ 500 ರಿಂದ 2000ದ ತನಕ ಇ–ಖಾತೆ ಅರ್ಜಿಗಳು ವಿಲೇವಾರಿ ಆಗದೇ ಬಾಕಿ ಉಳಿದಿವೆ. ಎಲ್ಲಾ ರೀತಿಯ ದಾಖಲೆಗಳು ಸರಿ ಇದ್ದರೂ ಇ–ಖಾತೆ ಮಾಡಿಕೊಟ್ಟಿಲ್ಲ. ಮೈಸೂರಿನ ಖಾಸಗಿ ಮನೆಯೊಂದರಲ್ಲಿ ಪಾಲಿಕೆಯ ಇ–ಖಾತೆಗೆ ಸಂಬಂಧಿಸಿದ ದಾಖಲಾತಿಗಳು ಪತ್ತೆಯಾಗಿವೆ. ಈ ಕುರಿತು ನಮ್ಮ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ನಮ್ಮ ಕಾರ್ಯಾಚರಣೆ ಮುಗಿದ ನಂತರ ವಾಸ್ತವತೆ ಆಧರಿಸಿ ನಗರ ಪಾಲಿಕೆಯ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು, ಪಟ್ಟಣ ಪಂಚಾಯ್ತಿ ಮತ್ತು ನಗರಸಭೆ ಅಧಿಕಾರಿಗಳ ಕುರಿತಂತೆ ಲೋಕಾಯುಕ್ತ ಪ್ರಧಾನ ಕಚೇರಿಗೆ ವರದಿ ಸಲ್ಲಿಸಲಾಗುವುದು. ಅದನ್ನು ಆಧರಿಸಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ನೋಡಬೇಕಾಗಿದೆ.

–ಟಿ.ಜೆ.ಉದೇಶ್, ಮೈಸೂರು ಲೋಕಾಯುಕ್ತ ಎಸ್ಪಿ

ನರೇಂದ್ರ ಮೋದಿ ಭಾರತದ ಎರಡನೇ ದೀರ್ಘಾವಧಿ ಪ್ರಧಾನಿ



ನರೇಂದ್ರ ಮೋದಿ



ಇಂದಿರಾ ಗಾಂಧಿ

ನವದೆಹಲಿ, ಜು.25– ಪ್ರಧಾನಿಯಾಗಿ 4,078 ದಿನಗಳು ಪೂರ್ಣಗೊಳಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ ದಾಖಲೆ ಮುರಿದಿದ್ದಾರೆ. ಭಾರತದ ಇತಿಹಾಸದಲ್ಲಿ ಅತಿ ಹೆಚ್ಚು ಕಾಲ ಪ್ರಧಾನಿಯಾಗಿರುವ ಎರಡನೇ ವ್ಯಕ್ತಿ ಮೋದಿ.

ಪ್ರಧಾನಿ ನರೇಂದ್ರ ಮೋದಿ ಇಂದಿಗೆ 4,078 ದಿನಗಳನ್ನು ಪೂರ್ಣೈಸಿದ್ದು, 1966ರ ಜನವರಿ 24ರಿಂದ 1977ರ ಮಾರ್ಚ್ 24ರ ವರೆಗೆ ಇಂದಿರಾ ಗಾಂಧಿಯವರು 4,077 ದಿನಗಳ ಕಾಲ ಪ್ರಧಾನಿ ಆಗಿದ್ದರು. ಸತತ ಅತೀ ಹೆಚ್ಚು ಕಾಲ ಸೇವೆ ಸಲ್ಲಿಸಿದ ಎರಡನೇ ಪ್ರಧಾನಿಯಾಗಿ ಮೋದಿ ದಾಖಲೆ ಬರೆದರೆ, ಮೊದಲ ಸ್ಥಾನದಲ್ಲಿ ■ 10ನೇ ಪುಟಕ್ಕೆ

ಮೋದಿ 10 ಸಾಧನೆಗಳು

- ಭಾರತದ ಸ್ವಾತಂತ್ರ್ಯದ ನಂತರ ಜನಿಸಿದ ಮೊದಲ ಮತ್ತು ಏಕೈಕ ಪ್ರಧಾನಿ
- ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಕಾಂಗ್ರೆಸ್ಸೇತರ ಪ್ರಧಾನಿ
- ಹಿಂದಿ ಮಾತನಾಡದ ರಾಜ್ಯದಿಂದ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪ್ರಧಾನಿ
- ಎಲ್ಲಾ ಪ್ರಧಾನಿಗಳಲ್ಲಿ ಅತಿ ಹೆಚ್ಚು ಕಾಲ ಚುನಾಯಿತ ಸರ್ಕಾರದ (ರಾಜ್ಯ + ಕೇಂದ್ರ) ಮುಖ್ಯಸ್ಥರು
- ಎರಡು ಪೂರ್ಣ ಅವಧಿಗಳನ್ನು ಪೂರ್ಣಗೊಳಿಸಿದ ಮೊದಲ ಮತ್ತು ಏಕೈಕ ಕಾಂಗ್ರೆಸ್ಸೇತರ ಪ್ರಧಾನಿ
- ಎರಡು ಬಾರಿ ಮರು ಆಯ್ಕೆಯಾದ ಮೊದಲ ಮತ್ತು ಏಕೈಕ ಕಾಂಗ್ರೆಸ್ಸೇತರ ಪ್ರಧಾನಿ
- ಸ್ವಂತವಾಗಿ ಲೋಕಸಭೆ ಬಹುಮತವನ್ನು ಗೆದ್ದ ಮೊದಲ ಮತ್ತು ಏಕೈಕ ಕಾಂಗ್ರೆಸ್ಸೇತರ ನಾಯಕ
- ಇಂದಿರಾ ಗಾಂಧಿ (1971) ನಂತರ ಬಹುಮತದೊಂದಿಗೆ ಮರು ಆಯ್ಕೆಯಾದ ಮೊದಲ ಹಾಲಿ ಪ್ರಧಾನಿ
- ನೆಹರೂ ಹೊರತುಪಡಿಸಿ ಸತತ ಮೂರು ರಾಷ್ಟ್ರೀಯ ಚುನಾವಣೆಗಳನ್ನು ಗೆದ್ದ ಏಕೈಕ ಪ್ರಧಾನಿ
- ಪಕ್ಷದ ನಾಯಕರಾಗಿ ಸತತ ಆರು ಚುನಾವಣೆಗಳನ್ನು ಗೆದ್ದ ಭಾರತದ ಏಕೈಕ ನಾಯಕ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆ ಅಣಕು ಫಲಿತಾಂಶ ಪ್ರಕಟ

ಬೆಂಗಳೂರು, ಜು. 25(ಕೆಎಂಶಿ)– ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಣಕು ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇಂದಿಲ್ಲಿ ಪ್ರಕಟಿಸಿದೆ.

ಅಭ್ಯರ್ಥಿಗಳು ಕೆಇಎ ಜಾಲತಾಣದ ಲಿಂಕ್ ಮೂಲಕ ಫಲಿತಾಂಶ ಪಡೆಯಬಹುದಾಗಿದೆ. ಅರ್ಹ ಅಭ್ಯರ್ಥಿಗಳ ಇಚ್ಛೆ, ಆಯ್ಕೆಗಳನ್ನು ದಾಖಲಿಸಿ, ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಅನುಸಾರ ಮೊದಲನೇ ಸುತ್ತಿನ ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿಎಸ್‌ಸಿ (ನರ್ಸಿಂಗ್), ಬಿ–ಫಾರ್ಮ, ಫಾರ್ಮಾ–ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ ಪ್ರವೇಶಕ್ಕೆ ಜುಲೈ 22ರ ಸಂಜೆ 6 ಗಂಟೆವರೆಗೆ ದಾಖಲಿಸಿರುವ ಇಚ್ಛೆ, ಆಯ್ಕೆಗಳನ್ನು ಅಣಕು ಸೀಟು ಹಂಚಿಕೆ ಫಲಿತಾಂಶಕ್ಕೆ ಪರಿಗಣಿಸಲಾಗಿದೆ.

ಆಯುರ್ವೇದ, ಯುನಾನಿ, ನ್ಯಾಚುರೋಪತಿ, ಯೋಗಾ ಮತ್ತು ಹೋಮಿಯೋಪತಿ ಕೋರ್ಸ್‌ಗಳಿಗೆ ಸೀಟು ಮ್ಯಾಟ್ರಿಕ್ಸ್ ಇನ್ನೂ ಬಂದಿರದ ಕಾರಣ ಅಣಕು ಸೀಟು ಹಂಚಿಕೆಗೆ ಈ ಕೋರ್ಸ್‌ಗಳನ್ನು ಪರಿಗಣಿಸಿಲ್ಲ, ಸೀಟ್ ಮ್ಯಾಟ್ರಿಕ್ಸ್ ನಂತರ ಇಚ್ಛೆ, ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗುವುದು. ಅಣಕು ಸೀಟು ಹಂಚಿಕೆಯ ಫಲಿತಾಂಶ ■ 10ನೇ ಪುಟಕ್ಕೆ

ಅತ್ಯಾಚಾರ ಪ್ರಕರಣ
ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ಮತ್ತೆ ವಜಾ

ಬೆಂಗಳೂರು, ಜು.25– ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯ ಮತ್ತೆ ವಜಾಗೊಳಿಸಿದೆ.



ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಹಾಸನ ಜಿಲ್ಲೆಯ ಹೊಳೆ ನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ 2ನೇ ಬಾರಿ ಸಲ್ಲಿಸಲಾಗಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಜಾಮೀನು ಅರ್ಜಿ ವಜಾಗೊಳಿಸಿ ಆದೇಶ ಹೊರಡಿಸಿದೆ.

ಆಪರೇಷನ್ ಸಿಂಧೂರ್ ಕುರಿತು ಜು.28ರಂದು ಲೋಕಸಭೆಯಲ್ಲಿ ಚರ್ಚೆ

ರಾಜನಾಥ್ ಸಿಂಗ್, ಪ್ರಧಾನಿ ಮೋದಿ ಭಾಗಿ

ನವದೆಹಲಿ, ಜು.25– ಪ್ರಸ್ತುತ ಸಂಸತ್ತಿನ ಮಳೆಗಾಲದ ಅಧಿವೇಶನದ ಎರಡನೇ ವಾರದ ಕಲಾಪವು ಆಪರೇಷನ್ ಸಿಂಧೂರ್ ಕುರಿತು ಚರ್ಚೆಯೊಂದಿಗೆ ಪ್ರಾರಂಭವಾಗಲಿದೆ. ಜುಲೈ 28ರಂದು ಲೋಕಸಭೆಯಲ್ಲಿ ಆಪರೇಷನ್ ಸಿಂಧೂರ್ ಕುರಿತು ಚರ್ಚಿಸಲಾಗುತ್ತದೆ. ಇದಕ್ಕಾಗಿ, ಆಡಳಿತಾರೂಢ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ನೇತೃತ್ವದ ಭಾರತೀಯ ಜನತಾ ಪಕ್ಷ ಸರ್ಕಾರದ ಪರವಾಗಿ ಮಂಡಿಸಲು ಸ್ಪೀಕರ್‌ಗಳ ಪಟ್ಟಿಯನ್ನು ಬಹುತೇಕ ಅಂತಿಮಗೊಳಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಲೋಕಸಭೆಯಲ್ಲಿ ಆಪರೇಷನ್ ಸಿಂಧೂರ್ ಕುರಿತು ಚರ್ಚೆಯನ್ನು ಪ್ರಾರಂಭಿಸಲಿದ್ದಾರೆ.

ಗೃಹ ಸಚಿವ ಅಮಿತ್ ಶಾ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಜೊತೆಗೆ, ನಿಶಿಕಾಂತ್ ದುಬೆ ಮತ್ತು ಅನುರಾಗ್ ಠಾಕೂರ್ ಅವರ ಹೆಸರುಗಳನ್ನು ಸಹ ಸ್ಪೀಕರ್‌ಗಳ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಕೂಡ ಈ ಚರ್ಚೆಯಲ್ಲಿ ಭಾಗವಹಿಸುವ ಸಾಧ್ಯತೆಯಿದೆ. ಆಪರೇಷನ್ ಸಿಂಧೂರ್ ಕುರಿತು ಚರ್ಚೆ ಮಂಗಳವಾರ ರಾಜ್ಯಸಭೆಯಲ್ಲಿ ಆರಂಭವಾಗಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಇತರ ಸಚಿವರು ರಾಜ್ಯಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಆಪರೇಷನ್ ಸಿಂಧೂರ್ ಬಗ್ಗೆ ಉಭಯ ಸದನಗಳಲ್ಲಿ 16–16 ಗಂಟೆಗಳ ಕಾಲ ಚರ್ಚೆ ನಡೆಯಬೇಕಿದೆ. ರಾಜ್ಯಸಭೆಯಲ್ಲಿ ನಡೆಯುವ ಚರ್ಚೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕೂಡ ಭಾಗಿಯಾಗಬಹುದು.

ಆಪರೇಷನ್ ಸಿಂಧೂರ್ ಕುರಿತ ಚರ್ಚೆಗೆ ಸಂಬಂಧಿಸಿದಂತೆ, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಮಳೆಗಾಲದ ಅಧಿವೇಶನದ ಮೊದಲ ■ 10ನೇ ಪುಟಕ್ಕೆ

ಕಾರಿಗೆ ಕ್ಯಾಂಟರ್ ಡಿಕ್ಕಿ: ಕೊಡಗಿನ ನಾಲ್ವರು ದುರ್ಮರಣ

ಮಡಿಕೇರಿ, ಜು.25–ಕ್ಯಾಂಟರ್ ಮತ್ತು ಕಾರಿನ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ನಾಲ್ವರು ಮೃತಪಟ್ಟ ಘಟನೆ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ–275ರ ಕೊಯನಾಡು ಬಳಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದೆ.

ಗೋಣಿಕೊಪ್ಪಲಿನ ಮಾರುಕಟ್ಟೆ ರಸ್ತೆ ನಿವಾಸಿ ರಹಮತ್ ಉಲ್ಲಾ ರಶೀದ್ ಎಂಬುವರ ಪುತ್ರ ಎಂ.ಆರ್.ನಿಹಾದ್ (23), ಅಲ್ಲಿನ 2ನೇ ವಾರ್ಡ್ ನಿವಾಸಿ ಮಹಮದ್ ರಫೀಕ್ ಅವರ ಪುತ್ರ ರಾಕೀಬ್(25), ಪಾಲಿಬೆಟ್ಟ ನಿವಾಸಿ ನಜೀರ್ ಎಂಬುವರ ಪುತ್ರ ಅನೀಶ್(28) ಸಂತ ಥೋಮಸ್ ಶಾಲೆ ಬಳಿಯ ನಿವಾಸಿ ಎಂ.ಬಿ ಅರಿಫೀಜ್ ಎಂಬುವರ ಪುತ್ರ ರಿಶಾನ್(24) ಮೃತಪಟ್ಟ ಯುವಕರಾಗಿದ್ದು, ಕತಾರ್‌ನಲ್ಲಿ ಕೆಲಸ ಮಾಡುತ್ತಿರುವ ರಾಕಿಬ್ ರಜೆಗಾಗಿ ಗೋಣಿಕೊಪ್ಪಗೆ ಆಗಮಿಸಿದ್ದು, ತನ್ನ ಸಂಬಂಧಿಕರೇ ಆದ ಸ್ನೇಹಿತರೊಂದಿಗೆ ಉಲ್ಲಾಳಕ್ಕೆ ಪ್ರವಾಸ ಹೊರಟಿದ್ದರು ಎಂದು ಹೇಳಲಾಗಿದೆ.

ಕಾರಿನಲ್ಲಿ (ಕೆಎ 05 ಎಂ.ಎಫ್.5555) ಈ ನಾಲ್ವರು ಯುವಕರು ತೆರಳುತ್ತಿದ್ದ ವೇಳೆ ಸುಳ್ಯ ಕಡೆಯಿಂದ ಬರುತ್ತಿದ್ದ ಕ್ಯಾಂಟರ್ (ಕೆಎ 45 ಎ 3621) ಇವರ ಕಾರಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಕಾರಿನಲ್ಲೇ ಮೂವರು ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡು ನರಳುತ್ತಿದ್ದವನನ್ನು ಸ್ಥಳೀಯರು ಹಾರೆ ಮುಂತಾದವುಗಳಿಂದ ಕಾರಿನ ಬಾಗಿಲನ್ನು ಮೀಟಿ, ಮೃತದೇಹಗಳು ಹಾಗೂ ಗಾಯಾಳುವನ್ನು ಹೊರ ತೆಗೆದು ಸುಳ್ಯ ಆಸ್ಪತ್ರೆಗೆ ಸಾಗಿಸುವ ■ 10ನೇ ಪುಟಕ್ಕೆ




ಕೊಯನಾಡು ಬಳಿ ಕ್ಯಾಂಟರ್–ಕಾರು ನಡುವೆ ಭೀಕರ ಅಪಘಾತ ಸಂಭವಿಸಿದೆ.









ಧರ್ಮಸ್ಥಳ ನಿಗೂಢ ಸಾವು ಪ್ರಕರಣ
ಬೆಳ್ತಂಗಡಿಯಿಂದ ಎಸ್‌ಐಟಿ ಕಾರ್ಯನಿರ್ವಹಣೆ

ಮಂಗಳೂರು, ಜು.25– ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ನಿಗೂಢ ಸರಣಿ ಸಾವುಗಳ ತನಿಖೆಗಾಗಿ ರಾಜ್ಯ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಬೆಳ್ತಂಗಡಿಯಿಂದ ಕಾರ್ಯನಿರ್ವಹಣೆ ಮಾಡಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧರ್ಮಸ್ಥಳ ಪಟ್ಟಣದ ನಿವಾಸಿಯೊಬ್ಬರು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸಲ್ಲಿಸಿದ ದೂರಿನ ಮೇರೆಗೆ ಎಸ್‌ಐಟಿ ರಚಿಸಲಾಗಿದ್ದು, ನಿಗೂಢ ಸರಣಿ ಸಾವು, ಅಕ್ರಮ ಬಂಧನ, ಕಸ್ಟಡಿ ಚಿತ್ರಹಿಂಸೆ, ಸುಲಿಗೆ ಮತ್ತು ಆಸ್ತಿ ಸಂಬಂಧಿತ ಅಕ್ರಮಗಳು ಸೇರಿದಂತೆ ಗಂಭೀರ ಅಪರಾಧಗಳ ಬಗ್ಗೆ ತನಿಖೆ ನಡೆಸಲಿದೆ.

ದೂರುದಾರರ ಸುರಕ್ಷತೆ ಮತ್ತು ಸುಗಮ ತನಿಖೆಯನ್ನು ಖಚಿತಪಡಿಸಿಕೊಳ್ಳಲು, ಎಸ್‌ಐಟಿ ತನ್ನ ಕಚೇರಿಯನ್ನು ಧರ್ಮಸ್ಥಳದ ಬದಲಿಗೆ ಬೆಳ್ತಂಗಡಿಯಲ್ಲಿ ಆರಂಭಿಸಿದೆ. ಬೆಳ್ತಂಗಡಿ ಪೊಲೀಸ್ ಠಾಣೆಯ ಸಮೀಪವೇ ನೂತನವಾಗಿ ನಿರ್ಮಾಣಗೊಂಡಿರುವ ಪೊಲೀಸ್ ವಸತಿ ಗೃಹವನ್ನೇ ಎಸ್‌ಐಟಿ ಕೇಂದ್ರವಾಗಿ ಮಾಡಲಾಗುತ್ತಿದೆ. ಇಂದೇ ಬೆಳ್ತಂಗಡಿಯಲ್ಲಿ ಎಸ್‌ಐಟಿ ಕಚೇರಿ ಆರಂಭವಾಗಿದೆ.

ಈ ಕಚೇರಿಯಿಂದಲೇ ಎಸ್‌ಐಟಿ ತನಿಖೆ ಆರಂಭಿಸಲಿದ್ದು, ಶವಗಳನ್ನು ಹೂತಿರುವ ಪ್ರಕರಣದೊಂದಿಗೆ ಇನ್ನಷ್ಟು ದೂರುಗಳು ಎಸ್‌ಐಟಿ ಕಚೇರಿಯಲ್ಲಿ ದಾಖಲಾಗುವ ಸಾಧ್ಯತೆ ಇದೆ. ಮೂಲಗಳ ಪ್ರಕಾರ, ಎಸ್‌ಐಟಿ ಮುಖ್ಯಸ್ಥ ಡಿಜಿಪಿ ಪ್ರಣವ್ ಮೊಹಾಂತಿ ನೇತೃತ್ವದ ಅಧಿಕಾರಿಗಳ ತಂಡ ಈಗಾಗಲೇ ಔಪಚಾರಿಕ ಪ್ರಕ್ರಿಯೆಗಳನ್ನು ಪ್ರಾರಂಭಿಸಿದೆ, ಆರೋಪಗಳಿಗೆ ಸಂಬಂಧಿಸಿದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸುತ್ತಿದೆ ಮತ್ತು ಶೀಘ್ರದಲ್ಲೇ ಹೇಳಿಕೆಗಳನ್ನು ದಾಖಲಿಸಲು ಯೋಜಿಸಿದೆ.

ರಾಷ್ಟ್ರ ರಾಜಕೀಯದಲ್ಲಿ ಸಿಎಂ ಸಿದ್ದರಾಮಯ್ಯ ಹವಾ

ನವದೆಹಲಿ, ಜು.25– ಎಐಸಿಸಿ ಆಶ್ರಯದಲ್ಲಿ ರಾಷ್ಟ್ರ ಮಟ್ಟದಲ್ಲಿ ನಡೆದ ಹಿಂದುಳಿದ ವರ್ಗಗಳ ಭಾಗಿದಾರಿ ಸಮಾವೇಶದಲ್ಲಿ ಕರ್ನಾಟಕದ ಸಿಎಂ ಸಿದ್ದರಾಮಯ್ಯ ಕೇಂದ್ರಬಿಂದುವಾಗಿದ್ದು, ಬೆಂಗಳೂರು ಘೋಷಣೆಗಳನ್ನು ದೆಹಲಿಯ ಸಮಾವೇಶದಲ್ಲಿ ಘೋಷಿಸಲಾಗಿದೆ. ಹಿಂದುಳಿದ ವರ್ಗಗಳ ಪ್ರಮುಖ ನಾಯಕರನ್ನೊಳಗೊಂಡ ರಾಷ್ಟ್ರಮಟ್ಟದ ಸಮಾವೇಶ ಬೆಂಗಳೂರಿನಲ್ಲಿ ನಡೆದಿತ್ತು.

ಅದರ ಮುಂದುವರೆದ ಭಾಗವಾಗಿ ದೆಹಲಿಯ ಕಾಲ್‌ಕಟೋರ ಸ್ಟೇಡಿಯಂ ನಲ್ಲಿ 2ನೇ ಹಂತದ ಬೃಹತ್ ಸಮಾವೇಶ ನಡೆದಿದೆ. ಸಮಾವೇಶದ ಸ್ಥಳಕ್ಕೆ ತಲುಪುವ ದಾರಿಯುದ್ದಕ್ಕೂ ಕಾಂಗ್ರೆಸ್ ನಾಯಕರುಗಳ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿದ್ದವು.

ಎಲ್ಲಾ ಫ್ಲೆಕ್ಸ್, ಬ್ಯಾನರ್‌ಗಳಲ್ಲೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಸಮಾನಾಂತರವಾಗಿ ಸಿದ್ದರಾಮಯ್ಯನವರ ಭಾವಚಿತ್ರಗಳು ಕಂಡುಬಂದವು. ಈವರೆಗೆ ಕರ್ನಾಟಕದಲ್ಲಿ ಪ್ರಭಾವಿ ನಾಯಕರಾಗಿದ್ದ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಸಮಾವೇಶದ ಮೂಲಕ ರಾಷ್ಟ್ರಮಟ್ಟದಲ್ಲೂ ಮಿಂಚಲಾರಂಭಿಸಿದ್ದಾರೆ. 2013 ರಿಂದ 2018ರ ನಡುವೆ ಮುಖ್ಯಮಂತ್ರಿಯಾಗಿದ್ದಾಗ ಹಲವು ಭಾಗ್ಯ ಸರಣಿ ಯೋಜನೆಗಳ ಘೋಷಣೆ ಮೂಲಕ ಸಿದ್ದರಾಮಯ್ಯ ಹೆಸರು ಮಾಡಿದ್ದರು. 2023ರ ಚುನಾವಣೆ ಬಳಿಕ ಮತ್ತೆ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ, ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ಮತ್ತೊಮ್ಮೆ ದೇಶದ ಗಮನ ಸೆಳೆದಿದ್ದಾರೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ ■ 10ನೇ ಪುಟಕ್ಕೆ



ದೆಹಲಿಯಲ್ಲಿ ನಡೆದ ಒಬಿಸಿ ಭಾಗೀದಾರಿ ನ್ಯಾಯ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉಪಸ್ಥಿತರಿದ್ದಾರೆ.

ಒಬಿಸಿ ಸಮಸ್ಯೆ ಅರಿತಿದ್ದರೆ ಮೊದಲೇ ಜಾತಿಗಣತಿ: ರಾಹುಲ್ ಗಾಂಧಿ

ನವದೆಹಲಿ: ಈ ಹಿಂದೆ ಇತಿಹಾಸ ತಿಳಿದುಕೊಳ್ಳದೇ ಇದ್ದಿದ್ದು ನನ್ನ ತಪ್ಪು. ನನಗೆ ಮೊದಲೇ ಒಬಿಸಿ ಸಮುದಾಯದ ಸಮಸ್ಯೆಗಳ ಅರಿವಿದ್ದಿದ್ದರೆ, ಬಹಳ ಹಿಂದೆಯೇ ಜಾತಿ ಜನಗಣತಿಯನ್ನು ನಡೆಸುತ್ತಿದ್ದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.



ಪಕ್ಷದ ಒಬಿಸಿ ಘಟಕ ಶುಕ್ರವಾರ ಇಲ್ಲಿ ಏರ್ಪಡಿಸಿದ್ದ ಒಬಿಸಿಯ 'ಭಾಗೀದಾರಿ ನ್ಯಾಯ ಸಮ್ಮೇಳನ'ದಲ್ಲಿ ಪಾಲ್ಗೊಂಡಿದ್ದ ಅವರು, ಒಬಿಸಿಯವರ ಸಮಸ್ಯೆಗಳು ಗೌಪ್ಯವಾಗಿರುತ್ತವೆ ಮತ್ತು ಸುಲಭವಾಗಿ ಕಾಣಿಸುವುದಿಲ್ಲ ಎಂದರು. ದಲಿತರು, ಬುಡಕಟ್ಟು ಜನರು ಮತ್ತು ಅಲ್ಪ ಸಂಖ್ಯಾತರ ವಿಷಯಕ್ಕೆ ಬಂದಾಗ, ನನಗೆ ಉತ್ತಮ ಅಂಕಗಳು ದೊರೆಯಬೇಕು. ಮಹಿಳೆಯರ ವಿಷಯದಲ್ಲಿ ನನಗೆ ಉತ್ತಮ ಅಂಕಗಳು ದೊರೆಯ ಬೇಕು. ಆದರೆ, ನಾನು ಹಿಂದಿರುಗಿ ನೋಡಿದಾಗ, ಒಂದು ವಿಷಯದ ಕೊರತೆ ಕಾಣುತ್ತದೆ. ನಾನು ಒಂದು ತಪ್ಪು ಮಾಡಿದ್ದೇನೆ. ನಾನು ಒಬಿಸಿ ಸಮುದಾಯವನ್ನು ರಕ್ಷಿಸಬೇಕಿದ್ದ ರೀತಿಯಲ್ಲಿ ರಕ್ಷಿಸಲಿಲ್ಲ ಎಂದರು.

2004ರಿಂದ ನಾನು ರಾಜಕೀಯದಲ್ಲಿದ್ದೇನೆ. ಹಿಂದಿರುಗಿ ನೋಡಿದಾಗ, ನಾನು ತಪ್ಪು ಮಾಡಿದ್ದೇನೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಆ ಸಮಯದಲ್ಲಿ ನನಗೆ ನಿಮ್ಮ ಸಮಸ್ಯೆಗಳು ಆಳವಾಗಿ ಅರ್ಥವಾಗಲಿಲ್ಲ. ನಿಮ್ಮ (ಒಬಿಸಿ) ಇತಿಹಾಸ ಮತ್ತು ನಿಮ್ಮ ಸಮಸ್ಯೆಗಳ ಬಗ್ಗೆ ನನಗೆ ತಿಳಿದಿದ್ದರೆ, ನಾನು ಆಗಲೇ ಜಾತಿ ಜನಗಣತಿ ಮಾಡಿಸುತ್ತಿದ್ದೆ, ನನಗೆ ಈ ಕುರಿತು ವಿಷಾದವಿದೆ. ಇದು ನನ್ನಿಂದಾದ ತಪ್ಪು. ಇದು ಕಾಂಗ್ರೆಸ್ ಪಕ್ಷದ ತಪ್ಪಲ್ಲ, ನನ್ನ ತಪ್ಪು. ಈ ತಪ್ಪನ್ನು ನಾನು ಸರಿಪಡಿಸಿಕೊಳ್ಳುತ್ತೇನೆ ಎಂದು ಅವರು ಹೇಳಿದರು. ■ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಚಿಕ್ಕಪ್ಪ : ಹುಡುಗ ತುಂಬಾ ಒಳ್ಳೆಯವನು. ಸಬ್ ಇನ್ಸ್‌ಪೆಕ್ಟರ್ ಕೆಲಸ. ನೋಡೋಕೆ ಸುಂದರವಾಗಿದ್ದಾನೆ. ಅದ್ಯಾಕೆ ಮದುವೆ ಆಗಲ್ಲ ಅಂತಿದ್ದೀಯಮ್ಮ, ಯಾಕಮ್ಮ?

ಹುಡುಗಿ : ಅಪ್ಪ ಸಾಯುವಾಗ 'ಮಗಳೆ, ಏನೇ ಆಗ್ಲಿ, ಪೋಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದವನನ್ನು ಮಾತ್ರ ಮದುವೆ ಆಗಬೇಡ ಅಂತ ಹೇಳಿದ್ದಾರೆ ಚಿಕ್ಕಪ್ಪ!

ಮೈಸೂರು ಮಿತ್ರ

ಶನಿವಾರ, 26 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ..........

ಎದುರಾಳಿಗಳು ಕೆಟ್ಟ ಪದಗಳ ಬಳಕೆ ಹಾಗೂ ದೂರು ಮಾಡಿದರೆಂದರೆ ನೀವು ವಾದದಲ್ಲಿ ಜಯಗಳಿಸಿದಿರೆಂದೇ ಅರ್ಥ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಳೆ ಎಂದವನ ಮನೆ ಹಾಳು, ಇಂದೇ ಎಂದವನಿಗೆ ಬೀಳಾಗದು ಬಾಳು.

ನಿಮ್ಮ ಪತ್ರಗಳು

■ ಡಾ.ಸಿಪಿಕೆ ದಸರಾ ಉದ್ಘಾಟಕರಾಗಲಿ



ಮಾನ್ಯರೆ,

ಡಾ.ಸಿ.ಪಿ.ಕೆ. ಎಂಬ ಮೂರು ಇಂಗ್ಲಿಷ್ ಅಕ್ಷರಗಳ ಕನ್ನಡ ಅವತಾರವೇ ಕಾವ್ಯ ನಾಮಾಂಕಿತ ಮೇರು ವ್ಯಕ್ತಿ ಡಾ.ಸಿ.ಪಿ.ಕೃಷ್ಣಕುಮಾರ್‌ರವರು ಕನ್ನಡ ಪದಗಳಲ್ಲಿ ಸುಲಲಿತವಾಗಿ ಚಮತ್ಕಾರಗಳನ್ನು ತೋರುವ, ಮೃದುಭಾಷಿ, ಸೌಮ್ಯಸ್ವಭಾವದವರು. ನಮ್ಮ ನಡುವೆ ಇರುವ ಹಿರಿಯ ತಲೆಮಾರಿನ ಸುಪ್ರಸಿದ್ಧ ಕನ್ನಡದ ವಿದ್ವಾಂಸರು. ವಯಸ್ಸು ಎಂಬತ್ತಾರು, ಚಟುವಟಿಕೆಯಲ್ಲಿ ಇನ್ನೂ ಇಪ್ಪತ್ತಾರ ಹರೆಯ. ಇವರು ರಚಿಸಿರುವ ಕೃತಿಗಳೆಲ್ಲವೂ ಕನ್ನಡ ಭಾಷೆಯ ಅಭಿವೃದ್ಧಿ ಹಾಗೂ ಉಳಿವಿಗೆ ಪೂರಕವಾದವು. ನಾನೂರಕ್ಕೂ ಹೆಚ್ಚು ಪುಸ್ತಕಗಳ ರಚಿಸಿದ್ದರೂ ಇನ್ನೂ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾಗುವ ಚುಟುಕು ಚಕ್ರವರ್ತಿ ಸಿಪಿಕೆಯವರ ಚುಟುಕುಗಳನ್ನು ಓದುವುದಕ್ಕೆ ಕಾತುರದಲ್ಲಿ ಕಾಯುತ್ತಿರುತ್ತಾರೆ ಓದುಗರು.

ಕುವೆಂಪು, ದೇಜಗೌ, ಪ್ರಭುಶಂಕರ, ಚದುರಂಗ ಮುಂತಾದ ಸಾಹಿತಿಗಳ ಸಮಕಾಲೀನರು. ಸಿಪಿಕೆಯವರು ಉತ್ಕೃಷ್ಟ ಸಾಹಿತ್ಯವನ್ನು ಕನ್ನಡಕ್ಕೆ ಕೊಟ್ಟವರಲ್ಲಿ ಉಳಿದಿರುವ ಕೊನೆಯ ಕೊಂಡಿ ಎಂದರೆ ತಪ್ಪಾಗಲಾರದು. ಬರವಣಿಗೆಯಲ್ಲಿ ಇರುವ ಅವರ ನಿಷ್ಠೆ ಹಾಗೂ ಬದ್ಧತೆ ಇವತ್ತಿನ ಬರವಣಿಗೆಗಾರರಿಗೆ ಮಾದರಿಯಾಗಿದೆ. ಮೈಸೂರಿನಲ್ಲಿ ನಡೆಯುವ ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿ ಕಿರಿಯರಿಗೆ ನೀಡುವ ಮಾರ್ಗದರ್ಶನ ಅವಿಸ್ಮರಣೀಯ. ಅವರ ಪ್ರೇರಣೆಯಿಂದ ಸಾಹಿತ್ಯವನ್ನು ಉಸಿರಾಗಿಸಿಕೊಂಡವರು ಬಹಳಷ್ಟು ಸಾಹಿತಿಗಳಿದ್ದಾರೆ. ಮೈಸೂರು ಸಾಂಸ್ಕೃತಿಕ ನಗರವಾಗಿ ಇನ್ನೂ ಉಳಿದಿದೆ ಎಂದರೆ ಇಂತಹ ಮಹಾನೀಯರಿಂದಲೇ. ವಯೋಸಹಜ ಕಾರಣದಿಂದ ನಡೆದಾಡುವುದಕ್ಕೆ ಕಷ್ಟವಾದರೂ ಸಮಾರಂಭಗಳಿಗೆ ತಪ್ಪಿಸಿಕೊಳ್ಳುವುದಿಲ್ಲ. ಸಿದ್ಧಗಂಗಾ ಮಠದ ಶಿವಕುಮಾರಸ್ವಾಮಿಗಳು ನಡೆದಾಡುವ ದೇವರಿದ್ದಂತೆ ಇವರು ಕಾವ್ಯ ಲೋಕದಲ್ಲಿ ಮಿಡಿಯುವ ಹೃದಯ ಕವಿ. ಈ ಮಹಾನ್ ಸಾಧಕನಿಗೆ ರಾಜಕೀಯ ಎನ್ನುವುದು ತಿಳಿದಿಲ್ಲದ ವಿಷಯ, ಹಾಗಾಗಿ ಇಲ್ಲಿಯವರೆಗೂ ಅವರ ಸಾಮರ್ಥ್ಯಕ್ಕೆ ತಕ್ಕ ಗೌರವ, ಸನ್ಮಾನಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಿಕ್ಕಿಲ್ಲ. ರಾಜ್ಯ ಸರ್ಕಾರಕ್ಕೆ ಈ ಕೊರತೆಯನ್ನು ನೀಗಿಸುವ ಇಚ್ಛೆ ಇದ್ದರೆ ನಮ್ಮ ಮೈಸೂರಿನವರೇ ಆಗಿರುವ ಮಾನ್ಯ ಮುಖ್ಯಮಂತ್ರಿಗಳು ಈ ಬಾರಿಯ ದಸರಾ ಉದ್ಘಾಟಕರನ್ನಾಗಿ ಡಾ.ಸಿಪಿಕೆಯವರ ಹೆಸರನ್ನು ಘೋಷಿಸುವ ಮೂಲಕ ಇಡೀ ಸಾಂಸ್ಕೃತಿಕ ನಗರ ಹಾಗೂ ಮೈಸೂರು ಭಾಗದ ಜನತೆಯ ಸಂಭ್ರಮಕ್ಕೆ ಬಹುದೊಡ್ಡ ಕೊಡುಗೆ ನೀಡಬೇಕೆಂದು ನಾಡೊಬ್ಬ ಬರಹಗಾರನಾಗಿ ಸರ್ಕಾರವನ್ನು ವಿನಂತಿಸುತ್ತೇನೆ.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸರ್ಕಾರಕ್ಕೆ ಒತ್ತಾಯಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸಿದರೆ ಖಂಡಿತ ಸಿಪಿಕೆಯವರ ಆಯ್ಕೆ ಆಗುವುದು ಕಷ್ಟವೇನಲ್ಲ, ಮತ್ತೊಮ್ಮೆ ಇಂಥಹ ಅವಕಾಶ ದೊರೆಯುವ ಸಂಭವ ಸಿಗಲಾರದು. ಸಿಪಿಕೆ ಎನ್ನುವುದು ಕನ್ನಡದ ಸಾಹಿತ್ಯ ಭಂಡಾರವನ್ನೇ ತುಂಬಿಕೊಂಡಿರುವ ಪ್ರಶಾಂತವಾದ ಜ್ಞಾನಸರೋವರ, ಸರೋವರದ ಅಮೃತವನ್ನು ಕುಡಿಯದ ಸಾಹಿತಿಗಳಿಲ್ಲ. ಅವರಿಂದ ಲೋಕಾರ್ಪಣೆಗೊಂಡ ಕೃತಿಗಳು, ಮುನ್ನುಡಿ, ಬೆನ್ನುಡಿ ಬರೆಸಿಕೊಂಡಿರುವ ಪುಸ್ತಕಗಳು ಲೆಕ್ಕವಿಲ್ಲ. ರಾಷ್ಟ್ರಕವಿ ಪದವಿಗೇರಲು ಅರ್ಹರಾಗಿರುವ ಸಿಪಿಕೆಯವರಿಗೆ ಅವರ ಜೀವಿತಾವಧಿಯಲ್ಲಿ ರಾಷ್ಟ್ರಕವಿ ಪಟ್ಟ ದೊರೆಯುವ ಜೊತೆಗೆ ದಸರಾ ಉದ್ಘಾಟನೆಯ ಅವಕಾಶವೂ ದೊರೆಯಲೆಂಬುದು ನನ್ನ ವೈಯಕ್ತಿಕ ಆಶಯ ಮತ್ತು ಆಗ್ರಹ.

—ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

■ ಗುಂಡಿಮಯವಾದ ಗೋಕುಲಂ ರಸ್ತೆಗಳು

ಮಾನ್ಯರೆ,



ಮೈಸೂರಿನ ಗೋಕುಲಂ ಹಾಗೂ ನಂದಗೋಕುಲ ಬಡಾವಣೆಯ ಬಳಿ ಅರಳೀಮರ ಬಸ್ ನಿಲ್ದಾಣದಿಂದ ನಿರ್ಮಲಾ ಕಾನ್ವೆಂಟ್‌ವರೆಗಿನ ರಸ್ತೆಗಳಲ್ಲಿ ಹೊಂಡಮಯವಾಗಿದ್ದು, ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ದಿನನಿತ್ಯ ಕಿರಿಕಿರಿ ಉಂಟಾಗುತ್ತಿದೆ. ಯುಜಿಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡು ತಿಂಗಳುಗಳೇ ಕಳೆದರೂ ಅಗೆದ ರಸ್ತೆಗೆ ಡಾಂಬರು ಹಾಕದೇ ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ದಾರಿಯುದ್ದಕ್ಕೂ ಎರಡು–ಮೂರು ಅಡಿ ಆಳದಷ್ಟು ಹಳ್ಳಗಳು ಉಲ್ಬಣಗೊಂಡಿದ್ದು ಮಳೆ ಬಂದಾಗ ಈ ಗುಂಡಿಗಳಲ್ಲಿ ನೀರು ತುಂಬಿ 'ರಸ್ತೆ ಯಾವುದೋ, ಗುಂಡಿ ಯಾವುದೋ' ಎಂಬ ಭಯದಲ್ಲಿ ವಾಹನ ಓಡಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಸಂಚಾರ ದಟ್ಟಣೆಯೂ ಸಹ ಈ ರಸ್ತೆಯಲ್ಲಿ ಹೆಚ್ಚಿದ್ದು ಸಣ್ಣ-ಪುಟ್ಟ ಅಪಘಾತಗಳು ಸಂಭವಿಸಿದ್ದರೂ ಸಹ ಪಾಲಿಕೆ ಕಣ್ಮುಚ್ಚಿ ಕುಳಿತಿರುವುದು ಶೋಚನೀಯ ಸಂಗತಿ. ಅಧಿಕಾರಿಗಳು ತಮ್ಮ ಕಣ್ತೆರೆದು ನೋಡಿ, ದಯವಿಟ್ಟು ರಸ್ತೆಗಳಿಗೆ ಮರು-ಡಾಂಬರೀಕರಣದ ಸೌಭಾಗ್ಯವನ್ನು ಒದಗಿಸಿ ಸಾರ್ವಜನಿಕರ ಮೇಲೆ ತಮ್ಮ ಕೃಪೆ ತೋರಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

—ಯತಿಶ್. ಆರ್, ಸಾಮಾಜಿಕ ಕಾರ್ಯಕರ್ತ, ಮೈಸೂರು.

■ ಮಹದಾಯಿ: ಗೋವಾ ಸಿಎಂ ನಡೆ ಖಂಡನಾರ್ಹ

ಮಾನ್ಯರೆ,

ಮಹದಾಯಿ ಯೋಜನೆಯನ್ನು ಆರಂಭಿಸುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರ್ನಾಟಕದ ಹಕ್ಕುಗಳ ಪರ ಘೋಷಿಸಿದ ನಿರ್ಧಾರ ಸಮಯೋಚಿತವಾಗಿದೆ. ಉತ್ತರ ಕರ್ನಾಟಕದ ಶೇ.60ಕ್ಕೂ ಹೆಚ್ಚು ಭಾಗ ಬರಪೀಡಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ 3.9 ಟಿಎಂಸಿ ನೀರು ಕೇಳುತ್ತಿರುವುದು ರಾಜ್ಯದ ಬೇಡಿಕೆ ನ್ಯಾಯಸಮ್ಮತವಾಗಿದೆ. ಮಹದಾಯಿ ನದಿಯ ಕೇವಲ ಕೇವಲ ಶೇ.6 ಭಾಗವಿರುವ ಗೋವಾ, ತಲಾ 2000 ಕ್ಯೂಬಿಕ್ ಮೀಟರ್‌ಗಿಂತ ಹೆಚ್ಚಾದ ನೀರಿನ ಲಭ್ಯತೆಯ ನಡುವೆಯೂ ನಿರಂತರವಾಗಿ ಯೋಜನೆಗೆ ಅಡ್ಡಿಪಡಿಸುತ್ತಿರುವುದು ಅತಿರೇಕದ ರಾಜಕೀಯ ದೃಷ್ಟಿಕೋನವೇ ಹೊರತು ಪರಿಸರ ಕಾಳಜಿ ಅಲ್ಲ. ಮುಖ್ಯಮಂತ್ರಿ ಪ್ರಮೋದ ಸಾವಂತ್ ಅವರ ಈ ನಡೆ ಖಂಡನಾರ್ಹ ಮತ್ತು ಅತಿಕ್ರಮಣಕ್ಕೆ ಉದಾಹರಣೆಯಾಗಿದೆ. ಕರ್ನಾಟಕವು ಇನ್ನು ತಡ ಮಾಡದೆ ಕಾರ್ಯಾಚರಣೆ ಕೈಗೊಳ್ಳಬೇಕು. ಮಹದಾಯಿ ನದಿ ಯಾರೊಬ್ಬರ ಆಸ್ತಿ ಅಲ್ಲ. ಅದು ಪ್ರತಿಯೊಬ್ಬರು ಹಂಚಿಕೊಳ್ಳಬೇಕಾದ ನೈಸರ್ಗಿಕ ಸಂಪತ್ತು ಎಂಬುದನ್ನು ಪ್ರಮೋದ್ ಸಾವಂತ್ ಅವರು ಮರೆಯಬಾರದು.

—ಡಾ.ವಿಜಯಕುಮಾರ್ ಎಚ್. ಕೆ, ಮೈಸೂರು.

ಧರ್ಮದ ಹಾದಿ ತುಳಿದು ಮಾನವರಿಗೆ ಮಾದರಿಯಾದ ರಕ್ಕಸ ವಿಭೀಷಣ



> ಧರ್ಮದಲ್ಲಿ ನಡೆವವನಿಗೆ ಅಧರ್ಮವೆಂದೂ ಎದುರಾಗದು ಮತ್ತು ಅಧರ್ಮದ ನಡೆಯಲ್ಲಿ ಯಾರೇ ಇದ್ದರು ಅವರೊಟ್ಟಿಗಿರಬಾರದು ಇಲ್ಲಿ ವಿಭೀಷಣ ಈಗಾಗಲೇ ಸೀತಾಪಹರಣ ವಿಷಯವಾಗಿ ಸೋದರ ರಾವಣನಿಗೆ ತಿಳಿ ಹೇಳಲಾರಂಭಿಸಿದ್ದ. ಮಾಡಿದ ತಪ್ಪಿಗೆ ರಾಮನಲ್ಲಿ ಕ್ಷಮೆಯಾಚಿಸಿ ಧರ್ಮದೆಡೆ ಇರು ಎಂದಿದ್ದ. ಅಹಂಕಾರಿ ರಾವಣ ಒಪ್ಪದಿದ್ದಾಗ ರಾಮನ ಪರ ಸೇರಲು ಅರೆಕ್ಷಣವೂ ಯೋಚಿಸಲಿಲ್ಲ ವಿಭೀಷಣ. ಅಂತೆಯೇ ರಕ್ಕಸ ಕುಲದಲ್ಲಿ ಜನ್ಮ ಪಡೆದರೂ ಶಿಷ್ಟಾಚಾರಗಳನ್ನು ಮೈಗೂಡಿಸಿಕೊಂಡು; ಅಂತಿಮದವರೆಗೂ ಧರ್ಮದ ನೆಲೆಯಲ್ಲಿ ನಿಂತು ಯುಗಯುಗಕ್ಕೂ ಮಾದರಿಯಾದ ವಿಭೀಷಣ.



—ಮಂಜುನಾಥ.ಬಿ.ಆರ್
ಲೇಖಕರು,
ದೂ: 8884684726

ವಾಲ್ಮೀಕಿ ಮಹರ್ಷಿಗಳ ಶ್ರೀಮದ್ರಾಮಾಯಣ ಮಾನವ ಸಮಾಜದ ವಿಕಸಿತ ಪ್ರಜ್ಞೆಯ ಶೋಧ. ಸದ್ಗತಿ ಅಥವಾ ದುರ್ಗತಿಗಳ ಸಮಯಕ್ಕೆ ಬರುವ ಯೋಚನೆಗಳ ಫಲವಾಗಿ ತೆಗೆದುಕೊಳ್ಳುವ ನಿರ್ಧಾರಗಳ ಒಂದು ಮುನ್ನೋಟ ಸಾಕ್ಷಿ ಈ ರಾಮಾಯಣ. ಮಾನವನ ಮನೋಸ್ತರದ, ಬೌದ್ಧಿಕಸ್ತರದ ಊರ್ಜಿತ ಅರ್ಥಬದ್ಧ ಬದಲಾವಣೆಗೆ ದುರಂತಗಳೇ ಗಹನವಾದ ಪಾಠ. ಈ ಪಾಠಗಳು ರಾಮಾಯಣವೆಂಬ ಮಹಾಕಾವ್ಯದಲ್ಲಿ ಏಳು ಕಾಂಡ (ಅಧ್ಯಾಯ) ಗಳಲ್ಲಿ ರೂಪುಗೊಂಡಿದೆ.

ಮೆತ್ತಗಿನ ಸ್ಪರ್ಶಕ್ಕಿಂತ ಸುಡುವ ಕಾವು; ಯಾರನ್ನೆ, ಯಾವುದನ್ನೆ ಆದರೂ ಬಹುಬೇಗ ಎಚ್ಚರಗೊಳಿಸುತ್ತದೆ. ರಾಮಾಯಣದೊಳಗಿನ ಮಾತು, ಯೋಚನೆ, ನಿರ್ಧಾರಗಳ ಸುಡುವ ಕಾವು ದಶರಥ, ಮಂಥರೆ, ಕೈಕೇಯಿ, ರಾಮ, ಸೀತಾ, ರಾವಣರ ಮುಖೇನ ಎಲ್ಲರನ್ನು, ಎಲ್ಲವನ್ನು ಜಾಗೃತ ಪ್ರಜ್ಞೆಗೆ ಸೆಳೆಯುವುದೇ ಆಗಿದೆ. ಶ್ರೀಕೃಷ್ಣ ಗೀತೋಪದೇಶದಲ್ಲಿ ಹೀಗೆಂದಿದ್ದಾನೆ; 'ಸ್ವತಃ ದುಃಖದಲ್ಲೇ ಆಗಲಿ, ಸಂತೋಷದಲ್ಲೇ ಆಗಲಿ ಇದ್ದಾಗ ಯಾರಿಗೂ 'ಮಾತು' ಅಥವಾ 'ಭರವಸೆ' ನೀಡಬಾರದು'. ಈ ಮಾತು ಅಕ್ಷರಶಃ ಸತ್ಯ. ಎಂದೋ ರಣರಂಗದಲ್ಲಿ ಕೈಕೇಯಿ ಮಾಡಿದ ಸಹಾಯಕ್ಕೆ ಕೈಕೇಯಿಗೆ ದಶರಥ ನೀಡಿದ 'ವರ' ಅವನಿಗೇ ಧರ್ಮಸಂಕಟವನ್ನಿತ್ತಿತು. ಎಂದೋ ಮಾಡಿದ ಶ್ರವಣಕುಮಾರನ ಹತ್ಯೆಯೂ, ಶ್ರವಣಕುಮಾರನ ಮಾತಾ – ಪಿತರ ಶಾಪವೂ ರಾಜನಾದವನ ಬದುಕಿಗೂ ದುಃಖ ತಂದಿತ್ತು.

ಕುರೂಪಿ, ಸಕಲಜನ ದೂಷಿತ ಮಂಥರೆ ಮನೋಕುರೂಪಿಯು ಆಗಿ; ಕೈಕೇಯಿ ಮತ್ತು ಭರತನ ಮೇಲಿನ ಋಣವಾತ್ಸಲ್ಯಕ್ಕೆ ಕಟ್ಟುಬಿದ್ದು, ಅಯೋಧ್ಯೆ ಪುರಜನರ ಹೀಯಾಳಿಕೆಯ ಸೇಡಿನ ಪ್ರತೀಕಾರಕ್ಕೆ ಸಮಯವರಿತು ಕೈಕೇಯಿಯ ಕಿವಿಗೆ ಊದ್ದು ಸವತಿಪುತ್ರ ಮತ್ಸರದ ವಿಷ ಯುಗ ಯುಗಕ್ಕೂ ಮಂಥರೆಯನ್ನು ಅಪರಾಧಿಯನ್ನಾಗಿ ಸಿತು. ಯಾರ ಮಕ್ಕಳೇ ಆಗಲಿ ಸಕಲರನ್ನು ತನ್ನ ಮಕ್ಕಳೆಂದೇ ಭಾವಿಸುವುದು ತಾಯಿಗಿರಬೇಕಾದ ಸೃಷ್ಟಿಯ ಸ್ವಾಭಾವಿಕ ಗುಣ. ಈ ಗುಣವನ್ನೇ ಕೊಂದುಕೊಂಡ ಕೈಕೇಯಿ ಭರತನ ಒಳಿತೆಂದೇ ಭಾವಿಸಿ ರಾಮನಿಗೆ ನೀಡಿದ ವನವಾಸದ ನಿರ್ಧಾರ ಶಿಕ್ಷೆ ಹೆತ್ತ ಮಗನಿಂದಲೇ 'ಹೀನತನದವಳು ನೀನು, ತಾಯಿ ಸಂಕುಲಕ್ಕೇ ಕಳಂಕ ನೀನು, ಶಾಪ – ಮಹಾಪಾಪ ಎನಿಸಿದರೂ ಸರಿ, ನಾನೇ ಕೊಲ್ಲುವೆ ನಿನ್ನನ್ನು, ತಾಯೆಂಬುದ ಮರೆತು ರಾಮ ಹಿಂದಿರುಗದಿದ್ದರೆ' ಎನಿಸಿಕೊಳ್ಳಬೇಕಾಯಿತು.

ಪುರುಷೋತ್ತಮ ರಾಮ ಸತಿಯ ಮೇಲಿನ ಪ್ರೇಮ ನಿಷ್ಠೆಗೆ ಒಳಗಾಗಿ, ರಾಕ್ಷಸರ ಮಾಯಾ ಪ್ರಪಂಚವೇ ಆದ ದಂಡಕಾರಣ್ಯದ ಆಪತ್ತನ್ನು ಅರಿತರೂ ಮುಂದಾಲೋಚನೆಯಿಲ್ಲದೆ ಮಾರೀಚನೆಂಬ ಮಾಯಾಮೃಗದ ಬೆನ್ನಟ್ಟಿದ ಪೆದ್ದತನದಿಂದಾಗಿ ಕಷ್ಟಕೋಟಲೆಗಳ ಲೋಕದೊಳ ಹೊಕ್ಕ ಶಕ್ತಿಯುತ ರಾಮ ಸ್ವತಃ ನರಳುವಂತಾಯ್ತು. ಸೀತೆಯನ್ನು ಲಂಕಾ ರಾಕ್ಷಸನಿಗೆ ಸುಲಭವಾಗಿ ಸೆರೆ ಸಿಕ್ಕಿಸಿದಂತಾಯ್ತು.

ಇನ್ನೋ ಸೀತಾ, ಅರವತ್ನಾಲ್ಕು ವಿದ್ಯೆಯನರಿತ ವಿದ್ಯಾಭೂಷಿತೆ. ಪತಿವ್ರತೆ ಶಿರೋಮಣಿ. ಐಹಿಕ ವೈರಾಗಿಯಾಗಿ ರಾಜ್ಯದ ಆಸೆ ತೊರೆದು ರಾಮನೊಟ್ಟಿಗೆ ಕಾಡಿಗೆ ಬಂದವಳು. ನಿಸರ್ಗದ ಸೌಂದರ್ಯಕ್ಕೆ ಮರುಳಾದ ಮರುಳೆಯಾಗಿ ಮಾಯಾಮೃಗದ ಆಸೆ ಹೊತ್ತು ರಾಮನನ್ನ ಬೇಡಿಸಿ ರಾಕ್ಷಸ ಮಾಯಾಮೃಗದ ಬೆನ್ನಟ್ಟಲು ಗಂಡನನ್ನು ಗೀಳಿಟ್ಟದ್ದು; ಸ್ವತಃ ಸೀತೆಯೇ 'ನನ್ನಿಂದಾದ ಪ್ರಮಾದ'ವೆಂದು ಚಿಂತಿಸುವಂತಾಯ್ತು ಜತೆಗೆ ಮರ್ಯಾದ ಪುರುಷ ರಾಮನ ಸೋದರ – ಲಕ್ಷ್ಮಣನನ್ನು ಸ್ವತಃ ತಾನೇ ರಾಮನಿಗೊದಗಿಸಿದ ಅಪಾಯದ ಆತಂಕದಲ್ಲಿ "ಇದಕ್ಕೆಲ್ಲ ನೀನೇ ಕಾರಣ ಲಕ್ಷ್ಮಣ. ಮಾಯಾಮೃಗವನ್ನು ಸೃಷ್ಟಿಸಿ ನನ್ನಿಂದಲೇ ನಿನ್ನಣ್ಣನನ್ನು ಈ ಮಾಯಾ ರಾಕ್ಷಸರ ಅಪಾಯಕ್ಕೆ ಸಿಲುಕಿಸಿ, ಒಂಟಿಯಾದ ಅತ್ತಿಗೆಯನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಿರುವೆಯಾ? ಇದೆಲ್ಲಾ ನಿನ್ನದೇ ಕುತಂತ್ರ" ಎಂದು ಅನುಮಾನಿಸಿ, ಅಪಮಾನಿಸಿ, ನಿಂದಿಸಿ ರಕ್ಷಣೆಗಿದ್ದ ಲಕ್ಷ್ಮಣನನ್ನು ರಾಮನ ಹಿಂದೆಯೇ ಕಳುಹಿಸಿದ್ದು ಮರು ಚಿಂತಿಸುವಂತಾಯ್ತು ಸಾಲು ಸಾಲು ಎಡರು ತೊಡರುಗಳಲ್ಲಿ ನೊಂದು ಎಚ್ಚೆತ್ತರೂ ಲಕ್ಷ್ಮಣರೇಖೆಯನ್ನು ದಾಟಿ ರಾವಣನಿಂದ ಅಪಹರಣವಾದಳು ಸೀತಾ.

ಶಿವತಾಂಡವ ಸ್ತೋತ್ರವನ್ನು ರಚಿಸಿದ ಮಹಾ ಶಿವಭಕ್ತ ರಾವಣ; ಭಕ್ತಿಯ ಪರಾಕಾಷ್ಠೆಯಲ್ಲಾಗಲಿ, ಜ್ಞಾನ ವಿದ್ವತ್ತಿನಲ್ಲಾಗಲಿ, ರಾಜಕೀಯ ಧುರೀಣತೆಯಲ್ಲಾಗಲಿ, ಕ್ಷತ್ರಿಯಬಲದಲ್ಲಾಗಲಿ, ಕಲೆ ಮತ್ತು ಸಂಸ್ಕೃತಿಯ ಪೋಷಣೆಯಲ್ಲಾಗಲಿ, ತಪಸ್ಸಿನ ಹಠಸಾಧನೆಯಲ್ಲಾಗಲಿ ಪ್ರಚಂಡ ಸಾಧಕನು. ಇಷ್ಟೆಲ್ಲಾ ಸದ್ಗುಣಶೀಲ ದಶಶಿರ ಶಕ್ತಿಬಲನು ಪರಸ್ತ್ರೀ ವ್ಯಾಮೋಹ, ಕ್ರೋಧ ಅಹಂಕಾರದ ದುರ್ಗುಣಗಳಿಂದ ಖಳ ನಾಯಕನಾದ. ಶೂರ್ಪನಖಿಯು ರಾಮನ ತಾತ್ಸಾರಕ್ಕೆ ಮತ್ಸರಗೊಂಡು ರಾವಣನನ್ನು ಎತ್ತಿಕಟ್ಟಿದಳು ಸೋದರಿ ರಾಕ್ಷಸಿ. ಶಕ್ತಿಯೆಂಬುವುದು ಯುಕ್ತಿಯ ಜತೆಗಿರಬೇಕು; ಅಹಂಕಾರದ ಜತೆಗಲ್ಲ. ವೇದಪಾರಂಗತ ಬುದ್ಧಿಬಲನಾದ ರಾವಣ ಅಹಂಕಾರದಿಂದ ತಂಗಿಯ ಮಾತಿಗೆ ಕುದಿದು ಸೀತಾಪಹರಣಗೈದು ರಾಮನನ್ನು ಎದುರುಗೊಂಡ.

ಮಕ್ಕಳಾದಿಯಾಗಿ ತನ್ನ ಸರ್ವಸ್ವವನ್ನೂ ಕಪಿಸೈನ್ಯದಿಂದ ಕಳೆದುಕೊಂಡು ಯುದ್ಧಭೂಮಿಯಲ್ಲಿ ಘೋರವಾಗಿ ರಾಮನಿಂದ ಹತನಾದನು.

ಹೀಗಾಗಿ ಮಂಥರೆ, ಕೈಕೇಯಿ, ದಶರಥ, ರಾಮ, ಸೀತಾ, ರಾವಣ, ಶೂರ್ಪನಖಿ ಒಂದಲ್ಲ ಒಂದು ಕಾರಣಕ್ಕೆ ತಮ್ಮ ತನಗಳನ್ನು ಬದಲಿ ನಡೆದದ್ದಕ್ಕೆ, ನುಡಿದದ್ದಕ್ಕೆ ವಿಧಿಲಿಖಿತದೊಳಗೆ ನಿಧಿಪಾಠವಾದರು. ಸೀತಾ ಅಪಹರಣಕ್ಕೆ ಪ್ರತ್ಯಕ್ಷ ಪರೋಕ್ಷ ಕಾರಣರಾದರು.

ರಾಮಾಯಣದಲ್ಲಿ ರಾವಣನ ಸೋದರ ವಿಭೀಷಣನ ಪಾತ್ರ ತುಂಬಾ ವಿಶೇಷವಾದದ್ದು. 'ಧರ್ಮದಲ್ಲಿ ನಡೆವವನಿಗೆ ಅಧರ್ಮವೆಂದೂ ಎದುರಾಗದು' ಮತ್ತು 'ಅಧರ್ಮದ ನಡೆಯಲ್ಲಿ ಯಾರೇ ಇದ್ದರು ಅವರೊಟ್ಟಿಗಿರಬಾರದು' ಇಲ್ಲಿ ವಿಭೀಷಣ ಈಗಾಗಲೇ ಸೀತಾಪಹರಣ ವಿಷಯವಾಗಿ ಸೋದರ ರಾವಣನಿಗೆ ತಿಳಿ ಹೇಳಲಾರಂಭಿಸಿದ್ದ. ಮಾಡಿದ ತಪ್ಪಿಗೆ ರಾಮನಲ್ಲಿ ಕ್ಷಮೆಯಾಚಿಸಿ ಧರ್ಮದೆಡೆ ಇರು ಎಂದಿದ್ದ. ಅಹಂಕಾರಿ ರಾವಣ ಒಪ್ಪದಿದ್ದಾಗ ರಾಮನ ಪರ ಸೇರಲು ಅರೆಕ್ಷಣವೂ ಯೋಚಿಸಲಿಲ್ಲ ವಿಭೀಷಣ. ಅಂತೆಯೇ ರಕ್ಕಸ ಕುಲದಲ್ಲಿ ಜನ್ಮ ಪಡೆದರೂ ಶಿಷ್ಟಾಚಾರಗಳನ್ನು ಮೈಗೂಡಿಸಿಕೊಂಡು; ಅಂತಿಮದವರೆಗೂ ಧರ್ಮದ ನೆಲೆಯಲ್ಲಿ ನಿಂತು ಯುಗಯುಗಕ್ಕೂ ಮಾದರಿಯಾದ ವಿಭೀಷಣ.

ಇನ್ನೂ ಅನೇಕಾನೇಕ ಪಾತ್ರಗಳು ರಾಮಾಯಣದಲ್ಲಿ ಮುಖ್ಯ ಧ್ವನಿಗಳಾಗಿವೆ. ಇಲ್ಲಿರುವ ಎಲ್ಲಾ ಪಾತ್ರಗಳು ಮಾನವನ ಮನೋತಲದಲ್ಲಿ ಭಾವ ಕವಲುಗಳಾಗಿ ರೂಪುಗೊಂಡಿವೆ. ಸನ್ನಿವೇಶಗಳಿಗೆ ಜೀವಾಡುತ್ತಲೇ ಇವೆ. ಲೇಖನದ ಕೊನೆಯ ಸಾಲು ಪ್ರಸ್ತುತಕ್ಕೆ, ಶಿವನನ್ನು ಮೆಚ್ಚಿಸಿ ಶ್ರೇಷ್ಠನಾಗಿದ್ದ ರಾವಣ ಇಂದಿಗೂ ಕೆಲವರಲ್ಲಿ ಇದ್ದಾನೆ. ಶಿವನ ಮುಂದಿರಿಸಿ ಅಧರ್ಮವೆಸಗುತ್ತಿದ್ದಾನೆ. ಸ್ತ್ರೀ ದೋಷದಲ್ಲಿದ್ದ ಅಂದಿನ ರಾವಣನಿಗೂ ಶಿವ ಒದಗಲಿಲ್ಲ; ಇಂದಿನ ಸ್ತ್ರೀಹತ್ಯಾ ಅಧರ್ಮ ರಾವಣರಿಗೂ ಶಿವ ಒದಗುವುದಿಲ್ಲ. ನ್ಯಾಯವೆಂಬ ರಾಮಶಕ್ತಿಯಿಂದ ಇಂದಿನ ರಾವಣರು ವಧೆಯಾಗುವುದು ನಿಶ್ಚಿತ.

ಮಾತೃಮಂಡಳಿ ಬಳಿ ವೃತ್ತಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಹೆಸರು ನಾಮಕರಣಕ್ಕೆ ಆಗ್ರಹ

ಮೈಸೂರು,ಜು.25(ಎಂಟಿವೈ)– ಮೈಸೂರಿನ ಪಡುವಾರಹಳ್ಳಿಯ ಮಾತೃಮಂಡಳಿ ಬಳಿಯ ವೃತ್ತಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ವೃತ್ತವೆಂದು ನಾಮಕರಣ ಮಾಡಿ ಪ್ರತಿಮೆ ನಿರ್ಮಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಡಾ.ಬಿ.ಆರ್.ಅಂಬೇಡ್ಕರ್ ಹಿತರಕ್ಷಣಾ ಸಮಿತಿಯ ಹಿರಿಯ ಮುಖಂಡ ಹರಿಹರ ಆನಂದಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳ ಹಿಂದೆ ವೃತ್ತದಲ್ಲಿದ್ದ ಡಾ.ಬಿ.ಆರ್.ಅಂಬೇಡ್ಕರ್ ಫ್ಲೆಕ್ಸ್ ಅಪಹರಿಸಿ ವೃತ್ತವನ್ನು ಧ್ವಂಸಗೊಳಿಸಿದ ಕಿಡಿಗೇಡಿಗಳು ಇತ್ತೀಚೆಗೆ ವೃತ್ತಕ್ಕೆ ಕುವೆಂಪು ಹೆಸರು ನಾಮಕರಣ ಮಾಡುವಂತೆ ಮತ್ತೆ ವಿವಾದ ಸೃಷ್ಟಿಸಲು ಮುಂದಾಗಿದ್ದಾರೆ. ಆದರೆ, ಇದಕ್ಕೆ ನಗರಪಾಲಿಕೆ, ಜಿಲ್ಲಾಡಳಿತ ಅವಕಾಶ ಕೊಡಬಾರದು. ಪಡುವಾರಹಳ್ಳಿಯ ಬಹುಸಂಖ್ಯಾತ ದಲಿತ ಸಮುದಾಯ ಕಳೆದ 30 ವರ್ಷಗಳಿಂದ ಆಗ್ರಹಿಸುತ್ತಿರುವಂತೆ ವೃತ್ತಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಹೆಸರು ನಾಮಕರಣ ಮಾಡಿ ಪ್ರತಿಮೆ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದರು.

ಕೆಲವರು ಡಾ.ಬಿ.ಆರ್.ಅಂಬೇಡ್ಕರ್ ಹೆಸರು ನಾಮಕರಣಕ್ಕೆ ವಿರೋಧ ವ್ಯಕ್ತಪಡಿಸುತ್ತಾ ಕುವೆಂಪು ಅವರಿಗೆ ಅವಮಾನ ಮಾಡಲು ಹೊರಟಿದ್ದಾರೆ. ಇಂದು ಕುವೆಂಪು ಬದುಕಿದ್ದರೆ ಇವರಿಗೆ ಬುದ್ಧಿ ಹೇಳುತ್ತಿದ್ದರು. ರಾಜಕಾರಣಿಗಳು ಸಮಯ ಸಾಧಕರು. ಹೀಗಾಗಿ ಅವರು ವಿವಾದವನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿಲ್ಲ. ಆದರೆ, ಈ ವಿಚಾರದಲ್ಲಿ ಶೂದ್ರ ಸಮುದಾಯದ ಬುದ್ಧಿ ಜೀವಿಗಳ ಮೌನ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಬ್ಬರ ಪ್ರತಿಮೆಯೂ ಇರಲಿ: ಮಾನವತಾವಾದಿಗಳಾದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ರಾಷ್ಟ್ರಕವಿ ಕುವೆಂಪು ಮಹಾ ಚೇತನಗಳನ್ನು ಪರಸ್ಪರ ವೈರಿಗಳಂತೆ ಬಿಂಬಿಸಲು ಕೆಲವು ಜಾತಿವಾದಿ ಕಿಡಿಗೇಡಿಗಳು ಮುಂದಾಗಿದ್ದಾರೆ. ಇದು ಅವಿವೇಕ ತನದ ಪರಮಾವಧಿ. ಈ ಇಬ್ಬರ ನಾಯಕರ ಆಶಯಗಳು ಒಂದೆ ಆಗಿತ್ತು. ಒಂದು ವೇಳೆ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಕುವೆಂಪು ಇಬ್ಬರ ಪ್ರತಿಮೆ ನಿರ್ಮಾಣಕ್ಕೆ ನಮ್ಮ ವಿರೋಧ ಇಲ್ಲ ಎಂದರು.

ನಗರಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ ಮಾತನಾಡಿ, ವೃತ್ತಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಹೆಸರು ನಾಮಕರಣ ಮಾಡುವಂತೆ ಕಳೆದ ಮೂವತ್ತು ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದೆ. ಆಗ ಇಲ್ಲದಿರುವ ಕುವೆಂಪು ಪ್ರತಿಮೆ ನಿರ್ಮಾಣದ ವಿಚಾರ ಈಗ ಮುನ್ನಲೆಗೆ ಬಂದಿದೆ. ವೃತ್ತಕ್ಕೆ ಇದುವರೆಗೆ ಯಾರ ಹೆಸರನ್ನೂ ನಾಮಕರಣ ಮಾಡದ ಕಾರಣ ವಿವಾದವಾಗುತ್ತಿದೆ. ಕೂಡಲೇ ವೃತ್ತಕ್ಕೆ ಅಂಬೇಡ್ಕರ್ ಹೆಸರು ನಾಮಕರಣ ಮಾಡಿ ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹಿತರಕ್ಷಣಾ ಸಮಿತಿ ಅಧ್ಯಕ್ಷ ಚಂದ್ರಶೇಖರ, ಪದಾಧಿಕಾರಿಗಳಾದ ಶಿವಣ್ಣ, ಸೋಮಯ್ಯ ಮಲೆಯೂರು, ಲೇಖಕ ಸಿ.ಹರಕುಮಾರ್ ಇದ್ದರು.

ಅರಣ್ಯದಂಚಿನ ರೈತರ ಭೂಮಿ ಮೀಸಲು ಅರಣ್ಯ ; ಅಧಿಸೂಚನೆ ಖಂಡಿಸಿ ಪ್ರತಿಭಟನೆ

ಮೈಸೂರು, ಜು.25(ಎಂಟಿವೈ)– ಅರಣ್ಯದಂಚಿನ ಪ್ರದೇಶಗಳಲ್ಲಿ ರೈತರು ಉಳುಮೆ ಮಾಡುತ್ತಿರುವ ಭೂಮಿಯನ್ನು ಮೀಸಲು ಅರಣ್ಯವೆಂದು ಅಧಿಸೂಚನೆ ಹೊರಡಿಸಿರುವುದನ್ನು ವಿರೋಧಿಸಿ ಹಾಗೂ ಅರ್ಜಿ ಸಲ್ಲಿಸಿದವರಿಗೆ ಸಾಗುವಳಿ ಪತ್ರ ನೀಡುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಮುಂದೆ ಪ್ರತಿಭಟನೆ ನಡೆಸಿದ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಅರಣ್ಯ ಪ್ರದೇಶದ ಅಂಚಿನಲ್ಲಿ ಉಳುಮೆ ಮಾಡುತ್ತಿರುವ ರೈತರಿಂದ ಭೂಮಿ ಕಸಿದುಕೊಳ್ಳದಂತೆ ಆಗ್ರಹಿಸಿದರು. ಪಿರಿಯಾಪಟ್ಟಣ ತಾಲೂಕಿನ ಹಾರನಹಳ್ಳಿ ಹೋಬಳಿಯ ಗರಿಗುಡ್ಡ ಕಾವಲ್ ಗ್ರಾಮದ ಸರ್ವೆ ನಂ.94ರಲ್ಲಿ 627 ಎಕರೆ ಹಾಗೂ ಚನ್ನಕಲ್ ಕಾವಲ್ ಗ್ರಾಮದ ಸರ್ವೆ ನಂ.30ರಲ್ಲಿ 4679.08 ಎಕರೆ ವಿಸ್ತೀರ್ಣದ ಜಮೀನು ಮೀಸಲು ಅರಣ್ಯವೆಂದು ಅಧಿಸೂಚನೆ ಹೊರಡಿಸಲಾಗಿದೆ. ತಲೆಮಾರುಗಳಿಂದ ನೂರಾರು ಬಡ ರೈತರು ಈ ಜಮೀನುಗಳಲ್ಲಿ ಉಳುಮೆ ಮಾಡುತ್ತಾ ಜೀವನ ನಡೆಸುತ್ತಿದ್ದಾರೆ. ಈ ಭೂಮಿ ಬಿಟ್ಟರೆ ಬೇರೆ ಯಾವ ಆಧಾರವೂ ಇಲ್ಲ. ಅಲ್ಲದೆ ಈ ರೈತರಿಂದ ಅರಣ್ಯ ಪ್ರದೇಶಗಳಿಗೆ ಯಾವುದೇ ತೊಂದರೆಯೂ ಆಗುತ್ತಿಲ್ಲ. ಆದರೆ, ಸರ್ಕಾರ ರೈತರ ತುಂಡು ಭೂಮಿ ಕಿತ್ತುಕೊಂಡು ಅವರನ್ನು ಒಕ್ಕಲೆಬ್ಬಿಸಲು ಹೊರಟಿರುವುದು ಬಡ ರೈತರ ವಿರೋಧಿ ನೀತಿಯಾಗಿದೆ ಎಂದು ಕಿಡಿಕಾರಿದರು.



ಅರಣ್ಯದಂಚಿನಲ್ಲಿ ಉಳುಮೆ ಮಾಡುವ ಭೂಮಿಯನ್ನು ಮೀಸಲು ಅರಣ್ಯ ವ್ಯಾಪ್ತಿಯಿಂದ ಬಿಡುಗಡೆ ಮಾಡುವಂತೆ ಆಗ್ರಹಿಸಿ ಮೈಸೂರಿನ ಅರಣ್ಯ ಭವನದ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


50–60 ವರ್ಷಗಳಿಂದ ಅರಣ್ಯದಂಚಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರ ಭೂಮಿಗೆ ಸಾಗುವಳಿ ಪತ್ರ ನೀಡಿ ಎಂದು ಫಾರಂ ನಂ.50, 53 ಮತ್ತು 57ರಲ್ಲಿ ಅರ್ಜಿ ಸಲ್ಲಿಸಿದರೂ ಸಾಗುವಳಿ ಪತ್ರ ನೀಡದೇ ಮತ್ತೊಂದು ಕಡೆ ಎಲ್ಲಾ ದಾಖಲೆಗಳನ್ನು ಹೊಂದಿರುವ, ಅಲ್ಲಿ ಮನೆ ಕಟ್ಟಿಕೊಂಡು ಜೀವನ ಸಾಗಿಸುತ್ತಿರುವ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಹೊರಟಿರುವುದು ರೈತ ಕುಲವನ್ನು ನಾಶ ಮಾಡುವ ಸರ್ಕಾರದ ಹುನ್ನಾರವಾಗಿದೆ. ಅರಣ್ಯದಂಚಿನಲ್ಲಿ ಪ್ರಭಾವಿಗಳಿಗೆ ರೆಸಾರ್ಟ್, ಹೋಂಸ್ಟೇಗಳಿಗೆ ಅನುಮತಿ ನೀಡುವ ಸರ್ಕಾರ, ಬಡ ರೈತರಿಂದ ಬಲವಂತದಿಂದ ಭೂಮಿ ಕಿತ್ತುಕೊಳ್ಳುವುದನ್ನು ಒಪ್ಪಲು ಸಾಧ್ಯವಿಲ್ಲ. ಹೀಗಾಗಿ ಕೂಡಲೇ ಮೀಸಲು ಅರಣ್ಯವೆಂದು ಘೋಷಿಸಿರುವ ಅಧಿಸೂಚನೆ ಹಿಂಪಡೆಯಬೇಕು. ಆ ಪ್ರದೇಶದ ಜನರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು. 50–60 ವರ್ಷಗಳಿಂದ ಅರಣ್ಯದಂಚಿನ ಪ್ರದೇಶಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಸಾಗುವಳಿ ಪತ್ರ ವಿತರಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಚಿಕ್ಕಣ್ಣೇಗೌಡ, ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ, ಖಜಾಂಚಿ ಚಂದ್ರಶೇಖರ್, ಸಂಚಾಲಕ ಕಣಗಾಲು ಲೋಕೇಶ್, ಪುಟ್ಟರಾಜು ಹಲವರು ಭಾಗವಹಿಸಿದ್ದರು.

ಸಿದ್ಧರಾಮಯ್ಯ ಸಾಧನೆ ನಾಲ್ವಡಿಗೆ ಹೋಲಿಸಿದ್ದ ಡಾ.ಯತೀಂದ್ರ

ತಂದೆ ಮುಖ್ಯಮಂತ್ರಿಯಾದ ಮಾತ್ರಕ್ಕೆ ಮಾತಿನ ಮಿತಿ ದಾಟಬಾರದು!

ಸಂಸದ ಯದುವೀರ್ ತಿರುಗೇಟು



ಡಾ.ಯತೀಂದ್ರ



ಸಿದ್ಧರಾಮಯ್ಯ



ಯದುವೀರ್

ಮೈಸೂರು, ಜು.25– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಮವಾಗಿ ಅಥವಾ ಅವರಿಗಿಂತ ಹೆಚ್ಚು ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಅನುದಾನ ನೀಡಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ಧರಾಮಯ್ಯ ಹೇಳಿದ್ದಾರೆ.

ಮೈಸೂರಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರಿನ ಅಭಿವೃದ್ಧಿ ದೃಷ್ಟಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಷ್ಟೇ ಅಥವಾ ಇನ್ನೂ ಹೆಚ್ಚು ಅನುದಾನವನ್ನು ಸರ್ಕಾರ ನೀಡಿದ್ದರಿಂದಲೇ ಸಾಧನಾ ಸಮಾವೇಶ ಮಾಡಿದ್ದು, ಹಾಗಾಗಿ ವಿಪಕ್ಷದವರ ಆರೋಪಗಳಲ್ಲಿ ಹುರುಳಿಲ್ಲ ಎಂದು ತಿಳಿಸಿದ್ದಾರೆ.

ಒಡೆಯರ್ ತಿರುಗೇಟು: ಯತೀಂದ್ರ ಸಿದ್ಧರಾಮಯ್ಯ ಹೇಳಿಕೆಗೆ ಪತ್ರಿಕಾ ಪ್ರಕಟಣೆ ಮೂಲಕ ರಾಜವಂಶಸ್ಥರೂ ಆದ ಸಂಸದ ಯದುವೀರ್ ತಿರುಗೇಟು ನೀಡಿದ್ದು, ಮೈಸೂರು ಸಂಸ್ಥಾನ ವಿಶ್ವಮಾನ್ಯವಾಗಿ ಸರ್ವಾಂಗೀಣ ಪ್ರಗತಿ ಹೊಂದಲು ಕಾರಣೀಭೂತರಾದ ಮಹನೀಯರ ಸಾಧನೆಗಳನ್ನು ಗೌರವಿಸಿ, ಸ್ಮರಿಸಬೇಕೇ ಹೊರತು ಅದನ್ನು ಅಳೆದು ತೂಗಿ ಹೋಲಿಸಬಾರದು ಎಂದಿದ್ದಾರೆ.

ಯತೀಂದ್ರ ಸಿದ್ಧರಾಮಯ್ಯ ಅವರ ತಂದೆ ಮುಖ್ಯಮಂತ್ರಿ ಸ್ಥಾನದಲ್ಲಿದ್ದಾರೆ ಎಂಬ ಮಾತ್ರಕ್ಕೆ ಮಾತಿನ ಮಿತಿ ಕಳೆದುಕೊಂಡು ಮಾಧ್ಯಮಗಳ ಮುಂದೆ ತಾವು ಏನು ಬೇಕಾದರು ಮಾತನಾಡಬಹುದು ಎಂಬ ಹುಮ್ಮಸ್ಸಿನಲ್ಲಿ ಈ ರೀತಿಯ ಹೇಳಿಕೆಗಳನ್ನು ನೀಡಬಾರದು. ತಾವು ಮಾಧ್ಯಮದ ಮುಂದೆ ನೀಡಿರುವ ಈ ಹೇಳಿಕೆ ಸಂಪೂರ್ಣ ಸತ್ಯಕ್ಕೆ ದೂರವಾದದ್ದು, ಅದು ಸುಳ್ಳು ಎಂಬುದು ತಮ್ಮ ಆತ್ಮಕ್ಕಾದರೂ ಮನವರಿಕೆಯಾಗಿರುತ್ತದೆ.

ಮೈಸೂರು ಜಿಲ್ಲೆಯವರಾದ ಸಿದ್ಧರಾಮಯ್ಯನವರು ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದರೂ, ಎಷ್ಟೇ ಅನುದಾನಗಳನ್ನು ನೀಡಿ ಅಭಿವೃದ್ಧಿಗೊಳಿಸಿದ್ದರೂ ಅದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದು ಸಮಾಜಕ್ಕೆ ತಲುಪಿದೆ ಎಂಬುದನ್ನು ಜನತೆ ನೋಡಿದ್ದಾರೆ. ಅದಕ್ಕೆ 2018ರಲ್ಲೇ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನತೆ ತಕ್ಕ ಉತ್ತರ ನೀಡಿದ್ದಾರೆ. ಶ್ರೀ ನಾಲ್ವಡಿ ಮಹಾರಾಜರು ಈ ಮೈಸೂರು ಪ್ರಾಂತ್ಯದಲ್ಲಿ ಯಾವುದಕ್ಕೂ ಕೊರತೆ ಬಾರದಂತೆ ನೋಡಿಕೊಂಡು ತಮ್ಮ ದೂರದೃಷ್ಟಿಯ ಆಡಳಿತದಿಂದ ಅಕ್ಷರಶಃ ಸುವರ್ಣಯುಗವನ್ನೆ ಸೃಷ್ಟಿಸಿದ್ದರು ಎಂಬುದನ್ನೂ ಜನ ಮರೆತಿಲ್ಲ ಎಂದು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆ. 1ಕ್ಕೆ 'ಎಲ್ಲು ಮುತ್ತಾ' ಚಿತ್ರ ಬಿಡುಗಡೆ

ಮೈಸೂರು, ಜು.25(ಎಂಟಿವೈ)– ಹೊಸದಾಗಿ ಚಿತ್ರೀಕರಿಸಿರುವ ಕನ್ನಡ ಚಲನಚಿತ್ರ 'ಎಲ್ಲು ಮುತ್ತಾ' ಸಿನಿಮಾ ಆ.1ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರ ನಿರ್ಮಾಪಕ ಸತ್ಯ ಎಸ್. ಶ್ರೀನಿವಾಸ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಕನ್ನಡ ಸಿನಿಪ್ರಿಯರ ಮನಸೂರೆಗೊಂಡಿದೆ. ಸಾಕಷ್ಟು ಸದ್ದು ಮಾಡುತ್ತಿರುವ ಈ ಟ್ರೇಲರ್ ಸಿನಿಮಾದ ಪ್ರೇಕ್ಷಕರ ಮನಗೆಲ್ಲಲಿದೆ ಎಂಬ ವಿಶ್ವಾಸವಿದೆ. ರಾ. ಸೂರ್ಯ ನಿರ್ದೇಶನದ 'ಎಲ್ಲು ಮುತ್ತಾ' ಕನ್ನಡದಲ್ಲಿ ಹೊಸ ಮಾದರಿಯ ಸಿನಿಮಾ ಎನಿಸಿದೆ. ಇದೊಂದು ಮಾಸ್ ಚಿತ್ರವಾಗಿದ್ದು, ಕೊಡಗಿನ ಹಿನ್ನೆಲೆಯಲ್ಲಿ ಕಥೆ ಹೆಣೆಯಲಾಗಿದೆ. ಆದರೆ, ಇದು ಬರೀ ಕೊಡಗಿನ ಕಥೆಯಲ್ಲ. ಈ ಕಥೆಯನ್ನು ಕರ್ನಾಟಕಕ್ಕೆ ಹೇಳುವ ಪ್ರಯತ್ನ ಮಾಡಲಾಗಿದೆ ಎಂದರು.

ಕೊಡಗಿನಲ್ಲಿ 55 ದಿನ ಚಿತ್ರೀಕರಣ ಮಾಡಲಾಗಿದೆ. ಕನಕಪುರದ ಬಳಿ ಹಾಡುಗಳಿಗೆ ಚಿತ್ರೀಕರಣ ಮಾಡಲಾಗಿದೆ. ಕೇಶವ ಪ್ರಸನ್ನ ಸಂಗೀತ ಚಿತ್ರಕ್ಕಿದೆ. ರಾಜ್ಯಾದ್ಯಂತ 75ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ಮೈಸೂರು ಪಿನೆಕ್ ಸೀರಿ ಎರಡು ಚಿತ್ರಮಂದಿರದಲ್ಲಿ ಸಿನಿಮಾ ತೆರೆಗೆ ಬರಲಿದೆ ಎಂದು ತಿಳಿಸಿದರು. ನಟ ಶೌರ್ಯ ಪ್ರತಾಪ್ ಮಾತನಾಡಿ, ಪ್ರಿಯಾಂಕ ಮಳಲಿ, ಯಮುನಾ ಶ್ರೀನಿಧಿ ನವೀನ್ ಡಿ. ಪಾಟೀಲ್, ಕಾಕ್ರೋಚ್ ಸುಧಿ ಮುಂತಾದವರು ನಟಿಸಿದ್ದಾರೆ. ಈ ಕಥೆಯ ಮೂಲಕ ಸಮಾಜಕ್ಕೆ ಸಾಮಾಜಿಕ ಸಂದೇಶವನ್ನು ಚಿತ್ರ ಹೇಳಲಿದೆ ಎಂದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜು.25– ಭೂಗತ ಕೇಬಲ್ ಕಾಮಗಾರಿ ನಿಮಿತ್ತ ಇಂಡಸ್ಟ್ರಿಯಲ್ ಸಬರ್ಬ್ 1, 2 ಮತ್ತು 3ನೇ ಹಂತ, ಸ್ಟರ್ಲಿಂಗ್ ಥಿಯೇಟರ್ ಸುತ್ತ-ಮುತ್ತ, ವಿಶ್ವೇಶ್ವರ ನಗರ, ಧರ್ಮ ಸಿಂಗ್ ಕಾಲೋನಿ, ದೇವರಾಜ್ ಅರಸ್ ಕಾಲೋನಿ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಜುಲೈ 27 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಟಾಟಾ ಮೆಮೋರಿಯಲ್ ಸೆಂಟರ್
ಅಡ್ವಾನ್ಸ್ಡ್ ಸೆಂಟರ್ ಫಾರ್ ಟ್ರೀಟ್‌ಮೆಂಟ್, ರಿಸರ್ಚ್ ಅಂಡ್ ಎಜುಕೇಷನ್ ಇನ್ ಕ್ಯಾನ್ಸರ್ (ಎಸಿಟಿಆರ್‌ಇಸಿ)
ಸೆಕ್ಟರ್-22, ಖಾರ್ಘರ್, ನವಿ ಮುಂಬಯಿ 410210, ಗ್ರ್ಯಾಂಟ್-ಇನ್-ಏಡ್ ಇನ್‌ಸ್ಟಿಟ್ಯೂಷನ್ ಆಫ್ ಡಿಪಾರ್ಟ್‌ಮೆಂಟ್ ಆಫ್ ಅಟೋಮಿಕ್ ಎನರ್ಜಿ, ಭಾರತ ಸರ್ಕಾರ

ಉದ್ಯೋಗವಕಾಶ

ಜಾಹೀರಾತು ಸಂಖ್ಯೆ : ಎಸಿಟಿಆರ್‌ಇಸಿ/ಎಡಿವಿಟಿ/ಎ-11/ಎ-12/2025 22.07.2025

ಎಸಿಟಿಆರ್‌ಇಸಿಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾದ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು
1	ಅಸಿಸ್ಟೆಂಟ್ ಪ್ರೊಫೆಸರ್ 'ಇ' (ಪಾಥಲಜಿ) (1-ಯುಆರ್)
2	ಕನ್ಸಲ್ಟೆಂಟ್ 'ಡಿ' (ಫಾರ್ಮಸಿ) (2-ಯುಆರ್)
3	ಸೈಂಟಿಫಿಕ್ ಆಫೀಸರ್ 'ಇ' (ಟ್ರಾನ್ಸ್‌ಪ್ಲಾಂಟ್) ಇಮ್ಯುನಾಲಜಿ ಮತ್ತು ಇಮ್ಯುನೋಜೆನೆಟಿಕ್ಸ್ ಲ್ಯಾಬೊರೇಟರಿ) (1-ಯುಆರ್).
4	ಸೈಂಟಿಫಿಕ್ ಆಫೀಸರ್ 'ಸಿ' (ಸೆಂಟರ್ ಫಾರ್ ಕ್ಯಾನ್ಸರ್ ಎಪಿಡೆಮಿಯಾಲಜಿ) (1-ಒಬಿಸಿ)
5	ಸೈಂಟಿಫಿಕ್ ಆಫೀಸರ್ 'ಸಿ' (ಇನ್‌ಫಾರ್ಮೇಷನ್ ಟೆಕ್ನಾಲಜಿ-ನೆಟ್‌ವರ್ಕಿಂಗ್) (1-ಒಬಿಸಿ)
6	ಸೈಂಟಿಫಿಕ್ ಅಸಿಸ್ಟೆಂಟ್ 'ಬಿ' (ನ್ಯೂಕ್ಲಿಯರ್ ಮೆಡಿಸಿನ್) (1-ಯುಆರ್, 1-ಎಸ್‌ಸಿ, 1-ಒಬಿಸಿ)
7	ಸೈಂಟಿಫಿಕ್ ಅಸಿಸ್ಟೆಂಟ್ 'ಬಿ' (ಕ್ಯಾನ್ಸರ್ ಸೈಟೊ-ಜೆನೆಟಿಕ್ ಲ್ಯಾಬ್) (1-ಒಬಿಸಿ)
8	ಸೈಂಟಿಫಿಕ್ ಅಸಿಸ್ಟೆಂಟ್ 'ಬಿ' (ಅನಿಮಲ್ ಸೈನ್ಸಸ್) (1-ಯುಆರ್)
9	ಕೋ-ಆರ್ಡಿನೇಟರ್ 'ಬಿ' (ಮೆಡಿಕಲ್ ಜನರಲ್ ಸ್ಟೋರ್ಸ್) (1-ಒಬಿಸಿ)
10	ಕೋ-ಆರ್ಡಿನೇಟರ್ 'ಬಿ' (ಮೆಡಿಕಲ್ ಅಡ್ಮಿನಿಸ್ಟ್ರೇಷನ್) (1-ಎಸ್‌ಸಿ)
11	ಟೆಕ್ನಿಷಿಯನ್ 'ಎ' (ಸೆಂಟ್ರಲ್ ಲ್ಯಾಬ್) (4-ಯುಆರ್)

ಆನ್‌ಲೈನ್‌ನಲ್ಲಿ ಅರ್ಜಿಗಳ ಸ್ವೀಕಾರವು 22/07/2025 ರಿಂದ 22/08/2025ರವರೆಗೆ ಲಭ್ಯವಿದೆ. ಆನ್‌ಲೈನ್ ಅರ್ಜಿಗೆ ಕಡೆ ದಿನಾಂಕ 22/08/2025ರ ಸಂಜೆ 05-30 ಗಂಟೆ (ಭಾರತೀಯ ಸಮಯ)

ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ https://actrec.gov.in ಭೇಟಿ ನೀಡಿ.
ಆನ್‌ಲೈನ್ ಅರ್ಜಿ ಸಲ್ಲಿಕೆ ಕಡ್ಡಾಯವಾಗಿದೆ
ಈ ಜಾಹೀರಾತಿನಲ್ಲಿ ಯಾವುದೇ ಅನುಬಂಧ ಇದ್ದರೆ ತಿದ್ದುಪಡಿಯನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಒದಗಿಸಲಾಗುವುದು

ಚೀಫ್ ಅಡ್ಮಿನಿಸ್ಟ್ರೇಟಿವ್ ಆಫೀಸರ್, ಎಸಿಟಿಆರ್‌ಇಸಿ

(ರಾಜ್ಯ ಅಬಕಾರಿ ಇಲಾಖೆ)
ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್ ರವರ ಕಛೇರಿ, ಹಾಸನ ಜಿಲ್ಲೆ, ಹಾಸನ
E-mail:dcexcisehsn195@gmail.com Ph:08172-264215

ಟೆಂಡರ್ ಪ್ರಕಟಣೆ

ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್, ಹಾಸನ ಜಿಲ್ಲೆ, ಹಾಸನ ಇವರು ಅಬಕಾರಿ ಇಲಾಖೆಯಲ್ಲಿ ನೋಂದಾಯಿಸಲಾದ ಮಾನವ ಸಂಪನ್ಮೂಲ ಗುತ್ತಿಗೆದಾರರಿಂದ ಈ ಕೆಳಕಂಡ ಉದ್ದೇಶಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ವಿವರ ಈ ಕೆಳಕಂಡಂತಿದೆ. ಕ್ರ.ಸಂ:1 ಟೆಂಡರ್ ವಿವರ: ಅಬಕಾರಿ ಇಲಾಖೆ, ಹಾಸನ ಜಿಲ್ಲೆಯ ಜಿಲ್ಲಾ ಕಛೇರಿಯಲ್ಲಿ ಕಾರ್ಯ ನಿರ್ವಹಿಸಲು 01–ಹುದ್ದೆ ಕೌಶಲ್ಯವುಳ್ಳ ತಾಂತ್ರಿಕ ನಿರ್ವಾಹಕರು/ಗಣಕಯಂತ್ರ ನಿರ್ವಾಹಕರು, 01–ಹುದ್ದೆ ಬೆರಳಚ್ಚುಗಾರರು/ಗಣಕಯಂತ್ರ ನಿರ್ವಾಹಕರು ಮತ್ತು 02–ಹುದ್ದೆ ಡಿ ದರ್ಜೆಯ ನೌಕರರು ಮತ್ತು 03 ವಾಹನ ಚಾಲಕರುಗಳು ಸೇರಿ ಒಟ್ಟು 07 ನೌಕರರು ಮಾನವ ಸಂಪನ್ಮೂಲ ಸೇವೆಯನ್ನು ಬಾಹ್ಯ ಮೂಲದಿಂದ ಹೊರಗುತ್ತಿಗೆ ಆಧಾರದ ಮೇಲೆ e-Procurement ಮೂಲಕ ಪಡೆಯುವ ಬಗ್ಗೆ ಅಂದಾಜು ಮೊತ್ತ:20 ಲಕ್ಷ ರೂಗಳು, ಇ.ಎಂ.ಡಿ. ಮೊತ್ತ:1 ಲಕ್ಷ ರೂಗಳು. ಕಾಲಾವಧಿ:01–09–2025 ರಿಂದ 31–08–2026 ರವರೆಗೆ ಗುತ್ತಿದಾರರ ಅರ್ಹತೆ:ಟೆಂಡರ್ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:1] ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 08–08–2025 ರ ಸಂಜೆ 5–30 ರವರೆಗೆ 2] ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ 11–08–2025 ರ ಬೆಳಗ್ಗೆ 11–30 ಕ್ಕೆ. ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು KPPP-Portal ನಲ್ಲಿ (https://kppp.karnataka.gov.in) ಮಾತ್ರ ಪ್ರಕಟಿಸಲಾಗುವುದು.

ಸಹಿ/- ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್ ಹಾಸನ ಜಿಲ್ಲೆ, ಹಾಸನ.

ವಾಆಇಸಾಸಂ/ಮಿಸಿ/ಹಾಸನ/381/ಟೆಂಡರ್ ಪ್ರಕಟಣೆ/2024–25

ನಗರಸಭಾ ಕಾರ್ಯಾಲಯ, ನಂಜನಗೂಡು
ನಂಜನಗೂಡು-571301, ಮೈಸೂರು ಜಿಲ್ಲೆ, ದೂರವಾಣಿ: 08221-226236
ಇಮೇಲ್ : itstaff_ulb_nanjangud@yahoo.co.in
ವೆಬ್‌ಸೈಟ್ : www.nanjanagudcity.mrc.gov.in

ನಂನಸಭಾ/ತಾಂತ್ರಿಕಶಾಖೆ/ಸ.ಅಂ/ಟೆಂ-04/2025-26 ದಿನಾಂಕ: 21.07.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ 2021–22 ರಿಂದ 2024–25ನೇ ಸಾಲಿನವರೆಗೆ 15ನೇ ಹಣಕಾಸು ಯೋಜನೆಯಡಿ ಉಳಿತಾಯವಾಗಿರುವ ಅನುದಾನದಲ್ಲಿ ಅನುಮೋದನೆಗೊಂಡಿರುವ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ KW-1 ಹಾಗೂ KW-2 ರನಿಯಮಗಳ ಅನ್ವಯ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ ಇಂಡೆಂಟ್ ನಂ:1.DMA/2026-28/RD/WORK_INDENT 45784 ಅಂದಾಜು ಮೊತ್ತ: 30.00 ಲಕ್ಷಗಳು ಹಾಗೂ 2:1.DMA/2025–26/OW/WORK_INDENT45785 ಅಂದಾಜು ಮೊತ್ತ: 15.00 ಲಕ್ಷಗಳು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು https://kppp.karnataka.gov.in ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ಟೆಂಡರ್ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ **ದಿನಾಂಕ: 07–08–2025** ಹಾಗೂ ಟೆಂಡರ್ ತೆರೆಯುವ **ದಿನಾಂಕ: 08–08–2025** ಕಾಮಗಾರಿ ನಿಬಂಧನೆ, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸೂಚನೆ:– ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು	ಉಪಾಧ್ಯಕ್ಷರು	ಪೌರಾಯುಕ್ತರು
ನಗರಸಭೆ, ನಂಜನಗೂಡು	ನಗರಸಭೆ, ನಂಜನಗೂಡು	ನಗರಸಭೆ, ನಂಜನಗೂಡು

DIPR/MYS/KAVITA/702/2025-26

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ,
ಶ್ರೀ ನಿಮಿಷಾಂಬ ದೇವಸ್ಥಾನ,
ಗಂಜಾಂ ಶ್ರೀರಂಗಪಟ್ಟಣ – 571477, 08236–297641,
ಸಂಖ್ಯೆ: ಎಸ್.ಎನ್.ಟಿ/ಸಿ.ಆರ್/29/2025–26 ದಿನಾಂಕ: 25.07.2025

ಪ್ರಕಟಣೆ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಗಂಜಾಂನ ಶ್ರೀ ನಿಮಿಷಾಂಬ ದೇವಸ್ಥಾನಕ್ಕೆ ಈ ಕೆಳಕಂಡ ಸರಕುಗಳನ್ನು ಸೂಚಿತ 12 ತಿಂಗಳ ಅವಧಿಗೆ ಸರಬರಾಜು ಮಾಡುವ ಬಗ್ಗೆ ಅರ್ಹ ಸರಬರಾಜುದಾರರಿಂದ ಪ್ರತ್ಯೇಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಸರಕು ವಿವರ	ಪ್ರಮಾಣ	ಅಂದಾಜು ಮೊತ್ತ	ಇಎಂಡಿ ಮೊಬಲಗು
1	ಬಾಳೆ ಎಲೆಯಿಂದ ತಯಾರಿಸಿದ ದೊನ್ನೆ	1ಕ್ಕೆ	200000	5000
2	ಏಲಕ್ಕಿ ಬಾಳೆಹಣ್ಣು (60 ಗ್ರಾಂ ಮೇಲ್ಪಟ್ಟು)	1ಕ್ಕೆ	200000	5000
3	ಹೂವು (ಕಾಕಡ, ಮರಳೆ, ಸೇವಂತಿಗೆ)	1 ಮಾರು	200000	5000
4	ಉರುವಲು ಸೌದೆ (ನೀಲಗಿರಿ)	1 ಮಣ	300000	5000

ಸೂಚನೆಗಳು: 1) ಟೆಂಡರ್ ಫಾರಂ ಬೆಲೆ 150/– 2) ಟೆಂಡರ್ ಫಾರಂ ವಿತರಿಸುವ ದಿ: 28.07.2025 ರಿಂದ 2) ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿ: 10.08.2025 ಸಾಯಂಕಾಲ 5.00 3) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿ: 11.08.2025 ಸಾಯಂಕಾಲ 5.00 4) ಟೆಂಡರ್ ದರಪಟ್ಟಿಯನ್ನು ತೆರೆಯುವ ದಿ: 12.08.2025 ಪೂರ್ವಾಹ್ನ 11.30 ಕ್ಕೆ 5) ಹೆಚ್ಚಿನ ವಿವರಗಳನ್ನು ಆಡಳಿತ ಕಛೇರಿಯ ವೇಳೆಯಲ್ಲಿ ಪಡೆಯುವುದು.

ಸಹಿ/– ಕಾರ್ಯನಿರ್ವಹಣಾಧಿಕಾರಿ, ಶ್ರೀ ನಿಮಿಷಾಂಬ ದೇವಸ್ಥಾನ, ಗಂಜಾಂ ಶ್ರೀರಂಗಪಟ್ಟಣ

DIPR/MDY/323/KSMCA/MDY/340/2025-26

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಆಲನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ತಾಲ್ಲೂಕು ಪಂಚಾಯತ್ ಹೆಚ್ ಡಿ ಕೋಟೆ — ಜಿಲ್ಲಾ ಪಂಚಾಯತ್ ಮೈಸೂರು
ದಿನಾಂಕ: 24/07/2025

ಟೆಂಡರ್ ಪ್ರಕಟಣೆ
ಇ-ಪ್ರಕ್ಯೂರ್ ಮೆಂಟ್ ಮೂಲಕ

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಆಲನಹಳ್ಳಿ, ಹೆಚ್.ಡಿ.ಕೋಟೆ ತಾಲ್ಲೂಕು ಇವರು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಎಂ ಜಿ.ಎನ್.ಆರ್.ಇ.ಜಿ.ಎ ಯೋಜನೆ 2025–26ನೇ ಸಾಲಿನ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರೋಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಸಾಮಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಏಕಂಬಾರು ಟೆಂಡರ್‌ಗಳನ್ನು Standard Tender Documents for E-Procurement For Goods ನಮೂನೆಯಲ್ಲಿ ಆಹ್ವಾನಿಸಲಾಗಿದೆ

DOCUMENT NO.	GRAMA PANCHYATH	AMOUNT
1.	Alanahalli	5,36,394.87
ಕ್ರ.ಸಂ	ವಿವರ	ಟೆಂಡರ್ ವೇಳಾ ಪಟ್ಟಿ
1.	ಕೊತ್ತೆಗಾಲ ಗ್ರಾಮದ ಸರ್ವೆ ನಂ 8 ಊರಕೆರೆ ಸಮಗ್ರ ಅಭಿವೃದ್ಧಿ 2025–26ನೇ ಸಾಲಿನ) RD.PR/2025-26/IND10497	■ ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ-2ನ್ನು) ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ 21/07/2025 ಮಧ್ಯಾಹ್ನ 12:00 ಗಂಟೆಗೆ ■ ಟೆಂಡರ್ ಅರ್ಜಿಗಳನ್ನು ಹಾಕಲು ಕೊನೆಯ ದಿನಾಂಕ ಮತ್ತು ಸಮಯ 04/08/2025 ಸಂಜೆ 4:00 ಗಂಟೆ ■ ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ/ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 05/08/2025 ಸಂಜೆ 4:01 ಗಂಟೆಗೆ ■ ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ/ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 06/08/2025 ಮತ್ತು ಸಮಯ ಬೆಳಗ್ಗೆ 11:00ಕ್ಕೆ

ಈ ಟೆಂಡರ್ ಪ್ರಕ್ರಿಯೆಯು ತಾಂತ್ರಿಕ ತೊಂದರೆ ಮತ್ತು ಇತರೆ ವಿಷಯಗಳಿಂದ ರದ್ದತಿಯಾದರೆ ಮತ್ತೊಮ್ಮೆ ಪತ್ರಿಕಾ ಪ್ರಕಟಣೆ ಮಾಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ನೋಡಿಕೊಳ್ಳುವುದು ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/ ಅಧ್ಯಕ್ಷರು, ಗ್ರಾಮ ಪಂಚಾಯಿತಿ ಆಲನಹಳ್ಳಿ — ಸಹಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ, ಆಲನಹಳ್ಳಿ

'ಮೈಸೂರು ಮಿತ್ರ'ನ ವರದಿ ಹಿನ್ನೆಲೆ; ಕಾರ್ಯಾಚರಣೆಗಿಳಿದ ಪೊಲೀಸರು

ವಿವೇಕಾನಂದನಗರದ ಅಪಘಾತ ಸ್ಥಳಕ್ಕೆ ಪೊಲೀಸ್ ಆಯುಕ್ತರ ಭೇಟಿ



ವಿವೇಕಾನಂದ ಸರ್ಕಲ್‌ಗೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರುವುದು

ಮೈಸೂರು, ಜು.25(ಎಂಕೆ)– ಮೈಸೂರಿನ ವಿವೇಕಾನಂದ ಸರ್ಕಲ್ ಬಳಿ ಸಾರಿಗೆ ಬಸ್ ಹರಿದು ವ್ಯಕ್ತಿಯೊಬ್ಬರ ಸಾವಿಗೆ ರಸ್ತೆ ಬದಿ ವ್ಯಾಪಾರವೇ ಕಾರಣ ಎಂದು 'ಮೈಸೂರು ಮಿತ್ರ'ನ ವರದಿ ಪ್ರಕಟಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ವಿವೇಕಾನಂದ ನಗರಕ್ಕೆ ಭೇಟಿ ನೀಡಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸ್ಥಳ ಪರಿಶೀಲನೆ ನಡೆಸಿದರು.

ಗುರುವಾರ(ಜು.24) ಬೆಳಗ್ಗೆ ಹಾಲು ಮತ್ತು ತರಕಾರಿ ಖರೀದಿಸಲು ಬಂದಿದ್ದ ಶ್ರೀರಾಂಪುರ ನಿವಾಸಿ ಡಿ.ಜೆ.ಪಾರ್ಶ್ವನಾಥಯ್ಯ ಅವರು, ರಸ್ತೆ ಬದಿ ವ್ಯಾಪಾರದಿಂದಾಗಿ ಸರಾಗವಾಗಿ ಸಾಗಲು ಸಾಧ್ಯವಾಗದೇ ಆಯ ತಪ್ಪಿ ಬಿದ್ದು ಸಾರಿಗೆ ಬಸ್‌ನ ಹಿಂದಿನ ಚಕ್ರಕ್ಕೆ ಸಿಲುಕಿ ಸಾವನ್ನಪ್ಪಿದರು ಎಂಬ ಪ್ರತ್ಯಕ್ಷದರ್ಶಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ, ಫೋಟೋ ಸಹಿತ ಸುದ್ದಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ ನಗರ ಪೊಲೀಸ್ ಆಯುಕ್ತರು, ಅಪಘಾತ ನಡೆದ ರಸ್ತೆ ಬದಿಯಲ್ಲಿ ವ್ಯಾಪಾರ ನಡೆಸಲು ಯಾರಿಗೂ ಅವಕಾಶ ನೀಡದಂತೆ ನಗರಪಾಲಿಕೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರಲ್ಲದೆ, ರಸ್ತೆ ಬದಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳಾವಕಾಶ ಮಾಡಿಕೊಡುವಂತೆ ತಿಳಿಸಿದ್ದಾರೆ.

ಆಯುಕ್ತರೊಂದಿಗೆ ಡಿಸಿಪಿ ಸುಂದರ್ ರಾಜ್, ಎಸಿಪಿ ಶಿವಶಂಕರ್ ಮತ್ತಿತರರಿದ್ದರು.

ಚಾಮುಂಡಿ ಬೆಟ್ಟದಲ್ಲಿ ಪುಂಡರು, ಕುಡುಕರ ಹಾವಳಿಗೆ ಬ್ರೇಕ್



ಚಾಮುಂಡಿಬೆಟ್ಟದಲ್ಲಿ ಕೆ.ಆರ್.ಠಾಣೆಯ ಪೊಲೀಸರು ವಾಹನ ತಪಾಸಣೆ ನಡೆಸುತ್ತಿರುವುದು

ಮೈಸೂರು, ಜು.25– ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಪುಂಡರ ಹಾವಳಿ ಹೆಚ್ಚಿರುವ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಯುವ ಬ್ರಿಗೇಡ್ ಸ್ವಯಂ ಸೇವಕರು ಸ್ವಚ್ಛತಾ ಸೇವೆ ನಡೆಸಿದ ವೇಳೆ ರಾಶಿಗಟ್ಟಲೆ ಮದ್ಯದ ಬಾಟಲಿಗಳು ಪತ್ತೆಯಾಗಿದ್ದರ ಬಗ್ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಲ್ಲಿ ಸಚಿತ್ರ ವರದಿ ಪ್ರಕಟಿಸಿ, ಪವಿತ್ರ ಕ್ಷೇತ್ರ ಕುಡುಕರ ತಾಣವಾಗುತ್ತಿರುವ ಬಗ್ಗೆ ಎಚ್ಚರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿ, ಪುಂಡರಿಗೆ ಬಿಸಿ ಮುಟ್ಟಿಸುತ್ತಿದ್ದಾರೆ.

ಕೃಷ್ಣರಾಜ ಠಾಣೆಯ ಇನ್ಸ್‌ಪೆಕ್ಟರ್ ಡಿ.ಪಿ.ಧನರಾಜ್, ಪಿಎಸ್‌ಐ ಪೂಜಾ ಹಾಗೂ ಸಿಬ್ಬಂದಿ, ಚಾಮುಂಡಿ ಕಮಾಂಡೋ ಪಡೆಗಳೊಂದಿಗೆ ತಾವರೆಕಟ್ಟೆ ಮತ್ತು ಚಾಮುಂಡಿ ಬೆಟ್ಟದ ರಸ್ತೆಯಲ್ಲಿ ಕಾರ್ಯಾಚರಣೆ ನಡೆಸಿದರು. ಬೆಟ್ಟದ ಕಡೆಗೆ ಹೋಗುತ್ತಿದ್ದ ವಾಹನಗಳ ತಪಾಸಣೆ ನಡೆಸಿ, ವೇಗದ ಚಾಲನೆ ಸೇರಿದಂತೆ ಸಂಚಾರ ನಿಯಮ ಉಲ್ಲಂಘಿಸಿ, ಸಾರ್ವಜನಿಕರಿಗೆ ತೊಂದರೆ ನೀಡುವವರಿಗೆ ಖಡಕ್ ಎಚ್ಚರಿಕೆ ನೀಡಿದರು. ಈ ವೇಳೆ ಅಂಗಡಿಗಳಲ್ಲೂ ತಪಾಸಣೆ ನಡೆಸಿ, ಧೂಮಪಾನಿಗಳಿಗೆ ದಂಡ ವಿಧಿಸಿದರು.


ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಇನ್ಸ್‌ಪೆಕ್ಟರ್ ಡಿ.ಪಿ.ಧನರಾಜ್, ಕಳೆದ ಮೂರು ದಿನಗಳಿಂದ ಕಾರ್ಯಾಚರಣೆ ನಡೆಸಲಾಗುತ್ತಿದೆ. ಎಲ್ಲಾ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಹುಟ್ಟುಹಬ್ಬ ಆಚರಣೆ ಮಾಡುವವರು, ಜೋಡಿಯಾಗಿ ಓಡಾಡುವವರು, ಗುಂಪು-ಗುಂಪಾಗಿ ದೌಡಾಯಿಸುವವರನ್ನು ತಡೆದು ವಿಚಾರಣೆ ನಡೆಸುತ್ತಿದ್ದೇವೆ. ಕೆಲವರಿಗೆ ದಂಡ ವಿಧಿಸಿದ್ದು, ಈ ತಪಾಸಣೆ ಮುಂದುವರೆಯಲಿದೆ ಎಂದು ತಿಳಿಸಿದರು.

ಪ್ರೇಕ್ಷಕರೊಂದಿಗೆ 'ಜೂನಿಯರ್' ಚಿತ್ರ ವೀಕ್ಷಿಸಿದ ನಟ ಕಿರೀಟಿ



ಮಾಜಿ ಸಚಿವ ಜನಾರ್ಧನರೆಡ್ಡಿ ಪುತ್ರ, ಚಿತ್ರನಟ ಕಿರೀಟಿ ಅವರು ಮೈಸೂರಿನ ವುಡ್‌ಲ್ಯಾಂಡ್ಸ್ ಚಿತ್ರಮಂದಿರದಲ್ಲಿ ತಾವು ನಾಯಕ ನಟನಾಗಿ ನಟಿಸಿರುವ 'ಜೂನಿಯರ್' ಚಿತ್ರವನ್ನು ಪ್ರೇಕ್ಷಕರೊಡಗೂಡಿ ವೀಕ್ಷಿಸಿದರು. ಈ ವೇಳೆ ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರು ಕಿರೀಟಿ ಅವರನ್ನು ಸನ್ಮಾನಿಸಿದರು. ಮೈಸೂರು ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಕಾರ್ಯಕರ್ತರಾದ ಪರಮೇಶ್ವರಯ್ಯ, ಅರ್ಜುನ್, ನವೀನ್ ಶೆಟ್ಟಿ, ದೇವಣ್ಣಾಜಿ, ಪಿ.ಟಿ.ಮಹದೇವಸ್ವಾಮಿ, ರಮೇಶ್, ದೇವರಾಜ್, ರಾಜು, ನಿಖಿಲ್, ಯೋಗೇಶ್, ಆನಂದಮೂರ್ತಿ ಮುಂತಾದವರಿದ್ದರು.

ಇಂದು ರಾಮಕೃಷ್ಣ ಆಶ್ರಮಕ್ಕೆ ಸ್ವಾಮಿ ದಿವ್ಯಾನಂದಜೀ ಆಗಮನ



ಮೈಸೂರು, ಜು.25– ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ದಿವ್ಯಾನಂದಜೀ ಮಹಾರಾಜ್‌ರವರು ಶನಿವಾರ(ಜು.26) ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಆಗಮಿಸಲಿದ್ದಾರೆ. ಮೂರು ದಿನ ಆಶ್ರಮದಲ್ಲೇ ವಾಸ್ತವ್ಯವಿರಲಿದ್ದು, ಶನಿವಾರ ಮತ್ತು ಭಾನುವಾರ ಸಂಧ್ಯಾರತಿಯ ನಂತರ ರಾತ್ರಿ 7.45ಕ್ಕೆ ಸ್ವಾಮೀಜಿಯವರ ಆಶೀರ್ವಾದ ಪಡೆಯಬಹುದು. ಭಾನುವಾರ ಸಂಜೆ 6ಕ್ಕೆ ಆಶ್ರಮದ ಸಭಾಂಗಣದಲ್ಲಿ ಪೂಜ್ಯ ಸ್ವಾಮೀಜಿಯವರಿಂದ ವಿಶೇಷ ಪ್ರವಚನ ಹಾಗೂ ಆಶೀರ್ವಚನವಿರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಭಿನಂದನೆ



ಶಾಸಕ ಕೆ. ಹರೀಶ್‌ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ರಾಮಕೃಷ್ಣ ನಗರದ ನಿವಾಸಿಗಳಿಂದ ಅಭಿನಂದಿಸಲಾಯಿತು. ಈ ವೇಳೆ ಕೆಜಿ ಕೊಪ್ಪಲ್ ರಾಜಣ್ಣ, ನಾಗರಾಜು, ಪ್ರಕಾಶ್, ರವಿ, ಚಂದ್ರು, ಸತೀಶ್ ಹಾಗೂ ಇನ್ನಿತರರಿದ್ದರು.

ವಕೀಲರ ಸಂಘದಿಂದ ಕೋರ್ಟ್ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

ಕೆಂಪೇಗೌಡರ ಕಾಲದಲ್ಲಿದ್ದ 3 ಸಾವಿರ ಕೆರೆಗಳು ಈಗ 300ಕ್ಕೆ ಇಳಿದಿವೆ

ಹೈಕೋರ್ಟ್ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ವಿಷಾದ





ಮೈಸೂರು ವಕೀಲರ ಸಂಘದ ವತಿಯಿಂದ ಏರ್ಪಡಿಸಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತ್ಯೋತ್ಸವದಲ್ಲಿ ಕೆಂಪೇಗೌಡರ ಪ್ರತಿಮೆಗೆ ಹೈಕೋರ್ಟ್ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ನಿವೃತ್ತ ನ್ಯಾ. ಟಿ.ಜಿ.ಶಿವಶಂಕರೇಗೌಡರು, ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್, ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ, ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ (ಬಲಚಿತ್ರ) ಹಿರಿಯ ನ್ಯಾಯವಾದಿ, ಲಾ ಗೈಡ್ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಜು.25(ಎಸ್‌ಪಿಎನ್)– ನಾಡಪ್ರಭು ಕೆಂಪೇಗೌಡರ ಆಡಳಿತಾವಧಿಯಲ್ಲಿ ಕೆರೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಬೆಂಗಳೂರು ಸುತ್ತಮುತ್ತ ಅಂದಿನ ಕಾಲಕ್ಕೆ 3 ಸಾವಿರ ಕೆರೆಗಳಿದ್ದವು. ಪ್ರಸ್ತುತ 200 ಇಲ್ಲವೇ 300 ಕೆರೆಗಳಿವೆ. ಉಳಿದ ಕೆರೆಗಳು ನಾಮಾವಶೇಷವಾಗಿವೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ತೀವ್ರ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೈಸೂರು ವಕೀಲರ ಸಂಘದಿಂದ ಏರ್ಪಡಿಸಿದ್ದ ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತ್ಯೋತ್ಸವ–2025ರಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೆಂಗಳೂರು ನಿರ್ಮಾತೃ ಕೆಂಪೇಗೌಡರಿಗೆ ಎಷ್ಟು ಗೌರವ ಸಲ್ಲಿಸುತ್ತೇವೆಯೋ ಅಷ್ಟೇ ಗೌರವವನ್ನು ಮೈಸೂರು ಸಂಸ್ಥಾನವನ್ನು ಆಳಿದ ಒಡೆಯರ್ ಫ್ಯಾಮಿಲಿಗೂ ಸಲ್ಲಿಸಬೇಕು ಎಂದರು.

ಬೆಂಗಳೂರು ಕೆಂಪೇಗೌಡರು ಯಲಹಂಕದಲ್ಲಿ ಜನಿಸಿ, ಅಲ್ಲಿನ ಪ್ರಾಂತ್ಯದಲ್ಲಿ ಆಳ್ವಿಕೆ ಮಾಡಿದರು. ನಂತರ ವಿಜಯನಗರ ಸಾಮ್ರಾಜ್ಯದ ಅಚ್ಯುತರಾಯರ ಆಳ್ವಿಕೆಯಲ್ಲಿ ಬೆಂಗಳೂರು ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದ ಪ್ರಸಂಗವನ್ನು ವಿವರಿಸಿದರು. ಕೆಂಪೇಗೌಡರ ಆಳ್ವಿಕೆ ಕಾಲದಲ್ಲಿ ಸಾವಿರಾರು ಕೆರೆಗಳ ನಿರ್ಮಾಣವಾಗಿದ್ದವು. ಆ ಕೆರೆಗಳು ತುಂಬಿದಾಗ ನೀರು ಸರಾಗವಾಗಿ ಹರಿದು ಹೋಗಲು ಸಂಪರ್ಕ ಕಾಲುವೆಗಳಿದ್ದವು. ಇಂದು ಆ ಸಂಖ್ಯೆ ಇಳಿಮುಖವಾಗಿವೆ. ಆ ಕೆರೆಗಳು ತುಂಬಿದಾಗ ನೀರು ಸರಾಗವಾಗಿ ಹರಿಯಲು ಸಂಪರ್ಕವಿಲ್ಲ ಎಂದು ವಾಸ್ತವಾಂಶವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಯಾವುದೇ ಮಹನೀಯರ ಜಯಂತಿಯನ್ನು ಕೇವಲ ಆಚರಣೆ, ಊಟಕ್ಕೆ ಸೀಮಿತಗೊಳಿಸದೇ ಅವರ ಆದರ್ಶಗಳನ್ನು ಪಾಲಿಸುವ ಪ್ರಯತ್ನವನ್ನು ಮೊದಲು ನ್ಯಾಯವಾದಿಗಳು ಮಾಡಬೇಕು. ಅದು ಕೆಂಪೇಗೌಡರ ಜಯಂತಿಯಾಗಲೀ ಬೇರೆ ಯಾವುದೇ ಜಯಂತಿಯಾಗಲೀ ಮಹನೀಯರ ಆದರ್ಶವನ್ನು ಅನುಷ್ಠಾನಗೊಳಿಸಬೇಕು. ಈ ಸಂದೇಶವನ್ನು ಸಾರ್ವಜನಿಕರು ಪಾಲಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಸಲಹೆ ನೀಡಿದರು.

> ರಾಜ್ಯ ಗ್ರಾಹಕರ ವ್ಯಾಜ್ಯಗಳ ನ್ಯಾಯಾಲಯದಲ್ಲಿ ಯುವ ವಕೀಲರಿಗೆ ಸಾಕಷ್ಟು ಅವಕಾಶಗಳಿವೆ. ಇದರ ಬಗ್ಗೆ ವಕೀಲರು ಗಮನಹರಿಸಬೇಕು. ಯುವ ವಕೀಲರು, ತಮ್ಮ ಕಕ್ಷಿದಾರರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಬೇಕು.
> – ನ್ಯಾ.ಟಿ.ಜಿ.ಶಿವಶಂಕರೇಗೌಡ, ಅಧ್ಯಕ್ಷರು, ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್ ಮಾತನಾಡಿ, ಕೆಂಪೇಗೌಡರ ದೂರದೃಷ್ಟಿಯ ಫಲವಾಗಿ ಇಂದು ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದೆ. ಅವರ ಆಡಳಿತಾವಧಿಯಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ವ್ಯಾಪಾರ–ವಹಿವಾಟು, ಹಸಿರೀಕರಣ, ನೀರಾವರಿ ಹಾಗೂ ವಿಶಾಲ ರಸ್ತೆ, ಮಾರುಕಟ್ಟೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಕ್ಕೆ ಸಾಕ್ಷಿಗಳಿವೆ ಎಂದರಲ್ಲದೆ, ಮೈಸೂರು ಸಂಸ್ಥಾನದ ಮುಮ್ಮಡಿ ಕೃಷ್ಣರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಜಯಚಾಮರಾಜ ಒಡೆಯರ್ ಸೇರಿದಂತೆ ಇತರೆ ಅರಸರು ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಒತ್ತು ನೀಡಿದ್ದ ಪ್ರಸಂಗವನ್ನು ವಿವರಿಸಿದರು.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಟಿ.ಜಿ.ಶಿವಶಂಕರೇಗೌಡರು ಮಾತನಾಡಿ, 15ನೇ ಶತಮಾನದಲ್ಲಿ ಕೆಂಪೇಗೌಡರು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಅಂದಿನ ಕಾಲದಲ್ಲಿ ಮದುವೆ ಆಗದ ಮಹಿಳೆಯರಿಗೆ 2 ಬೆರಳು ಕಟ್ ಮಾಡುವ ಅನಿಷ್ಟ ಪದ್ಧತಿ ಜಾರಿಯಲ್ಲಿತ್ತು. ಆ ಪದ್ಧತಿಗೆ ಕಡಿವಾಣ ಹಾಕಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸ್ಮರಣೀಯರು, ಹಿಂದುಳಿದ ವರ್ಗದವರಿಗೆ ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಜಾರಿಗೆ ತಂದ ಕೀರ್ತಿ ಸಲ್ಲುತ್ತದೆ. ಅದರಲ್ಲೂ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ವಿವರಿಸಿದರು. ನಾನು ನಿವೃತ್ತಿ ಯಾಗುವ ಮುನ್ನ ಮಹಿಳಾ ಸಬಲೀಕರಣ ಕುರಿತಂತೆ ತೀರ್ಪು ನೀಡುವ ಕೊನೆಯ ಅವಕಾಶದ ಪ್ರಸಂಗವನ್ನು ವಿವರಿಸಿದರು.

ಈ ವೇಳೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ಹಿರಿಯ ನ್ಯಾಯವಾದಿ, ಲಾ ಗೈಡ್ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ, ಜಿಲ್ಲಾ ಹಾಗೂ ತಾಲೂಕು ಹಂತದ ನ್ಯಾಯಾಧೀಶರು, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಖಜಾಂಚಿ ಹೆಚ್.ಜಿ.ಭರತ್, ಜಂಟಿ ಕಾರ್ಯದರ್ಶಿಗಳಾದ ಕೆ.ಆರ್.ಚರಣ್ ರಾಜ್, ಬಿ.ವಿ.ವಿನೋದ್, ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರಾದ ಜಿ.ಎಸ್. ಶಿವಸ್ವಾಮಿ, ಆರ್.ಕನ್ಯಾಕುಮಾರಿ, ಕೆ.ಎಸ್. ಅಂದಾನಿ, ಕೃಷ್ಣ ಎಸ್.ಕಟಾವ್‌ಕರ್, ಪ್ರದೀಪ್ ಜಿಡ್ಡನ್ ಹಾಗೂ ಕಿರಿಯ ಸದಸ್ಯರಾದ ಕೆ.ದೇವರಾಜ, ಎಂ.ಉಮೇಶ್, ಎಂ.ಕಿಶೋರ್ ಕೀರ್ತಿ, ಜೆ.ಲೋಕೇಶ್, ಎಂ.ಬಿ.ದೀಪು ಸೇರಿದಂತೆ ವಕೀಲ ವೃಂದ ಉಪಸ್ಥಿತರಿದ್ದರು.

ಖಾಸಗಿ ವ್ಯಕ್ತಿಗಳಿಂದ ಬನ್ನಿಮಂಟಪದಲ್ಲಿ ಶ್ರೀ ಸಿದ್ಧಾರೂಢ ಶಿಷ್ಯರ ಗದ್ದುಗೆಗಳ ಜಾಗ ಕಬಳಿಕೆ ಯತ್ನ ಆರೋಪ

ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ದೂರು



ಮೈಸೂರಿನ ಬನ್ನಿಮಂಟಪ 'ಎ' ಬಡಾವಣೆಯಲ್ಲಿ ಶ್ರೀ ಸಿದ್ಧಾರೂಢರ ಶಿಷ್ಯರ ಗದ್ದುಗೆಗಳಿದ್ದವು ಎನ್ನಲಾದ ಜಾಗವನ್ನು ಸ್ಥಳೀಯರು ವೀಕ್ಷಿಸಿದರು.

ಮೈಸೂರು, ಜು.25– ಮೈಸೂರಿನ ಬನ್ನಿಮಂಟಪ 'ಎ' ಬಡಾವಣೆಯಲ್ಲಿ ಶ್ರೀ ಸಿದ್ಧಾರೂಢರ ಶಿಷ್ಯರ ಗದ್ದುಗೆಗಳಿರುವ ಜಾಗವನ್ನು ಖಾಸಗಿ ವ್ಯಕ್ತಿಗಳು ಕಬಳಿಸಲು ಯತ್ನಿಸಿರುವ ಆರೋಪ ಕೇಳಿಬಂದಿದೆ.

ಈ ಸಂಬಂಧ ಹಿಂದೂ ಕಾರ್ಯಕರ್ತ ಲೋಹಿತ್ ಅರಸ್, ಬನ್ನಿಮಂಟಪ 'ಎ' ಬಡಾವಣೆಯ ಕೊಲ್ಲಾಪುರದಮ್ಮ ದೇವಸ್ಥಾನದ ಸಿದ್ಧಲಿಂಗೇಶ್ವರ, ರಾಘವೇಂದ್ರ ಮತ್ತಿತರರು ಶುಕ್ರವಾರ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ಕ್ಕೆ ಮನವಿ ಸಲ್ಲಿಸಿ, ತ್ವರಿತ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಇಲ್ಲಿನ ಸಿ.ವಿ.ರಸ್ತೆಯಲ್ಲಿರುವ ನಿವೇಶನ ಸಂಖ್ಯೆ 3ರಲ್ಲಿ ಅತಿಕ್ರಮ ಪ್ರವೇಶವಾಗುತ್ತಿರುವುದು ಕಂಡುಬಂದಿದೆ. ಈ ನಿವೇಶನದಲ್ಲಿ ಸಿದ್ಧಾರೂಢರ ಶಿಷ್ಯರ ಗದ್ದುಗೆಗಳಿದ್ದು, ಅವುಗಳ ರಕ್ಷಣೆ ಮಾಡಬೇಕಾದ ಹೊಣೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಸಾರ್ವಜನಿಕರ ಮೇಲಿದೆ. ಸರ್ಕಾರದ ಆಸ್ತಿಯಾದ ಈ ನಿವೇಶನವನ್ನು ರಕ್ಷಿಸುವುದು ನಿಮ್ಮ ಜವಾಬ್ದಾರಿಯಾಗಿದೆ. ಸಾರ್ವಜನಿಕ ಆಸ್ತಿಯನ್ನು ಕಬಳಿಸಲು ಹೊರಟಿರುವ ಭೂಮಾಫಿಯಾಗೆ ಕಡಿವಾಣ ಹಾಕಿ, ಅತಿಕ್ರಮಣ ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸುವ ಮೂಲಕ ಆಸ್ತಿಯನ್ನು ರಕ್ಷಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸ್ಥಳೀಯರು, ನಿವೇಶನ ಸಂಖ್ಯೆ 3ರಲ್ಲಿ ಸಿದ್ಧಾರೂಢರ ಶಿಷ್ಯರ ಪುಣ್ಯ ಗದ್ದುಗೆಗಳಿದ್ದವು. ಆದರೆ ಪಕ್ಕದ ನಿವೇಶನವನ್ನು ಸಮತಟ್ಟು ಮಾಡುತ್ತಿದ್ದ ಖಾಸಗಿ ವ್ಯಕ್ತಿ, ಗದ್ದುಗೆಗಳಿರುವ ಜಾಗಕ್ಕೂ ಮಣ್ಣು ಮುಚ್ಚಿ ಸಮತಟ್ಟು ಮಾಡಿಸಿದ್ದಾರೆ. ವಿಷಯ ತಿಳಿಸಿದ ನಂತರ ಎಂಡಿಎ ಅಧಿಕಾರಿಗಳು ಸ್ಥಳಕ್ಕಾಮಿಸಿ ಕೆಲಸ ಸ್ಥಗಿತಗೊಳಿಸಿದ್ದಲ್ಲದೆ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದ್ದು, ಸರ್ಕಾರಿ ಜಾಗದ ಜೊತೆಗೆ ಇಲ್ಲಿನ ಗದ್ದುಗೆಗಳ ರಕ್ಷಣೆಗೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ಹರಿದು ಸ್ಕೂಟರ್ ಸವಾರ ಸಾವಿನ ಹಿನ್ನೆಲೆ

ಅಧಿಕಾರಿಗಳೊಂದಿಗೆ ವಿವಿಧೆಡೆ ಶಾಸಕ ಶ್ರೀವತ್ಸ ಸ್ಥಳ ಪರಿಶೀಲನೆ

ರಸ್ತೆ ಅಪಘಾತವಾಗದಂತೆ ತಡೆಯಲು ಸೂಚನೆ



ಮೈಸೂರಿನ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಬಹುದಾದ ಸ್ಥಳಗಳಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಪೊಲೀಸ್ ಹಾಗೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು.

ಮೈಸೂರು, ಜು.25– ರಸ್ತೆ ಅಪಘಾತ ಸಂಭವಿಸದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸೂಚನೆ ನೀಡಿದ್ದಾರೆ.

ವಿವೇಕಾನಂದನಗರದಲ್ಲಿ ನಿನ್ನೆ ಕೆಎಸ್‌ಆರ್‌ಟಿಸಿ ಬಸ್‌ನ ಹಿಂಬದಿ ಚಕ್ರ ಹರಿದು ದ್ವಿಚಕ್ರ ವಾಹನ ಸವಾರ ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ಇಂದು ಸಂಚಾರ ವಿಭಾಗದ ಎಸಿಪಿ ಶಿವಶಂಕರ್, ಕೆ.ಆರ್.ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ಡಿಸಿ ಇನ್ನಿತರ ಅಧಿಕಾರಿಗಳೊಂದಿಗೆ ಕ್ಷೇತ್ರದ ವಿವಿಧೆಡೆ ಸ್ಥಳ ಪರಿಶೀಲನೆ ನಡೆಸಿದರು.

ಪಾಲಿಕೆ ವಲಯ ಕಚೇರಿ 1ರ ವ್ಯಾಪ್ತಿಯ ಅಗ್ರಹಾರ ವೃತ್ತ, ನಂಜುಮಳಿಗೆ ಜಂಕ್ಷನ್, ಫೈಲೆಟ್ ಸರ್ಕಲ್ (ಶ್ರೀನಿವಾಸ ವೃತ್ತ)ನಲ್ಲಿ ಪರಿಶೀಲನೆ ನಡೆಸಿದ ಶಾಸಕರು, ಈ ಜಾಗಗಳೂ ಸೇರಿದಂತೆ ಸಂಚಾರ ದಟ್ಟಣೆ ಹೆಚ್ಚಿರುವ ಹಲವೆಡೆ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ. ನಿನ್ನೆ ವಿವೇಕಾನಂದ ವೃತ್ತದಲ್ಲಿ ದ್ವಿಚಕ್ರ ವಾಹನಕ್ಕೆ ಸಾರಿಗೆ ಸಂಸ್ಥೆ ಬಸ್ ಡಿಕ್ಕಿ ಹೊಡೆದು, ಸವಾರನ ತಲೆ ಮೇಲೆ ಚಕ್ರ ಹರಿದಿದೆ. ಇಂತಹ ದುರ್ಘಟನೆಗಳು ಇನ್ನೆಂದೂ ನಡೆಯದಂತೆ ಸಾರಿಗೆ ಸಂಸ್ಥೆ ಅಧಿಕಾರಿಗಳು ಎಚ್ಚರವಹಿಸಬೇಕು. ಸಂಚಾರ ಪೊಲೀಸರು, ಅಪಘಾತ ಸಂಭವಿಸಬಹುದಾದ ಸ್ಥಳಗಳನ್ನು ಗುರುತಿಸಿ, ಸುಗಮ ಹಾಗೂ ಸುರಕ್ಷಿತ ಸಂಚಾರ ವ್ಯವಸ್ಥೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಈ ವೇಳೆ ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಯಜಗೋಪಾಲ್ ರಾಜ ಅರಸ್, ಮುಖಂಡರಾದ ಜಯರಾಮ್, ಜೈಶಂಕರ್, ಪ್ರದೀಪ್ ಕುಮಾರ್, ಕೀರ್ತಿ ಮತ್ತಿತರರಿದ್ದರು.

ಕೆಬಿಜಿಯವರಿಗೆ ಮೈಸೂರು ಶ್ರೀ ರಾಮಕೃಷ್ಣ ಆಶ್ರಮ ಶ್ರದ್ಧಾಂಜಲಿ



ಮೈಸೂರು, ಜು.25– ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಅವರು ಸಂದೇಶ ಕಳುಹಿಸಿದ್ದು, ನಿಷ್ಠಾವಂತ ಪತ್ರಕರ್ತ ಶ್ರೀ ಕೆ.ಬಿ.ಗಣಪತಿ ಅವರ ಅಗಲಿಕೆಯು ದುಃಖ ಹಾಗೂ ವಿಷಾದವನ್ನುಂಟು ಮಾಡಿದೆ. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಪರವಾಗಿ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಶ್ರೀ ಕೆ.ಬಿ.ಗಣಪತಿ ಅವರ ನಿಧನದಿಂದ ನಮ್ಮ ಮೈಸೂರು ಮಾತ್ರವಲ್ಲದೇ ಇಡೀ ರಾಜ್ಯಕ್ಕೆ ಹಾಗೂ ಪತ್ರಿಕೋದ್ಯಮ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ತಿಳಿಸಿದ್ದಾರೆ.

'ಸ್ಟಾರ್ ಆಫ್ ಮೈಸೂರ್ ಮತ್ತು'ಮೈಸೂರು ಮಿತ್ರ' ಪತ್ರಿಕೆಗಳ ಸಂಪಾದಕರಾಗಿ ಅವರು ತಮ್ಮ ಬರವಣಿಗೆ ಮೂಲಕ ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಅವರ ನಿಷ್ಪಕ್ಷಪಾತ ವರದಿ ಗಾರಿಕೆ ಮತ್ತು ದಿಟ್ಟ ಸಂಪಾದಕೀಯಗಳು ಸದಾ ಮಾದರಿಯಾಗಿವೆ. ಶ್ರೀ ಗಣಪತಿ ಅವರದು ಸಮಾಜಮುಖಿ ಚಿಂತನೆಗಳಿಗೆ ಧರ್ಮ, ನೈತಿಕತೆ ಹಾಗೂ ಯುವ ಶಕ್ತಿಯ ಹಿತಚಿಂತನೆಗಳಿಗೆ ಬದ್ಧರಾದ ವ್ಯಕ್ತಿತ್ವ.

ವಿವೇಕ ಸ್ಮಾರಕ ಯೋಜನೆಗೆ ಸಂಬಂಧಿಸಿದ ಅನೇಕ ಅಪಪ್ರಚಾರಗಳ ನಡುವೆಯೂ ಅವರು ತಮ್ಮ 'ಅಟ್ರಕಡಪ್ಪ' ಅಂಕಣದ ಲೇಖನಗಳ ಮೂಲಕ ಸತ್ಯದ ಪರ ಧ್ವನಿ ಎತ್ತಿದವರು. ಹೈಕೋರ್ಟ್ ತೀರ್ಪಿಗೆ ಅವರು ನೀಡಿದ ಬೌದ್ಧಿಕ ಬೆಂಬಲ ಮತ್ತು ಸರ್ಕಾರದ ಕರ್ತವ್ಯಗಳನ್ನು ಉಲ್ಲೇಖಿಸಿದ ಪ್ರಾಮಾಣಿಕ ಬರಹಗಳು ಜನಜಾಗೃತಿಗೆ ಕಾರಣವಾದವು. ಸವಾಲಿನ ಸಂದರ್ಭಗಳಲ್ಲಿಯೂ ಧೈರ್ಯದಿಂದ ಸತ್ಯವನ್ನು ಎತ್ತಿಹಿಡಿದ ಅವರ ಬದ್ಧತೆ ಪ್ರಶಂಸನೀಯ. ಅವರ ಲೇಖನಗಳು ಮತ್ತು ಸಂಪಾದಕೀಯಗಳು ಜನರಿಗೆ ಸರಿಯಾದ ಮಾಹಿತಿ ನೀಡಿ, ಸತ್ಯದ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ವಿಶೇಷವಾಗಿ ವಿವೇಕ ಸ್ಮಾರಕದ ಪರವಾಗಿ ನಿಂತು ನಮ್ಮ ಆಶ್ರಮಕ್ಕೆ ಅವರು ನೀಡಿದ ಬೆಂಬಲವನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ.

ಕೆ.ಬಿ.ಗಣಪತಿ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಶಾರದಾ ದೇವಿಯವರಲ್ಲಿ ಪ್ರಾರ್ಥಿಸುತ್ತೇವೆ. ಅವರ ಕುಟುಂಬ ಸದಸ್ಯರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇವೆ ಎಂದು ತಿಳಿಸಿದ್ದಾರೆ.

ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಎಕ್ಸ್‌ಪ್ಲೋರ್ ಇಂಡಿಯಾ ಇನ್ ಸ್ಪೇಸ್ –ಸೀಸನ್ 2 ಕಾಸ್ಮಿಕ್ ಜರ್ನಿ ಆಯೋಜನೆ



ಮೈಸೂರು, ಜು.25– ಆಗಸ್ಟ್ 15 ರವರೆಗೆ ಬೆಳಗ್ಗೆ 11 ರಿಂದ ರಾತ್ರಿ 9 ರವರೆಗೆ ನಡೆಯುವ ಅದ್ಭುತ ಬಾಹ್ಯಾಕಾಶ–ವಿಷಯದ ಅನುಭವವಾದ ಎಕ್ಸ್‌ಪ್ಲೋರ್ ಇಂಡಿಯಾ ಇನ್ ಸ್ಪೇಸ್ – ಸೀಸನ್ 2ನೊಂದಿಗೆ ಬ್ರಹ್ಮಾಂಡದ ಅದ್ಭುತಗಳನ್ನು ವೀಕ್ಷಿಸಲು ನೆಕ್ಸಸ್ ಸೆಂಟರ್ ಸಿಟಿ ಮಾಲ್ ಕಾಸ್ಮಿಕ್ ಜರ್ನಿ ಆಯೋಜಿಸಿದೆ. ಕುಟುಂಬಗಳು, ವಿಜ್ಞಾನ ಪ್ರೇಮಿಗಳು ಮತ್ತು ಮಹತ್ವಾಕಾಂಕ್ಷಿ ಗಗನಯಾತ್ರಿಗಳಿಗೆ ಸೂಕ್ತವಾದ ಒಂದು ರೀತಿಯ ಸಂವಾದಾತ್ಮಕ ಪ್ರದರ್ಶನದಲ್ಲಿ ಖಗೋಳಶಾಸ್ತ್ರ ನಾವೀನ್ಯತೆ ಮತ್ತು ಭಾರತೀಯ ಬಾಹ್ಯಾಕಾಶ ಸಾಧನೆಗಳ ಜಗತ್ತಿನಲ್ಲಿ ತೇಲಬಹುದು.

ಶಿಕ್ಷಣ, ಸ್ಫೂರ್ತಿ ಮತ್ತು ಮನರಂಜನೆಗಾಗಿ ವಿನ್ಯಾಸಗೊಳಿಸಲಾದ ವ್ಯಾಪಕ ಶ್ರೇಣಿಯ ಆಕರ್ಷಣೆಗಳು ಮತ್ತು ಅನುಭವಗಳೊಂದಿಗೆ ಕುತೂಹಲ ಮತ್ತು ಆಶ್ಚರ್ಯವನ್ನು ಹುಟ್ಟುಹಾಕಲು ವಿನ್ಯಾಸಗೊಳಿಸಲಾದ ಬಾಹ್ಯಾಕಾಶ–ವಿಷಯದ ಅನುಭವಗಳ ಆಕರ್ಷಕ ಶ್ರೇಣಿಯನ್ನು ನೋಡಬಹುದು.

ಈ ಈವೆಂಟ್ ಪ್ರಾಯೋಗಿಕ ವಿಜ್ಞಾನ ಪ್ರಯೋಗಗಳನ್ನು ಒಳಗೊಂಡಿದೆ. ಭಾಗವಹಿಸುವವರು ಆಕರ್ಷಕ, ಸಂವಾದಾತ್ಮಕ ಸೆಟಪ್‌ಗಳ ಮೂಲಕ ಬಾಹ್ಯಾಕಾಶದ ಮ್ಯಾಜಿಕ್ ಅನ್ನು ಅನ್ವೇಷಿಸಲು ಅನುವು ಮಾಡಿ ಕೊಡುತ್ತದೆ. ಅತಿಥಿಗಳು ವಿಶೇಷ ಇಸ್ರೋ–ವಿಷಯದ ಸರಕುಗಳನ್ನು ಬ್ರೌಸ್ ಮಾಡುವುದರೊಂದಿಗೆ ಖರೀದಿಸಬಹುದು. ಇದು ಭಾರತದ ಅದ್ಭುತ ಬಾಹ್ಯಾಕಾಶ ಪ್ರಯಾಣದ ಒಂದು ಭಾಗವನ್ನು ಮನೆಗೆ ಕೊಂಡೊಯ್ದು ಹೋಗಲು ಪರಿಪೂರ್ಣ ಮಾರ್ಗವಾಗಿದೆ. ವರ್ಚುವಲ್ ಸ್ಪೇಸ್ ಮ್ಯೂಸಿಯಂ ಬಾಹ್ಯಾಕಾಶ ಪರಿಶೋಧನೆಯಲ್ಲಿ ಭಾರತದ ಮೈಲಿಗಲ್ಲುಗಳ ಆಕರ್ಷಕ ದರ್ಶನವನ್ನು ನೀಡುತ್ತದೆ. ಇದನ್ನು ಮೀರಿಸಲು, ಸ್ಕೈ ವಾಚ್ ಖಗೋಳಶಾಸ್ತ್ರ ಸಾಹಸವು ಎಲ್ಲಾ ವಯಸ್ಸಿನ ನಕ್ಷತ್ರವೀಕ್ಷಕರನ್ನು ರಾತ್ರಿ ಆಕಾಶದ ಕೆಳಗೆ ಉನ್ನತ–ಶಕ್ತಿಯ ದೂರದರ್ಶಕಗಳು ಮತ್ತು ಮಾರ್ಗದರ್ಶಿ ಅವಧಿಗಳ ಮೂಲಕ ಆಕಾಶ ಅದ್ಭುತಗಳನ್ನು ವೀಕ್ಷಿಸಲು ಆಹ್ವಾನಿಸುತ್ತದೆ.

ಇನ್ನೆರಡು ತಿಂಗಳಲ್ಲಿ ಒಳ ಮೀಸಲಾತಿ ಜಾರಿ

ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ವಿಶ್ವಾಸ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶುಕ್ರವಾರ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜು.25(ಬಿಎಲ್‌ಯು)– ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಒಳ ಮೀಸಲಾತಿ ಇನ್ನು ಎರಡು ತಿಂಗಳಲ್ಲಿ ಜಾರಿಯಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿ ಮಾಡಲು ರಾಜ್ಯ ಕಾಂಗ್ರೆಸ್ ಸರ್ಕಾರ ವಿಳಂಬ ಮಾಡುತ್ತಿದೆ ಎಂಬ ಸಂಸದ ಗೋವಿಂದ ಕಾರಜೋಳ ಸೇರಿದಂತೆ ಬಿಜೆಪಿ ನಾಯಕರ ಆರೋಪ ಶುದ್ಧ ಸುಳ್ಳು ಎಂದು ಸ್ಪಷ್ಟಪಡಿಸಿದರು.

ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ನೀಡುವ ಸಂಬಂಧ ಸದಾಶಿವ ಆಯೋಗ ಏನು ವರದಿ ನೀಡಿದೆ ಎಂದು ಬಿಜೆಪಿ ಸರ್ಕಾರ ತೆಗೆದು ನೋಡಲಿಲ್ಲ. ಹೀಗಿರುವಾಗ ಸದಾಶಿವ ಆಯೋಗದ ವರದಿಯೇ ಸರಿ ಎಂದು ಹೇಗೆ ವಾದ ಮಾಡುತ್ತಾರೆ ಎಂದು ಡಾ.ತಿಮ್ಮಯ್ಯ ಪ್ರಶ್ನಿಸಿದರು.

ಒಳ ಮೀಸಲಾತಿ ಸಂಬಂಧ ರಾಜ್ಯ ಸರ್ಕಾರ ಈಗ ನ್ಯಾಯಮೂರ್ತಿ ನಾಗಮೋಹನ್ ದಾಸ್ ಏಕ ಸದಸ್ಯ ಆಯೋಗ ರಚಿಸಿದೆ. ಆಯೋಗ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಲಿದೆ. ಇದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ಈ ತಿಂಗಳಾಂತ್ಯಕ್ಕೆ ನಾಗಮೋಹನ್ ದಾಸ್ ಆಯೋಗ ವರದಿ ಮಂಡಿಸಲಿದೆ. ಅದನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಇನ್ನೆರಡು ತಿಂಗಳಲ್ಲಿ ಮೀಸಲಾತಿಯನ್ನು ಸರ್ಕಾರ ಜಾರಿಗೊಳಿಸಲಿದೆ ತಿಳಿಸಿದರು.

ಆಯೋಗದ ಸಮೀಕ್ಷೆಯ ಜೊತೆಗೆ ಕುಲಶಾಸ್ತ್ರ ಅಧ್ಯಯನ ಮಾಡಬೇಕು ಎಂಬ ಕೆಲವರ ಆಗ್ರಹ ಒಪ್ಪುವಂತದ್ದಲ್ಲ ಎಂದು ಡಾ.ತಿಮ್ಮಯ್ಯ ಸ್ಪಷ್ಟನೆ ನೀಡಿದರು.

ಮಾಜಿ ಮೇಯರ್ ನಾರಾಯಣ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮರಯ್ಯ, ಎಡತೊರೆ ನಿಂಗರಾಜು, ಎಂ.ಶಿವಮೂರ್ತಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಲ್ಲಿ ಮರಗಳ ಸಂರಕ್ಷಣೆ ಸಂಬಂಧ ಜಾಗೃತಿ ಜಾಥಾ



ಮೈಸೂರಿನಲ್ಲಿ ಮರಗಳ ಸಂರಕ್ಷಣೆಗೆ ವಾಯ್ಸ್ ಆಫ್ ಪೀಪಲ್ ವತಿಯಿಂದ ಜಾಥಾ ನಡೆಯಿತು.

ಮೈಸೂರು, ಜು.25(ಎಂಕೆ)– 'ವಾಯ್ಸ್ ಆಫ್ ಟ್ರೀ' ಧ್ಯೇಯವಾಕ್ಯದಡಿ ಮೈಸೂರಿನಲ್ಲಿ ಮರಗಳ ಸಂರಕ್ಷಣೆಗೆ ವಾಯ್ಸ್ ಆಫ್ ಪೀಪಲ್ ವತಿಯಿಂದ ಶುಕ್ರವಾರ ಜಾಗೃತಿ ಜಾಥಾ ನಡೆಯಿತು.

ಮೈಸೂರಿನ ಕುವೆಂಪುನಗರದಲ್ಲಿರುವ ಜ್ಯೋತಿ ಶಿಕ್ಷಣ ಸಂಸ್ಥೆಯಿಂದ ಕುವೆಂಪುನಗರದ ಎಂ ಬ್ಲಾಕ್‌ವರೆಗೆ ಕಾಲ್ನಡಿಗೆಯಲ್ಲಿ ಸಾಗಿದ ನೂರಾರು ವಿದ್ಯಾರ್ಥಿಗಳು 'ಮರಗಳ ರಕ್ಷಣೆ ನಮ್ಮೆಲ್ಲರ ಹೊಣೆ', 'ಮರಗಳನ್ನು ನೋಯಿಸಬೇಡಿ', 'ಮರಗಳನ್ನು ರಕ್ಷಿಸಿ' ಎಂಬಿತ್ಯಾದಿ ನಾಮಫಲಕಗಳನ್ನು ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಮರಗಳಿಗೆ ವಿದ್ಯುತ್ ಅಲಂಕಾರಕ್ಕೆ ಮೊಳೆ ಹೊಡೆಯುವುದರಿಂದ ಮರಗಳಲ್ಲಿ 'ಕೆಂಬಿಯಂ' ಪದರ ನಾಶವಾಗುತ್ತಿದೆ. ಇದರಿಂದ ಮರಗಳ ಆಯಸ್ಸು ಕಡಿಮೆಯಾಗುತ್ತದೆ ಎಂಬ ಅರಿವಿನ ಜೊತೆಗೆ ನಮಗೆ ಬದುಕಲು ಎಷ್ಟು ಹಕ್ಕು ಇದೆಯೋ, ಮರಗಳಿಗೆ, ಅದರಲ್ಲಿ ಆಶ್ರಯ ಪಡೆದ ಜೀವಿಗಳಿಗೂ ಅಷ್ಟೇ ಹಕ್ಕಿದೆ ಎಂದು ಪ್ರತಿಪಾದಿಸಿದರು.

ನಗರಪಾಲಿಕೆ ಆರೋಗ್ಯ ವಿಭಾಗದ ಅಧಿಕಾರಿಗಳಾದ ಅಶ್ವತ್, ಶಶಿಕುಮಾರ್, ಉಪ ಅರಣ್ಯಾಧಿಕಾರಿ ಗುರುಮೂರ್ತಿ, ವಕೀಲರಾದ ಹೇಮಂತ್ ಅಪ್ಪಾಜಿಗೌಡ, ಪ್ರದೀಪ್ ಕುಮಾರ್ ಬಿಷ್ಟ್, ನಿಂಗ ರಾಜು, ಕುವೆಂಪುನಗರ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಚಿಕ್ಕಬಸವೇಗೌಡ, ವಾಯ್ಸ್ ಆಫ್ ಪೀಪಲ್‌ನ ಅಧ್ಯಕ್ಷ ವಸಂತ್‌ರಾವ್ ಚವಾಣ್, ಉಪಾಧ್ಯಕ್ಷ ಸುಜಯ್ ಕುಮಾರ್ ಸಿಂಗ್, ಪ್ರಧಾನ ಕಾರ್ಯದರ್ಶಿ ರಾಕೇಶ್, ಖಜಾಂಚಿ ಮಧುಸೂದನ್, ಮಹಿಳಾಧ್ಯಕ್ಷೆ ಶ್ವೇತ, ಸದಸ್ಯರಾದ ಮೀನಾಕ್ಷಿ, ಚಂದ್ರು, ವೇಣು, ಅಂಜಲಿ ಜಿ ರಾವ್, ಪಿ.ಲತಾ, ಜ್ಯೋತಿ ಶಿಕ್ಷಣ ಸಂಸ್ಥೆಯ ಭರತ್ ರಾಜ್ ಮತ್ತಿತರರಿದ್ದರು.

ಹುಟ್ಟುಹಬ್ಬದ ಶುಭ ಕೋರಿಕೆ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಪ್ರಯುಕ್ತ ಕುಂಬಾರಕೊಪ್ಪಲಿನ ಕಾಂಗ್ರೆಸ್ ಮುಖಂಡ ದಳಪತಿ ಆರ್.ರಮೇಶ್ ನೇತೃತ್ವದಲ್ಲಿ ಸನ್ಮಾನಿಸಿ, ಶುಭ ಕೋರಲಾಯಿತು. ಈ ವೇಳೆ ಮುಖಂಡರಾದ ಕದಂಬ ಸುರೇಶ್, ನಂದಿ ಸುರೇಶ್, ಪಿಡಬ್ಲ್ಯುಡಿ ಕಂಟ್ರಾಕ್ಟರ್ ಕಿಶೋರ್, ರಾಮಣ್ಣ, ಶಿವಕುಮಾರ್, ನಾಗೇಂದ್ರ, ಹರೀಶ್, ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆ

ಸಣ್ಣ ತೊರೆಯಾಗಿ ಉದ್ಭವವಾದ ಮೈಸೂರು ವಿವಿ ಇಂದು ದೊಡ್ಡ ನದಿಯಾಗಿ ಹರಿಯುತ್ತಿದೆ

ಕುಲಪತಿ ಪ್ರೊ.ಲೋಕನಾಥ್ ಅಭಿಪ್ರಾಯ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಶುಕ್ರವಾರ ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಬಿನಾ ಶಾ ಫೌಂಡೇಷನ್ ಅಧ್ಯಕ್ಷ ಹರೀಶ್ ಶಾ ಅವರು ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಸವಿತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಎಐ ಸರಿಯಾಗಿ ಬಳಸದಿದ್ದರೆ ಅದೇ ಹೊಸ ಸಮಸ್ಯೆಯಾಗಿ ಕಾಡುತ್ತದೆ

ಕೃತಕ ಬುದ್ಧಿಮತ್ತೆ (ಎಐ) ಸೇರಿದಂತೆ ಇತ್ತೀಚಿನ ತಂತ್ರಜ್ಞಾನಗಳು ಕೆಲವೊಂದು ಸಮಸ್ಯೆಗೆ ಪರಿಹಾರವಾಗಿದೆ. ಆದರೆ ಇದನ್ನು ಸರಿಯಾಗಿ ಬಳಸದೆ ಇದ್ದರೆ ಅದೇ ಹೊಸ ಸಮಸ್ಯೆ ಹುಟ್ಟು ಹಾಕುತ್ತದೆ ಎಂದು ಬಿನಾ ಶಾ ಫೌಂಡೇಷನ್ ಅಧ್ಯಕ್ಷ ಹರೀಶ್ ಶಾ ಎಚ್ಚರಿಸಿದರು.

ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆ ಹಿನ್ನೆಲೆಯಲ್ಲಿ ಜಯಲಕ್ಷ್ಮಿ ವಿಲಾಸ್ ಮ್ಯಾನ್ಷನ್ ಮತ್ತು ಸಾಂಸ್ಕೃತಿಕ ವೇಗವರ್ಧಕವಾಗಿ ಬೆಳೆಯಲು ವಿಶ್ವವಿದ್ಯಾನಿಲಯದ ಪಾತ್ರ ಕುರಿತು ಆಯೋಜಿಸಿದ್ದ ಉಪನ್ಯಾಸದಲ್ಲಿ ಅವರು ಮಾತನಾಡಿದರು. ನಾವು ಸಾಗುವ ಹಾದಿಯಲ್ಲಿ ವೈಯಕ್ತಿಕ ಯಶಸ್ಸಿನ ಬಗ್ಗೆ ಮಾತ್ರ ಯೋಚಿಸದೆ ಉತ್ತಮ ಸಮಾಜದ ನಿರ್ಮಾಣದ ಕಡೆ ಕೂಡ ಗಮನ ಹರಿಸಬೇಕು. ಹವಾಮಾನ ಬದಲಾವಣೆ, ಪರಿಸರದ ಸ್ಥಿತಿ, ಸಾಮಾಜಿಕ ಅಸಮಾನತೆ ಬಗ್ಗೆ ಎಚ್ಚರವಹಿಸಬೇಕು ಎಂದು ಹರೀಶ್ ಶಾ ಸಲಹೆ ನೀಡಿದರು.

ತಂತ್ರಜ್ಞಾನ ಸಮಾಜದ ನಡುವೆ ಅಂತರ ಕಡಿಮೆ ಮಾಡಬಹುದು ಅಥವಾ ಹೆಚ್ಚಿಸಬಹುದು. ಆದರೆ ತಂತ್ರಜ್ಞಾನವನ್ನು ಬಳಸುವುದರ ಮೇಲೆ ಇದು ಅವಲಂಬಿತವಾಗಿರುತ್ತದೆ. ಕಲೆ, ವ್ಯಾಪಾರ, ಸಾರ್ವಜನಿಕ ಸೇವೆ ವೈಯಕ್ತಿಕ ಲಾಭಕ್ಕೆ ಮಾತ್ರ ಸೀಮಿತವಾಗದೆ ಇತರರ ಬದುಕನ್ನು ಉತ್ತಮಗೊಳಿಸಲು ವಿಸ್ತಾರತೆ ಪಡೆಯಬೇಕು ಎಂದು ಹೇಳಿದರು. ಮೈಸೂರಿನ ಜಯಲಕ್ಷ್ಮಿ ವಿಲಾಸ್ ಮ್ಯಾನ್ಷನ್ ಮಹತ್ವಪೂರ್ಣ ಆಸ್ತಿಯಾಗಿದೆ. ಜೊತೆಗೆ ಶ್ರೀಮಂತ ಇತಿಹಾಸದ ಅನೇಕ ಅಧ್ಯಾಯಗಳನ್ನು ಅನಾವರಣಗೊಳಿಸುತ್ತದೆ. ಎರಡು ವರ್ಷದ ಹಿಂದೆ ಮ್ಯೂಸಿಯಂಗೆ ಮೊದಲ ಬಾರಿಗೆ ಭೇಟಿ ನೀಡಿದಾಗ ಅದು ಕೇವಲ ವಸ್ತುಗಳ ಸಂಗ್ರಹಾಲಯವಲ್ಲ, ಕಥೆಗಳ ಸಂಗ್ರಹವಾಗಿದ್ದು, ಇದರ ಇತಿಹಾಸವನ್ನು ಜಗತ್ತಿಗೆ ಸಾರಬೇಕಿದೆ ಎಂದು ಹರೀಶ್ ಶಾ ಅಭಿಪ್ರಾಯಪಟ್ಟರು.

ಮೈಸೂರು, ಜು.25(ಬಿಎಲ್‌ಯು)– ಸಣ್ಣ ತೊರೆಯಾಗಿ ಉದ್ಭವವಾದ ಮೈಸೂರು ವಿಶ್ವವಿದ್ಯಾನಿಲಯ ದಶಕಗಳು ಉರುಳಿದಂತೆ ವಿಶಾಲ ನದಿಯಾಗಿ ಹರಿಯುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಂತಸ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಶುಕ್ರವಾರ ನಡೆದ ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತದಲ್ಲಿ ಮಾತ್ರವಲ್ಲದೆ ವಿಶ್ವದಲ್ಲೆ ಶ್ರೇಷ್ಠ ಸಂವಿಧಾನ ಸ್ಥಾಪನೆಯಾದ ಇತಿಹಾಸದ ಹಿನ್ನೆಲೆಯನ್ನು ವಿವರಿಸಿದರು.

ಬ್ರಿಟಿಷ್ ಆಡಳಿತವಿದ್ದ ಅಂದಿನ ಸಂದರ್ಭದಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯ ಒಪ್ಪಿದರೆ ಮಾತ್ರ ಮೈಸೂರು ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರಲಿದೆ ಎಂದು ಷರತ್ತು ವಿಧಿಸಲಾಗಿತ್ತು. ಉದಕಮಂಡಲ (ಊಟಿ)ದಲ್ಲಿ ನಡೆದ ಮದ್ರಾಸ್ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು ಎಂದು ಪ್ರೊ.ಲೋಕನಾಥ್ ತಿಳಿಸಿದರು.

ಅಂದು ಮೈಸೂರು ರಾಜ್ಯದಲ್ಲಿ ದಿವಾನರಾಗಿದ್ದ ಸರ್ ಎಂ.ವಿ.ವಿಶ್ವೇಶ್ವರಯ್ಯ ಅವರು ಮದ್ರಾಸ್ ವಿಶ್ವವಿದ್ಯಾನಿಲಯದವರನ್ನು ಮನವೊಲಿಸುವಲ್ಲಿ ಯಶಸ್ವಿಯಾದರು. ಇದರ ಫಲವಾಗಿ ಅಕ್ಟೋಬರ್ 12, 1916ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಸೆನೆಟ್ ಸಭೆ ನಡೆಯಿತು ಎಂದು ಹೇಳಿದರು.

ಆಗ ಸೆನೆಟ್ ಸಭೆಯನ್ನುದ್ದೇಶಿಸಿ ಮಾತನಾಡಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಒಂದು ರಾಷ್ಟ್ರೀಯ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬ ಪ್ರಜೆಗಳ ಬಯಕೆ ಈಡೇರಿರುವುದು ಚರಿತ್ರಾರ್ಹ ಸನ್ನಿವೇಶವಾಗಿದೆ. ಇದು ಕೇವಲ ಮೈಸೂರು ಪ್ರಾಂತ್ಯದ ಅಗತ್ಯವನ್ನಷ್ಟೆ ಅಲ್ಲದೆ ಇಡೀ ಕರ್ನಾಟಕದ ಬೌದ್ಧಿಕ ಪ್ರಗತಿಗೆ ಕಾರಣವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಭವಿಷ್ಯ ನುಡಿದಿದ್ದರು.

ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಾಡಿನ ಸರ್ವತೋಮುಖ ಏಳಿಗೆಗಾಗಿ, ದೂರದೃಷ್ಟಿಯಿಂದ ತ್ರಿಕರಣಪೂರ್ವಕವಾಗಿ ದುಡಿದ ಶ್ರೇಷ್ಠ ದೊರೆಯಾಗಿದ್ದರು. ಈ ಕಾರಣದಿಂದಲೇ ನಾಲ್ವಡಿ ಅವರನ್ನು ಮಹಾತ್ಮಾ ಗಾಂಧಿ ಅವರು ರಾಜರ್ಷಿ ಎಂದು ಸಂಬೋಧಿಸಿ ಗೌರವಿಸಿದ್ದರು ಎಂದು ಪ್ರೊ.ಲೋಕನಾಥ್ ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇಟ್ಟ ಒಂದೊಂದು ಹೆಜ್ಜೆಯೂ ನಾಡಿನ ಪ್ರಗತಿಯ ಮಹತ್ವದ ಮೈಲಿಗಲ್ಲಾಗಿದೆ. ಶಿಕ್ಷಣ, ಸಂಸ್ಕೃತಿ, ಕೃಷಿ, ಕೈಗಾರಿಕೆ, ಕ್ರೀಡೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸ್ಮರಣೀಯ ಸಾಧನೆ ಮಾಡಿದ್ದಾರೆ ಎಂದು ತಿಳಿಸಿದರು.

ಮೈಸೂರನ್ನು ಒಂದು ಮಾದರಿ ಸಂಸ್ಥಾನವಾಗಿ ಮಾಡಬೇಕು ಎಂಬ ಸಂಕಲ್ಪವನ್ನು ನಾಲ್ವಡಿ ಅವರು ಕೊಟ್ಟಿದ್ದರು. ನಾಲ್ವಡಿ ಅವರ ದೂರದೃಷ್ಟಿಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರು ಅದನ್ನು ಸಾಕಾರಗೊಳಿಸಿದರು ಎಂದು ಪ್ರೊ.ಲೋಕನಾಥ್ ಹೇಳಿದರು.

ಬಿನಾ ಶಾ ಫೌಂಡೇಷನ್ ಅಧ್ಯಕ್ಷರೂ ಆದ ಸಿಗ್ನೆಟ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ಹರೀಶ್ ಶಾ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಸವಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ವ್ಯಕ್ತಿತ್ವ ವಿಕಸನ ಶಿಬಿರ

ಮೈಸೂರು, ಜು. 25– ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಸಂಯುಕ್ತಾಶ್ರಯದಲ್ಲಿ ಆಗಸ್ಟ್‌ನಿಂದ ನವೆಂಬರ್‌ವರೆಗೆ ಪ್ರತಿ ತಿಂಗಳು ಸುತ್ತೂರು ಶ್ರೀಕ್ಷೇತ್ರ ಹಾಗೂ ಬಿಳಿಗಿರಿರಂಗನ ಬೆಟ್ಟದಲ್ಲಿ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನ ಹಾಗೂ ದಿವ್ಯ ಆಶೀರ್ವಾದದೊಂದಿಗೆ ಆಯೋಜಿಸಲಾಗಿದೆ. 5–10 ಆಗಸ್ಟ್, 6 ದಿನಗಳು ಸುತ್ತೂರು ಶ್ರೀಕ್ಷೇತ್ರ; 9–14 ಸೆಪ್ಟೆಂಬರ್, 6 ದಿನಗಳು ಸುತ್ತೂರು ಶ್ರೀಕ್ಷೇತ್ರ; 7–12 ಅಕ್ಟೋಬರ್, 6 ದಿನಗಳು ಸುತ್ತೂರು ಶ್ರೀಕ್ಷೇತ್ರ; 11–16 ನವೆಂಬರ್ 6 ದಿನಗಳು, ಬಿಳಿಗಿರಿರಂಗನ ಬೆಟ್ಟ. ಈ ಶಿಬಿರಗಳಲ್ಲಿ ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಧಾರ್ಮಿಕ ಚಿಂತನ–ಮಂಥನ, ದೇಸಿ ಆಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಚಾರ ವಿಭಾಗದಲ್ಲಿ ನೇರವಾಗಿ ಅಥವಾ ಬಿ. ರಾಜೇಶ್ ಅವರನ್ನು 0821–2548212 ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದಾಗಿದೆ.

ಅಭಿನಂದನೆ



ಹುಟ್ಟುಹಬ್ಬದ ಅಂಗವಾಗಿ ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಅವರನ್ನು ಕೆ.ಜಿ.ಕೊಪ್ಪಲ್ ಗ್ರಾಮಸ್ಥರಿಂದ ಅಭಿನಂದಿಸಲಾಯಿತು. ಈ ವೇಳೆ ಗ್ರಾಮದ ಮುಖಂಡರಾದ ಚೆನ್ನಪ್ಪ, ಗಂಗಣ್ಣ, ಕೆ.ಜಿ. ಕೊಪ್ಪಲ್ ರಾಜಣ್ಣ, ಶೇಖರ್, ಪುಟ್ಟಣ್ಣ, ದೇವರಾಜ್, ನಾಗಣ್ಣ, ಲೋಕೇಶ್, ಭಾಸ್ಕರ್ ಸಿ. ಇನ್ನಿತರರಿದ್ದರು.

'ನಾವು ಮಾಡಬಹುದು; ನಾವು ಮಾಡುತ್ತೇವೆ' ಧ್ಯೇಯ ವಾಕ್ಯದಡಿ

ಸಿಐಐನ ವೈಐ ವತಿಯಿಂದ ಯುವ ಸಮಾವೇಶ

ಮೈಸೂರು, ಜು.25(ಎಂಕೆ)– ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಪಟೇಲ್ ಕನ್ವೆನ್ಷನ್ ಹಾಲ್‌ನಲ್ಲಿ 'ನಾವು ಮಾಡಬಹುದು, ನಾವು ಮಾಡುತ್ತೇವೆ' ಧ್ಯೇಯ ವಾಕ್ಯದೊಂದಿಗೆ ಭಾರತೀಯ ಕೈಗಾರಿಕಾ ಒಕ್ಕೂಟ(ಸಿಐಐ)ದ ಯಂಗ್ ಇಂಡಿಯನ್ಸ್ (ವೈಐ) ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ 'ಯಂಗ್ ಇಂಡಿಯಾ ಪಾರ್ಲಿಮೆಂಟ್–2025' ಯುವ ಸಮಾವೇಶಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮೈಸೂರಿನ ಯುವ ದಾರ್ಶನಿಕರು, ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು ಒಂದೇ ವೇದಿಕೆಯಲ್ಲಿ ರಾಷ್ಟ್ರ ನಿರ್ಮಾಣ, ಭಾರತದ ಬೆಳವಣಿಗೆ ಮತ್ತು ಭವಿಷ್ಯದ ಮೇಲೆ ಪರಿಣಾಮ ಬೀರುವ ಅಂಶಗಳು, ನಾಯಕತ್ವ ಗುಣ ಬೆಳೆಸಿಕೊಳ್ಳುವುದು ಸೇರಿದಂತೆ ಯುವ ಪೀಳಿಗೆಯಲ್ಲಿ ನಾಗರಿಕ ಜವಾಬ್ದಾರಿ ಕುರಿತು ಕ್ರಿಯಾತ್ಮಕ ಚರ್ಚೆಗಳನ್ನು ನಡೆಸಲಾಯಿತು.

ಹವಾಮಾನ ಬದಲಾವಣೆ, ಸಾಮಾಜಿಕ ನ್ಯಾಯ, ಉದ್ಯೋಗ ಮತ್ತು ಉದ್ಯಮಶೀಲತೆ, ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ, ಡಿಜಿಟಲ್ ಭಾರತ, ಆರೋಗ್ಯ ಮತ್ತು ಯೋಗಕ್ಷೇಮ, ಆರ್ಥಿಕ ಬೆಳವಣಿಗೆ, ರಾಷ್ಟ್ರೀಯ ಭದ್ರತೆ, ಕ್ರೀಡೆ ಮತ್ತು ಅಭಿವೃದ್ಧಿಯಂತಹ ಪ್ರಮುಖ ವಿಷಯಗಳನ್ನು ಮಂಡಿಸಲಾಯಿತು.



ಭಾರತೀಯ ಕೈಗಾರಿಕಾ ಒಕ್ಕೂಟ(ಸಿಐಐ)ದ ಯಂಗ್ ಇಂಡಿಯನ್ಸ್ (ವೈಐ) ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ 'ಯಂಗ್ ಇಂಡಿಯಾ ಪಾರ್ಲಿಮೆಂಟ್–2025' ಯುವ ಸಮಾವೇಶಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಯಂಗ್ ಇಂಡಿಯನ್ಸ್ ಮೈಸೂರು ಚಾಪ್ಟರ್ ಅಧ್ಯಕ್ಷ ಗಗನ್ ರಂಕಾ ಮಾತನಾಡಿ, ಸಮಾವೇಶವು ನಾಳಿನ ನಾಯಕರನ್ನು ರೂಪಿಸುವ ಒಂದು ಚಳುವಳಿಯಾಗಿದೆ. ಅರ್ಥಪೂರ್ಣ ಚರ್ಚೆಗಳು ಮತ್ತು ನಿರ್ಧಾರ ತೆಗೆದುಕೊಳ್ಳುವ ಸದೃಢ ಮನಸ್ಸು ಯುವಕರಲ್ಲಿ ಬರಬೇಕು ಎಂದರು.

ರಾಜಕೀಯ ಒಂದು ಆಯ್ಕೆಯಾಗಬೇಕು: ಯುವ ಉದ್ಯಮಿ ಪ್ರಿಯಾಂಕ ಶ್ರೀಧರ್ ಮಾತನಾಡಿ, ಯುವಜನರು ರಾಜಕೀಯ ಕ್ಷೇತ್ರವನ್ನು ವೃತ್ತಿ ಜೀವನವನ್ನಾಗಿ ಆಯ್ಕೆ ಮಾಡಿಕೊಳ್ಳುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಶ್ರಮಿಸಬೇಕು. ಈ ನಿಟ್ಟಿನಲ್ಲಿ ಯಂಗ್ ಇಂಡಿಯಾ ಪಾರ್ಲಿಮೆಂಟ್ ಪ್ರೇರಣೆ ನೀಡಲಿದೆ ಎಂದು ತಿಳಿಸಿದರು.

100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿ: ಸಮಾವೇಶದಲ್ಲಿ ಭಾರತೀಯ ವಿದ್ಯಾ ಭವನ, ದಕ್ಷ ಪಿಯು ಕಾಲೇಜು, ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್, ಮಾನಸ ಸರೋವರ ಪುಷ್ಕರಿಣಿ ವಿದ್ಯಾಶ್ರಮ, ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, ಸರ್ಕಾರಿ ಆದರ್ಶ ವಿದ್ಯಾಲಯ, ಆರ್ಕಿಡ್ಸ್ ಪಬ್ಲಿಕ್ ಸ್ಕೂಲ್, ನಂಜನಗೂಡಿನ ರೋಟರಿ ಸ್ಕೂಲ್ ಸೇರಿದಂತೆ ವಿವಿಧ ಶಾಲಾ–ಕಾಲೇಜುಗಳಿಂದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ...!

ಯಂಗ್ ಇಂಡಿಯಾ ಪಾರ್ಲಿಮೆಂಟ್ ಸಮಾವೇಶಗಳು ನಗರ ಮಟ್ಟದ ಸುತ್ತು ಮುಗಿದ ನಂತರ ಪ್ರಾದೇಶಿಕ ಮಟ್ಟ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಡೆಯಲಿದೆ. ದೆಹಲಿಯ ಸಂಸತ್ ಭವನದಲ್ಲಿ ನಡೆಯುವ ರಾಷ್ಟ್ರ ಮಟ್ಟ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ.

ದೇಶ – ವಿದೇಶ

ಉಲ್ಲು, ಎಎಲ್‌ಟಿ ಬಾಲಾಜಿ ಸೇರಿ 25 ಒಟಿಟಿಗಳಿಗೆ ಕೇಂದ್ರ ಸರ್ಕಾರ ನಿಷೇಧ

ನವದೆಹಲಿ: ಅಶ್ಲೀಲ ಕಂಟೆಂಟ್ ಪ್ರಸಾರ ಮಾಡುತ್ತಿವೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಉಲ್ಲು, ಎಎಲ್‌ಟಿ ಬಾಲಾಜಿ ಸೇರಿ 25 ಒಟಿಟಿಗಳಿಗೆ ನಿಷೇಧ ಹೇರಿದೆ.

ಅಶ್ಲೀಲ ಕಂಟೆಂಟ್ ಅನ್ನು ಮಾತ್ರವೇ ಪ್ರಸಾರ ಮಾಡುವ ಹಲವಾರು ಒಟಿಟಿಗಳು ಅಪ್ಲಿಕೇಶನ್‌ಗಳನ್ನು ಕೇಂದ್ರ ಸರ್ಕಾರ ಶುಕ್ರವಾರ ನಿಷೇಧಿಸಿದೆ. ಈ ಪೈಕಿ ಈ ಆಪ್‌ಗಳೂ ಸೇರಿವೆ ಎನ್ನಲಾಗಿದೆ. ಈ ಎರಡೂ ಒಟಿಟಿಗಳು ಸೇರಿ ಬರೋಬ್ಬರಿ 25 ಒಟಿಟಿ ಮತ್ತು ಅಪ್ಲಿಕೇಶನ್‌ಗಳ ಮೇಲೆ ನಿಷೇಧ ಹೇರಿ ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಇಲಾಖೆಯು ಆದೇಶ ಹೊರಡಿಸಿದೆ.

ಉಲ್ಲು ಮತ್ತು ಆಲ್ಟ್ ಬಾಲಾಜಿ ಒಟಿಟಿಗಳು ಭಾರತದ ಟಾಪ್ 10 ಒಟಿಟಿಗಳಲ್ಲಿ ಸ್ಥಾನ ಪಡೆದಿದ್ದವು ಆದರೆ ಈಗ ಅವುಗಳ ಮೇಲೆ ಸರ್ಕಾರ ನಿಷೇಧ ಹೇರಿದೆ. ಈ ಒಟಿಟಿಗಳು ಭಾರತದ ಪ್ರಸಾರ ಕಾಯ್ದೆಯನ್ನು ಉಲ್ಲಂಘಿಸಿ ಅಶ್ಲೀಲ ಕಂಟೆಂಟ್ ಅನ್ನು ಪ್ರಚಾರ ಮತ್ತು ಪ್ರಸಾರ ಮಾಡುತ್ತಿವೆ ಎಂಬ ಕಾರಣ ನೀಡಿ ಮಾಹಿತಿ ಮತ್ತು ಪ್ರಸಾರ ಇಲಾಖೆಯು 25 ಒಟಿಟಿಗಳ ಮೇಲೆ ನಿಷೇಧ ಹೇರಿದೆ.

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ 6 ತಿಂಗಳು ವಿಸ್ತರಣೆ



ಇಂಫಾಲ: ಹಿಂಸಾಚಾರ ಪೀಡಿತ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಇನ್ನೂ 6 ತಿಂಗಳ ಕಾಲ ವಿಸ್ತರಿಸಲು ರಾಜ್ಯಸಭೆ ಅನುಮೋದನೆ ನೀಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಮಂಡಿಸಿದ ಪ್ರಸ್ತಾವನೆಯನ್ನು ಸದನವು ಅಂಗೀಕರಿಸಿದೆ.

ಮಣಿಪುರಕ್ಕೆ ಸಂಬಂಧಿಸಿದಂತೆ ಸಂವಿಧಾನದ 356ನೇ ವಿಧಿ ಅನ್ವಯ 2025ರ ಫೆಬ್ರವರಿ 13ರಂದು ರಾಷ್ಟ್ರಪತಿಗಳು ನೀಡಿದ ಸುಗ್ರೀವಾಜ್ಞೆಯನ್ನು 2025ರ ಆಗಸ್ಟ್ 13ರಿಂದ ಆರು ತಿಂಗಳ ಕಾಲ ಮುಂದುವರಿಸಲು ಸದನ ಒಪ್ಪಿಗೆ ನೀಡಬೇಕಿದೆ ಎಂದು ಸದನದಲ್ಲಿ ಮಂಡಿಸಲಾದ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಮಣಿಪುರದಲ್ಲಿ ಸತತವಾಗಿ ಜನಾಂಗೀಯ ಹಿಂಸಾಚಾರ ನಡೆದ ಹಿನ್ನಲೆಯಲ್ಲಿ 2023ರ ಫೆಬ್ರವರಿ 13ರಂದು 6 ತಿಂಗಳ ಕಾಲ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿತ್ತು.

ಪಾಕಿಸ್ತಾನದಲ್ಲಿ ಮಳೆಗೆ ಒಂದೇ ತಿಂಗಳಲ್ಲಿ 266 ಮಂದಿ ಬಲಿ

ಪೇಶಾವರ: ಪಾಕಿಸ್ತಾನದಾದ್ಯಂತ ಸುರಿಯುತ್ತಿರುವ ಧಾರಾಕಾರ ಮಳೆಗೆ ಜೂನ್ 26 ರಿಂದ 126 ಮಕ್ಕಳು ಸೇರಿದಂತೆ ಕನಿಷ್ಠ 266 ಜನರು ಸಾವಿಗೀಡಾಗಿದ್ದು, 628 ಜನರು ಗಾಯಗೊಂಡಿದ್ದಾರೆ ಎಂದು ದೇಶದ ವಿಪತ್ತು ನಿರ್ವಹಣಾ ಸಂಸ್ಥೆ ಶುಕ್ರವಾರ ತಿಳಿಸಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ತನ್ನ ಇತ್ತೀಚಿನ ವರದಿಯಲ್ಲಿ, ಕಳೆದ 24 ಗಂಟೆಗಳಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ 14 ಜನರು ಸಾವಿಗೀಡಾಗಿದ್ದಾರೆ ಮತ್ತು 17 ಜನರು ಗಾಯಗೊಂಡಿದ್ದಾರೆ ಎಂದು ತಿಳಿಸಿದೆ.

ಒಟ್ಟು ಮೃತಪಟ್ಟವರ ಪೈಕಿ 94 ಪುರುಷರು, 46 ಮಹಿಳೆಯರು ಮತ್ತು 126 ಮಕ್ಕಳು ಸೇರಿದ್ದಾರೆ. ಪಂಜಾಬ್‌ನಲ್ಲಿ ಅತಿ ಹೆಚ್ಚು 144 ಸಾವುನೋವುಗಳು ಸಂಭವಿಸಿವೆ. ನಂತರ ಖೈಬರ್ ಪಖ್ತುಂಖ್ವಾದಲ್ಲಿ 63, ಸಿಂಧ್‌ನಲ್ಲಿ 25, ಬಲೂಚಿಸ್ತಾನದಲ್ಲಿ 16, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 10 ಮತ್ತು ಇಸ್ಲಾಮಾಬಾದ್‌ನಲ್ಲಿ ಎಂಟು ಸಾವುನೋವುಗಳು ಸಂಭವಿಸಿವೆ. ಪಂಜಾಬ್‌ನಲ್ಲಿ 488, ಖೈಬರ್ ಪಖ್ತುಂಖ್ವಾದಲ್ಲಿ 69, ಸಿಂಧ್‌ನಲ್ಲಿ 40, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 18, ಬಲೂಚಿಸ್ತಾನದಲ್ಲಿ ನಾಲ್ಕು ಮತ್ತು ಇಸ್ಲಾಮಾಬಾದ್‌ನಲ್ಲಿ ಮೂವರಿಗೆ ಗಾಯಗಳಾಗಿವೆ.

ತರ್ಬೆಲಾ ಅಣೆಕಟ್ಟಿನ ಹೊರಹರಿವಿನಿಂದ ಸಿಂಧೂ ನದಿ ಉಬ್ಬರ ಹೆಚ್ಚುತ್ತಿರುವ ಕಾರಣ, ಅಟಾಕ್‌ನ ಖಾಬ್‌ನಲ್ಲಿ ಗಂಭೀರ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ.

ಥಾಯ್ಲೆಂಡ್ ಪ್ರವಾಸ ಸದ್ಯಕ್ಕೆ ಬೇಡ: ಭಾರತೀಯರಿಗೆ ವಿದೇಶಾಂಗ ಸಚಿವಾಲಯ ಸೂಚನೆ

ಬ್ಯಾಂಕಾಕ್: ಥೈಲ್ಯಾಂಡ್ ಮತ್ತು ಕಾಂಬೋಡಿಯಾ ನಡುವಿನ ಸಂಘರ್ಷವು ವಿವಾದಿತ ಗಡಿಯಲ್ಲಿ ಮತ್ತೊಮ್ಮೆ ಭುಗಿಲೆದ್ದಿದ್ದು, ಬಿಗುವಿನ ವಾತಾವರಣ ಸೃಷ್ಟಿಯಾಗಿದೆ. ಈ ಹಿನ್ನಲೆಯಲ್ಲಿ ಥಾಯ್ಲೆಂಡ್‌ನಲ್ಲಿ ನೆಲೆಸಿರುವ ಭಾರತೀಯರಿಗೆ ಭಾರತೀಯ ರಾಯಭಾರ ಕಚೇರಿ ಸಲಹೆಗಳನ್ನು ನೀಡಿದೆ. ಥಾಯ್ಲೆಂಡ್‌ನಲ್ಲಿ ನೆಲೆಸಿರುವ ಭಾರತೀಯರು ಎಚ್ಚರ ವಹಿಸಬೇಕು ಮತ್ತು ಭಾರತದಿಂದ ಬರುವವರು ಸದ್ಯಕ್ಕೆ ಪ್ರವಾಸ ಮುಂದೂಡಬೇಕು ಎಂದು ಥಾಯ್ಲೆಂಡ್‌ನಲ್ಲಿರುವ ರಾಯಭಾರ ಕಚೇರಿ ಪ್ರಕಟಣೆ ಹೊರಡಿಸಿದೆ.

ಉಭಯ ರಾಷ್ಟ್ರಗಳ ನಡುವೆ ಕಳೆದ ಗುರುವಾರದಿಂದ ಯುದ್ಧ ಆರಂಭವಾಗಿದೆ. ಸಂಘರ್ಷದಲ್ಲಿ ಕನಿಷ್ಠ 11 ಜನ ಮೃತಪಟ್ಟು ಹಲವರು ಗಾಯಗೊಂಡಿದ್ದಾರೆ ಎಂದು ಥಾಯ್ ಸರ್ಕಾರಿ ಸ್ವಾಮ್ಯದ ಪ್ರಸಾರ ಇಲಾಖೆ ಮಾಹಿತಿ ನೀಡಿದೆ.

ಥಾಯ್ಲೆಂಡ್ ಮತ್ತು ಕಾಂಬೋಡಿಯಾ ಗಡಿಯ ಪ್ರಸ್ತುತದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪರಿಸ್ಥಿತಿಯ ಮಾಹಿತಿಯನ್ನು ಪ್ರವಾಸಿಗರು ಥಾಯ್ ಅಧಿಕಾರಿಗಳಿಂದ ಪಡೆಯಬಹುದು ಎಂದು ಅಲ್ಲಿನ ಸರ್ಕಾರ ಎಕ್ಸ್ ಖಾತೆಯಲ್ಲಿ ಹೇಳಿದೆ. 'ಉಬಾನ್ ರಚ್ಚಥನಿ, ಸುರಿನ್, ಸಿಸಾಕೆಟ್, ಬುರಿರಾಮ್, ಸಾಕೋ, ಚಂತಬುರಿ ಮತ್ತು ಟ್ರಾಟ್ ಪ್ರಾಂತ್ಯಗಳ ಭೇಟಿಯನ್ನು ಥಾಯ್ಲೆಂಡ್ ಶಿಫಾರಸು ಮಾಡುವುದಿಲ್ಲ' ಎಂದು ಹೇಳಿದೆ.


ಬ್ರಿಟನ್ ದೊರೆಗೆ ವಿಶೇಷ ಉಡುಗೊರೆ ನೀಡಿದ ಪ್ರಧಾನಿ ಮೋದಿ



ಲಂಡನ್: ಪ್ರಧಾನಿ ನರೇಂದ್ರ ಮೋದಿ ಅವರು, ಬ್ರಿಟನ್ ದೊರೆ 3ನೇ ಕಿಂಗ್ಸ್ ಚಾರ್ಲ್ಸ್ ಅವರನ್ನು ಗುರುವಾರ ಭೇಟಿಯಾದರು. ಈ ವೇಳೆ ಅವರು ಚಾರ್ಲ್ಸ್ ಅವರಿಗೆ ವಿಶೇಷ ಉಡುಗೊರೆಯೊಂದನ್ನು ನೀಡಿದ್ದಾರೆ.

'ಏಕ್ ಪೇಡ್ ಮಾ ಕೆ ನಾಮ್' (ತಾಯಿಯ ಹೆಸರಿನಲ್ಲಿ ಒಂದು ಮರ) ಅಭಿಯಾನದ ಭಾಗವಾಗಿ 3ನೇ ಕಿಂಗ್ ಚಾರ್ಲ್ಸ್ ಅವರಿಗೆ ಗಿಡವೊಂದನ್ನು ಪ್ರಧಾನಿ ಮೋದಿ ಉಡುಗೊರೆಯಾಗಿ ನೀಡಿದ್ದಾರೆ. ಈ ಬಗ್ಗೆ ರಾಜಮನೆತನ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದೆ. ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದವೊಂದಕ್ಕೆ ಭಾರತ ಮತ್ತು ಬ್ರಿಟನ್ ಗುರುವಾರ ಸಹಿ ಮಾಡಿವೆ. ಇದು ಎರಡೂ ದೇಶಗಳ ಪಾಲಿಗೆ ಐತಿಹಾಸಿಕ ದಿನ ಎಂದು ನಾನು ಭಾವಿಸಿದ್ದೇನೆ. ನಾವು ನೀಡಿದ್ದ ಭರವಸೆಯನ್ನು ಈಡೇರಿಸುತ್ತಿರುವುದಕ್ಕೆ ನನಗೆ ಸಂತಸವಾಗುತ್ತಿದೆ ಎಂದು ಬ್ರಿಟನ್ ಪ್ರಧಾನಿ ಕೀಯರ್ ಸ್ಟಾರ್ಮರ್ ಹೇಳಿದ್ದಾರೆ.

ಬಲ್ಲಮಾವಟಿಯಲ್ಲಿ ಮರ ಬಿದ್ದು ವಿದ್ಯುತ್ ಸಂಪರ್ಕ ಕಡಿತ



ನಾಪೋಕ್ಲು: ಸಮೀಪದ ಬಲ್ಲಮಾವಟಿ ಗ್ರಾಮದ ಶ್ರೀ ಭಗವತಿ ದೇವಾಲಯದ ಬಳಿ ಮರ ಬಿದ್ದ ಪರಿಣಾಮ ಎರಡು ವಿದ್ಯುತ್ ಕಂಬಗಳು ಮುರಿದುಬಿದ್ದು ವಿದ್ಯುತ್ ಸಂಪರ್ಕ ಕಡಿತಗೊಂಡಿತು. ಇದರಿಂದ ಕೆಲಕಾಲ ಮುಖ್ಯರಸ್ತೆ ಸಂಪರ್ಕ ಸ್ಥಗಿತಗೊಂಡಿತ್ತು.

ಬಲ್ಲಮಾವಟಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಚೋಕಿರ ಬಾಬಿ ಭೀಮಯ್ಯ ಹಾಗೂ ಸೆಸ್ಕ್ ಇಲಾಖೆಯ ಸಿಬ್ಬಂದಿ ದುರಸ್ತಿಕಾರ್ಯ ಕೈಗೊಂಡರು.

ಪೊನ್ನಂಪೇಟೆ, ಕುಶಾಲನಗರದಲ್ಲಿ ಶೀಘ್ರದಲ್ಲೇ ತಾಲೂಕು ಆಡಳಿತ ಭವನ : ಕೃಷ್ಣ ಬೈರೇಗೌಡ

ಮಡಿಕೇರಿ, ಜು.25–'ಪೊನ್ನಂಪೇಟೆ ಮತ್ತು ಕುಶಾಲನಗರ ತಾಲೂಕು ಘೋಷಣೆಯಾಗಿ 7 ವರ್ಷ ಕಳೆದಿದೆ. ಆ ದಿಸೆಯಲ್ಲಿ ಸರ್ಕಾರ ಪ್ರಜಾಸೌಧ ಹೆಸರಿನಲ್ಲಿ ಎರಡು ಆಡಳಿತ ಸೌಧ ನಿರ್ಮಾಣಕ್ಕೆ ತಲಾ 8.65 ಕೋಟಿ ರೂ.ವನ್ನು ಮಂಜೂರು ಮಾಡಿರುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಆಡಳಿತ ಸೌಧ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಸಹ ಆಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಗೆ ಚಾಲನೆ ದೊರೆಯಲಿದೆ ಎಂದು ಬಹಿರಂಗ ಪಡಿಸಿದರು. ಪೊನ್ನಂಪೇಟೆ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಭೂಸುರಕ್ಷತೆ ಮತ್ತು ಕಂದಾಯ ದಾಖಲೆ ಡಿಜಿಟಲೀಕರಣ ಪ್ರಕ್ರಿಯೆ ಸಂಬಂಧ ಮಾಹಿತಿ ಪಡೆದರು.

ಸರ್ಕಾರ ಭೂಸುರಕ್ಷತಾ ಯೋಜನೆಯಡಿ ಸಾರ್ವಜನಿಕರಿಗೆ ಕಂದಾಯ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಕಲ್ಪಿಸುತ್ತಿರುವುದರಿಂದ ತಹಶೀಲ್ದಾರ್ ಕಚೇರಿಯಲ್ಲಿ ಅಪ್‌ಡೇಟ್ ಮಾಡಿರುವ ಬಗ್ಗೆ ಸಚಿವರು ಮಾಹಿತಿ ಪಡೆದರು.



ಮಳೆ ಹಾನಿ ಪ್ರದೇಶ, ತಾಲೂಕು ಆಡಳಿತ ಭವನ ನಿರ್ಮಾಣದ ಜಾಗ, ಬಲ್ಯ ಮಂಡೂರು ಸೇತುವೆಗಳನ್ನು ಶಾಸಕ ಪೊನ್ನಣ್ಣರೊಂದಿಗೆ ಸಚಿವರು ವೀಕ್ಷಿಸಿದರು.

ಸರ್ಕಾರ ಕಂದಾಯ ಇಲಾಖೆಯಲ್ಲಿ ಭೂದಾಖಲೆಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಸುಧಾರಣೆ ತಂದಿದ್ದು, ಅವನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು. ಯಾವುದೇ ಕಾರಣಕ್ಕೂ ವಿಳಂಬ ಅನುಸರಿಸಬಾರದು ಭೂ ದಾಖಲೆ ಸಂರಕ್ಷಣೆ ಸಂಬಂಧ ಹೊಸ-ಹೊಸ ವಿಧಾನಕ್ಕೆ ಹೊಂದಿಕೊಂಡು ಸಾರ್ವಜನಿಕರಿಗೆ ಸಕಾಲದಲ್ಲಿ ನಾಗರಿಕ ಸೇವೆ ಒದಗಿಸಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಭೂ ದಾಖಲೆಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ 100 ಕೋಟಿಗೂ ಹೆಚ್ಚು ಪುಟಗಳನ್ನು ಸ್ಕ್ಯಾನ್ ಮಾಡಲು ಉದ್ದೇಶಿಸಲಾಗಿದೆ. ಆ ನಿಟ್ಟಿನಲ್ಲಿ ಈಗಾಗಲೇ ಮೂವತ್ತ ಮೂರುವರೆ ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಇದೊಂದು ಗ್ಯಾರಂಟಿ ನೀಡುವ ಯೋಜನೆಯಾಗಿದೆ ಎಂದರು.

ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ತಹಶೀಲ್ದಾರ್ ಮೋಹನ್ ಕುಮಾರ್, ಲೋಕೋಪಯೋಗಿ ಇಲಾಖೆ ಇಇ ಇಬ್ರಾಹಿಂ, ಜಿಪಂ ಇಇ ಜಿ.ಕೆ.ನಾಯಕ್, ಎಇಇ ಸತೀಶ್ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಉತ್ತಮ ನಾಗರಿಕರಾಗಿ ಗುರುತಿಸಿಕೊಳ್ಳುವುದೇ ಸಮಾಜಕ್ಕೆ ದೊಡ್ಡ ಕೊಡುಗೆ : ಪೊನ್ನಣ್ಣ



ಸರ್ವೋದಯ ಶಿಕ್ಷಣ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಎ.ಎಸ್. ಪೊನ್ನಣ್ಣ ಉದ್ಘಾಟಿಸಿದರು.

ವಿರಾಜಪೇಟೆ, ಜು.25–ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ಉತ್ತಮ ನಾಗರಿಕರಾಗಿ ಗುರುತಿಸಿಕೊಳ್ಳುವುದು ಸಮಾಜಕ್ಕೆ ದೊಡ್ಡ ಕೊಡುಗೆಯಾಗಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದ್ದಾರೆ.

ವಿರಾಜಪೇಟೆ ಪಂಜರುಪೇಟೆಯಲ್ಲಿರುವ ಸರ್ವೋದಯ ಶಿಕ್ಷಣ ಮಹಾವಿದ್ಯಾಲಯ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಕರ ಕ್ಷೇತ್ರ ಉತ್ತಮ ಕ್ಷೇತ್ರವಾಗಿದ್ದು, ನಾಡಿನ ಸಾವಿರಾರು ಮಂದಿಗೆ ಬದುಕನ್ನು ನೀಡಿ ಬೆಳಕು ಚೆಲ್ಲಿದೆ ಎಂದರು.

ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಕೊಡಗಿನಲ್ಲಿ ಕೃಷಿಯಂತೆ ಶಿಕ್ಷಣಕೂ ಹೆಚ್ಚು ಒತ್ತುನೀಡಬೇಕು. ಪಟ್ಟಣ ಬೆಳೆಯಲು ಶಿಕ್ಷಣದ ಅಗತ್ಯವಿದೆ. ಆದರೆ 5 ವರ್ಷದಲ್ಲಿ 27 ಶಾಲೆಗಳನ್ನು ಮುಚ್ಚಿದೆ. ಪೋಷಕರು ಕೊಡಗಿನಲ್ಲಿ ಶಿಕ್ಷಣ ಸಂಸ್ಥೆಗಳು ಮುಚ್ಚದಂತೆ ಉಳಿಸಿ ಬೆಳೆಸಬೇಕೆಂದರು. ಕುಲಸಚಿವ ಡಾ.ಎಂ.ಸುರೇಶ್ ಮಾತನಾಡಿ ದೇಶದಲ್ಲಿ ಇಂದು ಶಿಕ್ಷಣದ ಕೊರತೆಯಿದ್ದರೂ ಸರ್ವೋದಯ ವಿದ್ಯಾಸಂಸ್ಥೆ ಜನರನ್ನು ಜ್ಞಾನಿಗಳಾಗಿ ಮಾಡುತ್ತಿದೆಯೆಂದು ಪ್ರಶಂಸಿಸಿದರು. ಕಾಲೇಜು ಸ್ಥಾಪನಾ ವರ್ಷದ ವಿದ್ಯಾರ್ಥಿನಿ ಕೆ.ಗೌರಮ್ಮ ಮುದ್ದಪ್ಪ ಮಾತನಾಡಿದರು. ಮತ್ತು ಹಳೆ ವಿದ್ಯಾರ್ಥಿಗಳಾದ ಚಾರ್ಲ್ಸ್ ಡಿಸೋಜ ಹಾಗೂ ಕಾವ್ಯ ಕಿಶೋರ್ ತಮ್ಮ ವಿದ್ಯಾರ್ಥಿ ಜೀವನದ ಅನುಭವ ಹಂಚಿಕೊಂಡರು.

ಸಾನ್ನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಶ್ರೀ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ ಶಿಕ್ಷಕ ವೃತ್ತಿ ಯಾವುದೇ ಹುದ್ದೆಗಿಂತ ಶ್ರೇಷ್ಠವಾಗಿದ್ದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸುಸಂಸ್ಕೃತವಾದ ಉತ್ತಮ ಸಮಾಜ ನಿರ್ಮಾಣವಾಗುವಂಥ ಶಿಕ್ಷಣ ದೊರಕಬೇಕು. ಸರ್ವೋದಯ ವಿದ್ಯಾಸಂಸ್ಥೆ ನಾಡಿನ ಸಾವಿರಾರು ಮಂದಿಗೆ ಬದುಕನ್ನು ನೀಡಿ ಬೆಳಕು ಚೆಲ್ಲಿದೆ ಎಂದರು.

ವೇದಿಕೆಯಲ್ಲಿ ಸರ್ವೋದಯ ಶಿಕ್ಷಣ ಮಹಾವಿದ್ಯಾಲಯದ ಛೇರ್ ಪರ್ಸನ್ ಬಿ.ವಿ.ಶಶಿಕಲಾ, ಸಂಸ್ಥೆ ಅಧ್ಯಕ್ಷರಾದ ಸೂರ್ಯಕುಮಾರಿ, ಕೋಶಾಧಿಕಾರಿ ವಸಂತಿ ಶರತ್ ಚಂದ್ರ ಕಾರ್ಯದರ್ಶಿ ಬಿ.ಎಸ್.ಹರಿಪ್ರಸಾದ್, ಪುರಸಭೆ ಅಧ್ಯಕ್ಷೆ ಎಂ.ದೇಚಮ್ಮ ಕಾಳಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಜೆ.ಆನಂದ ಉಪಸ್ಥಿತರಿದ್ದರು. ಕಾಲೇಜು ಪ್ರಾಂಶುಪಾಲೆ ಡಾ.ಎಂ.ವಾಣಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಾಯಕ ಪ್ರಾಧ್ಯಾಪಕ ಕೆ.ಜೆ.ಮಿನಿ ವಾರ್ಷಿಕ ವರದಿ ಮಂಡಿಸಿದರು, ಆರ್.ಸುಜಾತ ನಿರೂಪಿಸಿದರು.

ಪುಷ್ಯ ಮಳೆಗೆ ಕತ್ತಲಲ್ಲಿ ದಿನದೂಡುತ್ತಿರುವ ಗ್ರಾಮೀಣ ಜನತೆ



ಮಡಿಕೇರಿ: ಭಾರೀ ಗಾಳಿ ಸಹಿತ ಜಿಲ್ಲೆಯಲ್ಲಿ ಪುಷ್ಯ ಮಳೆ ಸುರಿಯುತ್ತಿದ್ದು, ಶನಿವಾರ ಬೆಳಗಿನವರೆಗೆ ಜಿಲ್ಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಈ ನಡುವೆಯೇ ಗಾಳಿ ಮಳೆಗೆ ಅಲ್ಲಲ್ಲಿ ಮರಗಳು ಮುರಿದು ಬಿದ್ದು ರಸ್ತೆ ಸಂಚಾರದಲ್ಲಿ ವ್ಯತ್ಯಯವಾದ ಬಗ್ಗೆ ವರದಿಯಾಗಿದೆ. ವಿದ್ಯುತ್ ಕಂಬ ಹಾಗೂ ತಂತಿಗಳಿಗೆ ಹಾನಿಯಾದ ಪರಿಣಾಮ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಂಪರ್ಕ ಏರು ಪೇರಾಗಿದ್ದು ಕತ್ತಲಿನಲ್ಲಿ ದಿನದೂಡುವ ಸ್ಥಿತಿ ನಿರ್ಮಾಣವಾಗಿದೆ.

ರಸ್ತೆ ಸಂಚಾರಕ್ಕೆ ಅಡ್ಡಿ: ಗದ್ದೆಹಳ್ಳದ ಬಳಿ ಗಾಳಿ ಮಳೆಗೆ ಬೃಹದಾಕಾರದ ಮರ ಬಿದ್ದ ಪರಿಣಾಮ ಗಂಟೆಗಳ ಕಾಲ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು. ರಾಜ್ಯ ಹೆದ್ದಾರಿಯಲ್ಲಿ ಮರ ಬಿದ್ದ ಪರಿಣಾಮ ಕೆಲಕಾಲ ಗದ್ದೆಹಳ್ಳ–ಚೆಟ್ಟಳ್ಳಿ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ಮರಗಳು ಬಿದ್ದ ಪರಿಣಾಮ 9 ವಿದ್ಯುತ್ ಕಂಬಗಳು ಹಾಗೂ ಸಂಪರ್ಕ ತಂತಿಗಳಿಗೆ ಹಾನಿಯಾಗಿದೆ. ಇದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಚೆಸ್ಕಾಂ ಕಿರಿಯ ಅಭಿಯಂತರ ಲವಕುಮಾರ್ ಮಾಹಿತಿ ನೀಡಿದರು.

ಮಗು ಪ್ರಾಣಾಪಾಯದಿಂದ ಪಾರು: ಕರಡಿಗೋಡು ಗ್ರಾಮದ ಶಿಲ್ಪಿ ಎಸ್ಟೇಟ್‌ನಲ್ಲಿ ವಾಸವಿರುವ ಜಾರ್ಖಂಡ್ ಮೂಲದ 5 ಮಂದಿ ಕಾರ್ಮಿಕರು ಬೆಳಿಗ್ಗೆ ಎದ್ದು ಕೆಲಸಕ್ಕೆ ತೆರಳಲು ಮನೆಯಿಂದ ಹೊರ ಬಂದ ಸಂದರ್ಭ ಲೈನ್ ಮನೆಯ ಒಂದು ಬದಿ ಗೋಡೆ ಕುಸಿದಿದೆ. ಮನೆಯ ಒಳಗೆ ನಿದ್ರಿಸುತ್ತಿದ್ದ 3 ವರ್ಷದ ಅರ್ಜುನ ಎಂಬ ಮಗುವಿನ ಮೇಲೆ ಮರದ ತುಂಡು ಹಾಗೂ ಗೋಡೆ ಕುಸಿದು ಬಿದ್ದಿದೆ. ಮಣ್ಣಿನಲ್ಲಿ ಸಿಲುಕಿಕೊಂಡಿದ್ದ ಮಗುವನ್ನು ಸ್ಥಳದಲ್ಲಿದ್ದ ಕಾರ್ಮಿಕರು ತಕ್ಷಣ ರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಇಂದು ಶಾಲಾ ಕಾಲೇಜುಗಳಿಗೆ ರಜೆ

ಮಡಿಕೇರಿ,ಜು.25– ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಹೆಚ್ಚಿನ ಮಳೆಯಾಗುತ್ತಿರುವ ಹಿನ್ನೆಲೆ ನಾಳೆ (ಜು.26) ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ನಾಳೆ 10 ಸಾವಿರ ಮಂದಿಗೆ ಹೆಲ್ಮೆಟ್ ವಿತರಣೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಸಚ್ಚಿದಾನಂದ ಹೆಲ್ಮೆಟ್ ಪ್ರದರ್ಶಿಸಿದರು.

ಮಂಡ್ಯ, ಜು.25– ಎಸ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನಿಂದ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ 10 ಸಾವಿರ ಮಂದಿಗೆ ಹೆಲ್ಮೆಟ್ ವಿತರಣೆ ಹಾಗೂ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮ ಜು.27ರಂದು ಮಧ್ಯಾಹ್ನ 3.30ಕ್ಕೆ ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಸೇವೆಗಳನ್ನು ಮಾಡುವ ಉದ್ದೇಶದಿಂದ ಆರಂಭಗೊಂಡ ಎಸ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ಪ್ರಾರಂಭಗೊಂಡು 5 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನಲೆಯಲ್ಲಿ ಸದರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮಿ ಹಾಗೂ ವಿಪಕ್ಷ ನಾಯಕ ಆರ್.ಅಶೋಕ್ ಭಾಗವಹಿಸಲಿದ್ದಾರೆ ಎಂದರು.

ಶ್ರೀರಂಗಪಟ್ಟಣದಿಂದ ಎಂಬಿಬಿಎಸ್ ವಿದ್ಯಾಭ್ಯಾಸ ಮಾಡಲು ಉಚಿತ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆಲ್ಯಾಪ್‌ಟಾಪ್ ನೀಡಲು ಮುಂದಾಗಿದ್ದು 8 ಮಂದಿಯನ್ನು ಗುರುತಿಸಲಾಗಿದೆ. ಉಚಿತ ಪ್ರವೇಶ ಪಡೆದ ವಿದ್ಯಾರ್ಥಿಗಳು ಕ್ಷೇತ್ರದಿಂದ ಎಷ್ಟೇ ಬಂದರೂ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುವುದು ಎಂದರು.

'ರುತಿಕ್ಷ ಸುರಕ್ಷ' ಘೋಷ: ಟ್ರಸ್ಟ್ ವತಿಯಿಂದ ಕ್ಷೇತ್ರದ 4500 ಮಹಿಳೆಯರಿಗೆ ಆರೈಕೆ ಕಿಟ್ ವಿತರಿಸಲಾಗಿದೆ. ಇತ್ತೀಚೆಗಷ್ಟೇ ಅಪಘಾತದಿಂದ ರುತಿಕ್ಷ ಎಂಬ ಬಾಲಕಿ ಮೃತಪಟ್ಟ ವೇಳೆ 10 ಸಾವಿರ ಹೆಲ್ಮೆಟ್ ವಿತರಣೆ ಶಪಥ ಮಾಡಿದ್ದೆ. ಈ ಹಿನ್ನಲೆ 'ರುತಿಕ್ಷ ಸುರಕ್ಷ' ಘೋಷವಾಕ್ಯದೊಂದಿಗೆ ದಾನಿಗಳು ಹಾಗೂ ಸ್ನೇಹಿತರ ಸಹಕಾರದಿಂದ ಕ್ಷೇತ್ರದ ಜನತೆಗೆ ಹೆಲ್ಮೆಟ್ ವಿತರಣೆ ಮಾಡಲಾಗುತ್ತಿದೆ. ಹೆಲ್ಮೆಟ್ ಪಡೆಯಲು ವಾಹನ ಸವಾರರು ಕಡ್ಡಾಯವಾಗಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಹೆಲ್ಮೆಟ್ ಧರಿಸಿ ಸುರಕ್ಷಿತವಾಗಿ ಪ್ರಯಾಣ ಮಾಡುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್, ಟ್ರಸ್ಟ್‌ನ ಸತೀಶ್, ರಮೇಶ್, ಸಂಜೀವ್, ರಾಮಚಂದ್ರು, ತ್ರಿಲೋಕ್ ಇದ್ದರು.

ಆ.9ರಂದು ಪ್ರತಿಭಾ ಪುರಸ್ಕಾರ

ಮಂಡ್ಯ: ಸೋಸಲೆ ಶ್ರೀವ್ಯಾಸರಾಜ ಮಠದಿಂದ ಆ.9ರಿಂದ 12ರವರೆಗೆ ಮಠದ ಆವರಣದಲ್ಲಿ ನಡೆಯುವ ಶ್ರೀಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವದ ಅಂಗವಾಗಿ ಆ.9ರಂದು ಸಂಜೆ 6 ಗಂಟೆಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ.

2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ ಪಡೆದಿರುವವರು ಅರ್ಹರಾಗಿದ್ದು, ಎಸ್‌ಎಸ್‌ಎಲ್‌ಸಿಯಲ್ಲಿ ಐಸಿಎಸ್‌ಇ, ಸಿಬಿಎಸ್‌ಇ ಹಾಗೂ ಸ್ಟೇಟ್ ಸಿಲಬಸ್‌ನಲ್ಲಿ ವ್ಯಾಸಂಗ ಮಾಡಿರುವ ಜಿಲ್ಲೆಯ ಎಲ್ಲಾ ಸಮುದಾಯದ ಪ್ರತಿಭಾವಂತರು ಮಾತ್ರ ಅರ್ಜಿ ಸಲ್ಲಿಸಬಹುದು. ಆ.5 ಅರ್ಜಿ ಸಲ್ಲಿಸಲು ಕೊನೆ ದಿನ. ಮಾಹಿತಿಗೆ ಕೆ.ಕೆ. ವಿಜಾಪುರ್ ಮೊ.ನಂ.9449855050 ಸಂಪರ್ಕಿಸಿ.

ಗ್ರಾಮಾಭಿವೃದ್ಧಿಗೆ ಗ್ರಾಪಂ ಶ್ರಮಿಸಲಿ

ಕೆಡಿಪಿ ಸಭೆಯಲ್ಲಿ ಶಾಸಕ ಹೆಚ್.ಟಿ.ಮಂಜು ಕರೆ



ಶೀಳನೆರೆ ಗ್ರಾಪಂ ಮಟ್ಟದ ಕೆಡಿಪಿ ಸಭೆಯಲ್ಲಿ ಶಾಸಕ ಹೆಚ್.ಟಿ.ಮಂಜು ಮಾತನಾಡಿದರು.

ಕೆ.ಆರ್.ಪೇಟೆ, ಜು.25– ಗ್ರಾಮ ಪಂಚಾಯಿತಿಗಳು ತಮ್ಮ ಅಧಿಕಾರ ಸದ್ಬಳಕೆ ಮಾಡಿಕೊಂಡು ಗ್ರಾಮಾಭಿವೃದ್ಧಿಗೆ ಶ್ರಮಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಶೀಳನೆರೆ ಗ್ರಾಪಂ ವತಿಯಿಂದ ಗ್ರಾಮದ ಸೊಸೈಟಿ ಸಭಾಂಗಣದಲ್ಲಿ ಆಯೋಜಿಸಿದ್ದ ಕೆಡಿಪಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ತಾಪಂ ಮಟ್ಟದಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತದೆ. ಅದೇ ರೀತಿ ಗ್ರಾಪಂ ಮಟ್ಟದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸುವ ಅಧಿಕಾರ ವಿಕೇಂದ್ರೀಕರಣವನ್ನು 2018–19ರಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಜಾರಿಗೆ ತಂದರು. ಅಂದಿನಿಂದ ರಾಜ್ಯದ ಎಲ್ಲಾ ಗ್ರಾಪಂಗಳಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಗ್ರಾಪಂ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದೆ. ಆದರೆ ನಮ್ಮ ತಾಲೂಕಿನಲ್ಲಿ ಪರಿಣಾಮಕಾರಿಯಾಗಿ ಈ ಯೋಜನೆ ಜಾರಿಯಾಗಿರಲಿಲ್ಲ. ನಾನು ಶಾಸಕನಾದ ಮೇಲೆ ಗ್ರಾಪಂ ಅಧ್ಯಕ್ಷರು ಮತ್ತು ಸದಸ್ಯರು, ಅಧಿಕಾರಿಗಳು ಜನಸಾಮಾನ್ಯರ ಕೆಲಸವನ್ನು ಹೇಗೆ ಮಾಡುತ್ತಿದ್ದಾರೆ. ಮಾಡದಿದ್ದರೇ ಏಕೆ ಮಾಡಿಲ್ಲ ವಿಳಂಬ ಮಾಡುತ್ತಿದ್ದರೆ ಏಕೆ ವಿಳಂಬ ಮಾಡಲಾಗುತ್ತಿದೆ ಎಂದು ಪ್ರಶ್ನಿಸುವ ಮೂಲಕ ಜನಸಾಮಾನ್ಯರ ಕೆಲಸಗಳನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಂದ ಮಾಡಿಸುವ ಜೊತೆಗೆ ಕೆಡಿಪಿ ಸಭೆಯನ್ನು ಪ್ರತಿ ಹೋಬಳಿಗೊಂದು ಗ್ರಾಪಂನಲ್ಲಿ ಆಯೋಜಿಸಿ ಗ್ರಾಪಂಗಳಿಗೆ ಇರುವ ಅಧಿಕಾರ ತಿಳಿಸುತ್ತಿದ್ದೇನೆ. ಅಲ್ಲದೇ ಗ್ರಾಪಂನಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಗ್ರಾಪಂ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಸಮಸ್ಯೆ ಬಗೆಹರಿಸಿದರೇ ಕ್ಷೇತ್ರದ ಶಾಸಕರಿಗೆ ಜವಾಬ್ದಾರಿ ಕಡಿಮೆಯಾಗುತ್ತದೆ. ತಾಲೂಕಿನಲ್ಲಿರುವ 300 ಗ್ರಾಮಗಳ ಸಮಸ್ಯೆಗಳನ್ನು ಶಾಸಕರು ಏಕಕಾಲಕ್ಕೆ ಬಗೆಹರಿಸಲು ಸಾಧ್ಯವಿಲ್ಲ. ಹೀಗಾಗಿ ಗ್ರಾಪಂಗಳಿಗೆ ಸ್ಥಳೀಯ ಸರ್ಕಾರ ಎಂದು ಸಾಂವಿಧಾನಿಕವಾಗಿ ಹೆಚ್ಚಿನ ಅಧಿಕಾರ ನೀಡಲಾಗಿದ್ದು, ಗ್ರಾಪಂಗಳು ಗ್ರಾಮಾಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಗ್ರಾಪಂ ವ್ಯಾಪ್ತಿಯ ಎಲ್ಲಾ ಇಲಾಖೆಗಳು, ಸಹಕಾರ ಸಂಸ್ಥೆಗಳು, ಸರ್ಕಾರಿ ಅನುದಾನ ಪಡೆಯುವ ಎಲ್ಲಾ ಸಂಸ್ಥೆಗಳು ಸಹ ಕೆಡಿಪಿ ಸಭೆಗೆ ಬಂದು ತಮ್ಮ ಸಂಸ್ಥೆ ಪ್ರಗತಿಯ ಬಗ್ಗೆ ವರದಿ ಮಂಡಿಸಬೇಕು. ಸಭೆಗೆ ಬಾರದೇ ಗೈರು ಹಾಜರಾದರೆ ಕಾರಣ ಕೇಳಿ ನೋಟೀಸ್ ನೀಡಬೇಕು. ಮುಂದಿನ ಕೆಡಿಪಿ ಸಭೆಗೆ ಕಡ್ಡಾಯವಾಗಿ ಬರುವಂತೆ ತಿಳುವಳಿಕೆ ಪತ್ರ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ನಾಡಕಚೇರಿ ರಾಜಸ್ವ ನಿರೀಕ್ಷಕ ರಾಜಮೂರ್ತಿ, ಚೆಸ್ಕಾಂ ಇಂಜಿನಿಯರ್ ಸುನೀಲ್ ಕುಮಾರ್, ಶೀಳನೆರೆ ಪಿಯು ಕಾಲೇಜಿನ ಪ್ರಾಂಶುಪಾಲ ವಾಸು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆ ಪ್ರಗತಿ ವರದಿ ಮಂಡಿಸಿದರು.

ಗ್ರಾಪಂ ಅಧ್ಯಕ್ಷ ಯುವರಾಜ್ ಕೆಡಿಪಿ ಸಭೆ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ಕೆ.ಸುಷ್ಮ, ತಾಲೂಕು ಯೋಜನಾಧಿಕಾರಿ ಶ್ರೀನಿವಾಸ್, ಪಿಡಿಒ ನವೀನ್, ಗ್ರಾಪಂ ಉಪಾಧ್ಯಕ್ಷೆ ನಾಗಮ್ಮ, ಸದಸ್ಯರಾದ ಎಸ್.ಪಿ.ಸಿದ್ದೇಶ್, ಎಸ್.ಕೆ.ಪ್ರಕಾಶ್, ಪ್ರವೀಣ್, ಗಾಯಿತ್ರಿ, ಸವಿತಾ, ನಿರ್ಮಲ, ಕಾಂತರಾಜು, ಮೋಹನ್, ಲಕ್ಷ್ಮಿ, ಸೌಂದರ್ಯ, ರೇಣುಕಾ, ಕಾರ್ಯದರ್ಶಿ ಟಿ.ನಾಗರತ್ನ, ಲೆಕ್ಕ ಸಹಾಯಕಿ ಬಾಬು, ಬಿಲ್ ಕಲೆಕ್ಟರ್ ಸ್ವಾಮೀಗೌಡ ಸೇರಿದಂತೆ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ನೀರುಗಂಟಿಗಳು ಹಾಗೂ ವಿವಿಧ ಗ್ರಾಮಗಳ ಮುಖಂಡರು, ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

ನೇಣುಬಿಗಿದ ಸ್ಥಿತಿಯಲ್ಲಿ ನವವಿವಾಹಿತೆ ಶವ ಪತ್ತೆ

ವರದಕ್ಷಿಣೆ ಕಿರುಕುಳದಿಂದ ಕೊಲೆ ದೂರು: ಪತಿ, ಆತನ ತಾಯಿ, ತಮ್ಮನ ಬಂಧನ



ಪೂಜಾ



ಆರೋಪಿ ಅಭಿನಂದನ್

ಪಾಂಡವಪುರ: 2 ತಿಂಗಳ ಹಿಂದಷ್ಟೇ ಮದುವೆಯಾಗಿದ್ದ ನವ ವಿವಾಹಿತೆ ಶವ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ವರದಕ್ಷಿಣೆಗಾಗಿ ಪತಿ ಹಾಗೂ ಅವರ ಮನೆಯವರು ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಯುವತಿ ತಂದೆ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತಾಲೂಕಿನ ಕೆನ್ನಾಳು ಗ್ರಾಮದ ಅಭಿನಂದನ್ ಎಂಬುವರ ಪತ್ನಿ ಪೂಜಾ(25) ಸಾವನ್ನಪ್ಪಿರುವ ನವ ವಿವಾಹಿತೆ.

ಕೆನ್ನಾಳು ಗ್ರಾಮದ ಅಭಿನಂದನ್, ಶ್ರೀರಂಗಪಟ್ಟಣ ತಾಲೂಕಿನ ಬಲ್ಲೇನಹಳ್ಳಿ ಗ್ರಾಮದ ಮಂಜುನಾಥ್ ಎಂಬುವರ ಪುತ್ರಿ ಪೂಜಾಳನ್ನು ಪ್ರೀತಿಸಿ ಪೋಷಕರ ವಿರೋಧದ ನಡುವೆ 2 ತಿಂಗಳ ಹಿಂದೆ ಮದುವೆಯಾಗಿದ್ದರು. ಈ ಸಂಬಂಧ ಯುವತಿ ತಂದೆ ಮಂಜುನಾಥ್ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಯುವತಿ ನಾನು ಇಷ್ಟ ಪಟ್ಟು ಪ್ರೀತಿಸಿ ಮದುವೆಯಾಗುತ್ತಿದ್ದೇನೆ ಎಂಬುದಾಗಿ ಪೊಲೀಸರ ಮುಂದೆ ಹೇಳಿಕೆಕೊಟ್ಟು ಅಭಿನಂದನ್‌ನನ್ನು ಮದುವೆಯಾಗಿದ್ದಳು. ಇದೀಗ ಮದುವೆಯಾದ ಎರಡೇ ತಿಂಗಳಲ್ಲಿ ಯುವತಿ ಶವ ಮನೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಮೃತ ದೇಹವನ್ನು ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ.

ವಿಷಯ ತಿಳಿದ ಮೃತ ಯುವತಿ ಪೂಜಾ ಮನೆಯವರು ಸ್ಥಳಕ್ಕಾಗಮಿಸಿ ನನ್ನ ಮಗಳಿಗೆ ಪತಿ ಅಭಿನಂದನ್, ಆತನ ತಮ್ಮ ಅನಿಲ್ ಹಾಗೂ ಅತ್ತೆ ಶಾಂತಮ್ಮ ಅವರು ಕಿರುಕುಳ ನೀಡಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಆಕ್ರೋಶ ಹೊರಹಾಕಿದರು. ನಂತರ ಗ್ರಾಮದ ಗ್ರಾಮಸ್ಥರು, ಕುಟುಂಬರು ಬೆಳಿಗ್ಗೆಯಿಂದ ಸಂಜೆಯವರೆಗೂ ನ್ಯಾಯಪಂಚಾಯಿತಿ ಮಾಡುವ ಮೂಲಕ ರಾಜೀ ಸಂಧಾನ ಮಾಡಿಕೊಳ್ಳುವ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನ ನಡೆಸಿದರು. ಅಂತಿಮವಾಗಿ ಮೃತ ಯುವತಿ ತಂದೆ ಮಂಜುನಾಥ್ ನನ್ನ ಮಗಳಿಗೆ ಪತಿ ಮತ್ತು ಅವರ ಮನೆಯವರು ವರದಕ್ಷಿಣೆ ಕಿರುಕುಳ ನೀಡಿ ಹಲ್ಲೆ ನಡೆಸಿ, ಕೊಲೆ ಮಾಡಿ ನೇಣು ಹಾಕಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಮಂಜುನಾಥ್ ನೀಡಿದ ದೂರಿನ ಮೇರೆಗೆ ಪೊಲೀಸರು ಮೃತ ಯುವತಿ ಪೂಜಾ ಅವರ ಪತಿ ಅಭಿನಂದನ್, ಆತನ ತಮ್ಮ ಅನಿಲ್ ಹಾಗೂ ಅತ್ತೆಯ ಶಾಂತಮ್ಮ ವಿರುದ್ಧ ದೂರು ದಾಖಲಿಸಿಕೊಂಡು ಅವರನ್ನು ಬಂಧಿಸಿದ್ದಾರೆ. ಘಟನೆ ಸಂಬಂಧ ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯುವತಿಯ ಮೃತ ದೇಹವನ್ನು ಶವ ಪರೀಕ್ಷೆ ನಡೆಸಿ ಯುವತಿಯ ತಂದೆ ಮನೆಯವರಿಗೆ ಒಪ್ಪಿಸಲಾಗಿದೆ.

ಉಪ್ಪಾರ ಸಮಾಜದ ಆಸ್ತಿ ಉಳಿಸುವಂತೆ ಆಗ್ರಹಿಸಿ ಪ್ರತಿಭಟನೆ



ಉಪ್ಪಾರ ಸಮಾಜದ ಸಮುದಾಯ ಭವನಕ್ಕೆ ಸೇರಿದ ಜಾಗವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿರುವುದನ್ನು ಖಂಡಿಸಿ ಬನ್ನಿಸಾರಿಗೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ಉಪ್ಪಾರ ಸಮಾಜದ ಸಮುದಾಯ ಭವನಕ್ಕೆ ಸೇರಿದ ಜಾಗವನ್ನು ಅನ್ಯ ವ್ಯಕ್ತಿಯೊಬ್ಬರು ಅಕ್ರಮವಾಗಿ ಅನ್ಯಕಾಂತ ಮಾಡಿಕೊಂಡು ಮಾರಾಟ ಮಾಡಲು ಯತ್ನಿಸಿರುವುದನ್ನು ಖಂಡಿಸಿ ತಾಲೂಕಿನ ಬನ್ನಿಸಾರಿಗೆ ಗ್ರಾಮದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ಗ್ರಾಮಸ್ಥರು ತಮ್ಮ ಸಮುದಾಯಕ್ಕೆ ಸೇರಿದ ಆಸ್ತಿಯನ್ನು ಉಳಿಸಿಕೊಡುವಂತೆ ಜಿಲ್ಲಾಡಳಿತವನ್ನು ಆಗ್ರಹಿಸಿದರು.

1967–68ನೇ ಸಾಲಿನಲ್ಲಿ ಸುವರ್ಣಾವತಿ–ಚಿಕ್ಕಹೊಳೆ ಜಲಾಶಯದ ಡ್ಯಾಂ ಹೊಡೆದು ಪ್ರವಾಹ ಬಂದು ಉಪ್ಪಾರ ಬಡಾವಣೆಯು ಕೊಚ್ಚಿ ಹೋದಂತಹ ಸಂದರ್ಭದಲ್ಲಿ ಅಂದಿನ ಶಾಸಕರು ಬನ್ನಿಸಾರಿಗೆ ಗ್ರಾಮದಲ್ಲಿ 13 ನಿವೇಶನಗಳನ್ನು ನೀಡಿದ್ದರು. ಈ ನಿವೇಶನವನ್ನು ಭಗೀರಥ ಉಪ್ಪಾರ ಸಮುದಾಯಕ್ಕೆ ಮೀಸಲಿಟ್ಟಿದ್ದು, ಅಲ್ಲಿನ ಕೆಲ ಜನರು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ಮಾರಾಟ ಮಾಡಲು ಮುಂದಾಗಿದ್ದಾರೆ. ಅಕ್ರಮ ಖಾತೆಯನ್ನು ರದ್ದುಪಡಿಸಿ ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಮುಖಂಡರಾದ ಬಸವನಪುರ ರಾಜಶೇಖರ, ಶ್ರೀನಿವಾಸ್, ಮಹೇಶ್, ಸಿದ್ದರಾಜು, ನಾಗರಾಜು, ರಾಜಶೆಟ್ಟಿ, ರಂಗಶೆಟ್ಟಿ, ಲಕ್ಷ್ಮಿ, ಲಕ್ಷ್ಮಮ್ಮ, ನಾಗಮ್ಮ, ಮಹದೇವಮ್ಮ ಇತರರು ಭಾಗವಹಿಸಿದ್ದರು.

ಅರಣ್ಯದಲ್ಲಿ ಜಾನುವಾರು ಮೇಯಿಸಲು ಅವಕಾಶಕ್ಕೆ ಆಗ್ರಹ



ಸಚಿವ ಖಂಡ್ರೆ ಕಳುಹಿಸಿರುವ ಸುತ್ತೋಲೆ ವಿರೋಧಿಸಿ ಕಬ್ಬು ಬೆಳೆಗಾರರ ಸಂಘ ಪ್ರತಿಭಟನೆ ನಡೆಸಿತು.

ಚಾಮರಾಜನಗರ, ಜು.25–ಅರಣ್ಯ ಇಲಾಖೆಗೆ ಸಚಿವ ಖಂಡ್ರೆ ಕಳುಹಿಸಿರುವ ಸುತ್ತೋಲೆ ವಿರೋಧಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲ್ಲಾ ಘಟಕ ಪ್ರತಿಭಟನೆ ನಡೆಸಿತು.

ನಗರದ ಸುಲ್ತಾನ್‌ಷರೀಫ್ ವೃತ್ತದಲ್ಲಿರುವ ಬಿಆರ್‌ಟಿ ಹುಲಿಸಂರಕ್ಷಿತ ಪ್ರದೇಶ ಡಿಸಿಎಫ್ ಕಚೇರಿ ಮುಂಭಾಗ ಸೇರಿದ ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲ್ಲಾ ಪದಾಧಿಕಾರಿಗಳು, ರೈತರು ಜಾನುವಾರುಗಳನ್ನು ಅರಣ್ಯದೊಳಗೆ ಮೇಯಿಸಲು ಬಿಡುವಂತಿಲ್ಲ ಎಂದು ಅರಣ್ಯ ಇಲಾಖೆಗೆ ಹೊರಡಿಸಿರುವ ಸಚಿವರ ಸುತ್ತೋಲೆ ಹಾಗೂ ಸಚಿವ ಖಂಡ್ರೆರವರ ಭಾವಚಿತ್ರ ಹರಿದು ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯಾಧಿಕಾರಿಗಳು ಮತ್ತು ಮೇಲಧಿಕಾರಿಗಳ ನಡುವೆ ಹೊಂದಾಣಿಕೆ ಇಲ್ಲದೆ ಗಸ್ತುಗಳನ್ನು ಸರಿಯಾಗಿ ನಿರ್ವಹಣೆ ಮಾಡದೆ, ನೌಕರರಿಗೆ ಸರಿಯಾದ ವೇಳೆಗೆ ವೇತನ ನೀಡದೆ ನಿರ್ಲಕ್ಷ್ಯ ವಹಿಸಿದ ಪರಿಣಾಮ ಮಹದೇಶ್ವರಬೆಟ್ಟದ ವನ್ಯಧಾಮದಲ್ಲಿ 5 ಹುಲಿಗಳ ಮಾರಣ ಹೋಮ ನಡೆದಿದೆ. ಮಾನವ ಮತ್ತು ಪ್ರಾಣಿಸಂಘರ್ಷ ಇಂದು ಮೊನ್ನೆಯದಲ್ಲ, ಇದು ನಿತ್ಯನಿರಂತರ, ಮಾನವ ಮತ್ತು ಪ್ರಾಣಿಗಳ ಜೀವನ ನಿರ್ವಹಣೆ ನಡೆಯುತ್ತಾ ಬಂದಿದೆ, ಸರ್ಕಾರದ ಆದೇಶಗಳು ರೈತರಿಗೆ ಪೂರಕವಾಗಬೇಕೆ ಹೊರತು, ಮಾರಕವಾಗಬಾರದು ಸರ್ಕಾರ ಕೂಡಲೇ ಈ ಆದೇಶ ವಾಪಸ್ ಪಡೆಯಬೇಕು ಎಂದರು.

ಅರಣ್ಯದ ಒಳಗಡೆ ಅಕ್ರಮ ಗಣಿಗಾರಿಕೆ ರೆಸಾರ್ಟ್ ಮತ್ತು ಹೋಂ ಸ್ಟೇಗಳನ್ನು ಜಂಗಲ್ ಲಾಡ್ಜ್‌ಗಳಿದ್ದು, ಬಂಡವಾಳಶಾಹಿಗಳು, ರಾಜಕಾರಣಿಗಳು ಅರಣ್ಯದೊಳಗಡೆ ರೆಸಾರ್ಟ್ ಮತ್ತು ಫಾರಂ ಹೌಸ್ ಕಟ್ಟಿಕೊಂಡಿದ್ದು, ವಿಲಾಸಿ ಜೀವನವನ್ನು ನಡೆಸಲು ಬಳಸಿಕೊಳ್ಳುತ್ತಿದ್ದಾರೆ ಇಂತಹ ಅಕ್ರಮಗಳ ಬಗ್ಗೆ ಕ್ರಮ ವಹಿಸಿ ಅವರನ್ನು ಕಾಡಿನಿಂದ ಹೊರಗೆ ಹಾಕುವ ಪ್ರಯತ್ನವನ್ನು ಅರಣ್ಯ ಸಚಿವರು ಮಾಡುತ್ತಿಲ್ಲ. ಕಾಡಿನ ಒಳಗಡೆ ಕಾರು ಮತ್ತು ದೊಡ್ಡ ದೊಡ್ಡ ವಾಹನಗಳು ಹೋದಾಗ ಪ್ರಾಣಿಗಳು ಗಾಬರಿಗೊಂಡು ನಾಡಿಗೆ ಬರುತ್ತವೆ. ಪ್ರಾಣಿಗಳು ನಾಡಿಗೆ ಬಂದು ರೈತರ ಜಮೀನಿಗೆ ದಾಳಿಯಿಡುತ್ತವೆ. ಬೆಳೆನಷ್ಟಕ್ಕೆ ಸೂಕ್ತ ಪರಿಹಾರವನ್ನು ರೈತರಿಗೆ ನೀಡುತ್ತಿಲ್ಲ. ಕೇವಲ ಜಾನುವಾರುಗಳನ್ನು ಮೇಯಲು ಅರಣ್ಯದೊಳಗೆ ಬಿಟ್ಟರೆ ಕಾಡು ಪ್ರಾಣಿಗಳಿಗೆ ತೊಂದರೆಯಾಗುತ್ತದೆ ಎಂಬ ಸಚಿವರ ಹೇಳಿಕೆ ಮೂರ್ಖತನದ ಪರಮಾವಧಿಯಾಗಿದೆ ಎಂದು ಕಿಡಿಕಾರಿದರು.

ಪ್ರಭಾವಿ ರಾಜಕಾರಣಿಗಳು ಅರಣ್ಯ ಪ್ರದೇಶದಲ್ಲಿರುವ ಅಕ್ರಮ ಗಣಿಗಾರಿಕೆ ಮತ್ತು ರೆಸಾರ್ಟ್ ಮತ್ತು ಹೋಂ ಸ್ಟೇಗಳನ್ನು ತೆರವುಗೊಳಿಸಲು ಸರ್ಕಾರ ಸೂಕ್ತ ಕೈಗೊಳ್ಳಬೇಕು, ಇಲ್ಲದಿದ್ದರೆ ಅರಣ್ಯ ಸಚಿವರು ಜಿಲ್ಲೆಗೆ ಬಂದಾಗ ಸಂಘಟನೆಯಿಂದ ಮುತ್ತಿಗೆ ಹೋರಾಟ ರೂಪಿಸಲಾಗುವುದೆಂದು ಎಚ್ಚರಿಸಿದರು. ಬಿಆರ್‌ಟಿ ಡಿಎಫ್‌ಒ ಶ್ರೀಪತಿ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು

ರಾಜ್ಯ ಕಬ್ಬು ಬೆಳೆಗಾರ ಸಂಘದ ಗೌರವಾಧ್ಯಕ್ಷ ಅಂಬುವಿನಹಳ್ಳಿ ರಾಜು ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ವಳಗೆರೆಗಣೇಶ್, ಕೆರೆಹುಂಡಿ ರಾಜಣ್ಣ, ಅಂಬುವಿನಹಳ್ಳಿ ಮಹೇಶ್, ದೇಮಣ್ಣ ಮಲೆಯೂರು ಮಹೇಂದ್ರ, ತಾಲೂಕು ಅಧ್ಯಕ್ಷ ಮಲೆಯೂರು ಸತೀಶ್, ನಾಗೇಂದ್ರ, ಮಹೇಶ್, ಶ್ಯಾನಡ್ರಹಳ್ಳಿ ಬಸವರಾಜ್, ನಾಗರಾಜು, ಹೂರದಳ್ಳಿ ರಾಮಣ್ಣ, ನಾಗರಾಜಪ್ಪ, ಮುಕ್ಕಡಹಳ್ಳಿ ರಾಜು, ಚೇತನ್‌ಕುಮಾರ್, ಕಿಳಲೀಪುರ ಶ್ರೀಕಂಠ, ರವಿ, ಮರಿಯಾಲ ಚಿಕ್ಕಕಾಳಪ್ಪ, ಅರಳೀಕಟ್ಟೆ ಪ್ರಭುಸ್ವಾಮಿ, ಸಿದ್ದಲಿಂಗಪ್ಪ, ಹೊನ್ನೇಗೌಡನಹಳ್ಳಿ ಮಹೇಶ್ ಭಾಗವಹಿಸಿದ್ದರು.

ಮಹಿಳಾ ಆಯೋಗದ ಅಧ್ಯಕ್ಷರಿಗೆ ಅರಣ್ಯ ಪ್ರವೇಶಕ್ಕೆ ಅನುಮತಿ

ಬಿಆರ್‌ಟಿ ಹುಲಿಸಂರಕ್ಷಿತಾರಣ್ಯದಲ್ಲಿ ರಾತ್ರಿ ವೇಳೆ ಪ್ರವೇಶ ನಿಷಿದ್ಧ, ಇಂತಹ ಸಂದರ್ಭದಲ್ಲಿ ಜಿಲ್ಲಾ ಪ್ರವಾಸ ಕೈಗೊಂಡಿದ್ದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಗೆ ನಡ್ಡಿ ಕತ್ತಲ ಅರಣ್ಯದ ಒಳಗಡೆ ವಾಸ್ತವ್ಯ ಹೂಡಲು ಅನುಮತಿ ನೀಡಿರುವ ಅರಣ್ಯಾಧಿಕಾರಿ ನಡೆ ಎಷ್ಟರಮಟ್ಟಿಗೆ ಸರಿ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾತ್ರಿ ಶಿಷ್ಟಾಚಾರ ಮತ್ತು ಪ್ರವಾಸದ ಪಟ್ಟಿ ಇರುವುದು ಸಮಯದ ಒಳಗೆ ಮತ್ತು ನಿಯಮಿತ ಕಾಲಮಿತಿ ಒಳಗೆ. ಆಯೋಗದ ಅಧ್ಯಕ್ಷರು ತಮ್ಮ ಪ್ರಭಾವವನ್ನು ಬಳಸಿ ಶಿಷ್ಟಾಚಾರದ ಹೆಸರಿನಲ್ಲಿ ರಾತ್ರಿ ವೇಳೆ ಅರಣ್ಯ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಂಡಿದ್ದಾರೆ. ಅಧಿಕಾರಿಗಳಿಂದ ಶಿಷ್ಟಾಚಾರ ಸಂಪೂರ್ಣ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಗುಂಬಳ್ಳಿ ಗ್ರಾಪಂ ಸಾಮಾಜಿಕ ಲೆಕ್ಕ ಪರಿಶೋಧನಾ ಸಭೆ



ಗುಂಬಳ್ಳಿ ಗ್ರಾಪಂ ಸಾಮಾಜಿಕ ಲೆಕ್ಕ ಪರಿಶೋಧನೆ 15ನೇ ಹಣಕಾಸು ಸಂಬಂಧಿಸಿದ ಗ್ರಾಮ ಸಭೆ ನಡೆಯಿತು.

ಯಳಂದೂರು,ಜು.25–ತಾಲೂಕಿನ ಗುಂಬಳ್ಳಿ ಗ್ರಾಮ ಪಂಚಾಯಿತಿ ಸಾಮಾಜಿಕ ಲೆಕ್ಕ ಪರಿಶೋಧನೆ ಗ್ರಾಮ ಸಭೆ ಹಾಗೂ 15ನೇ ಹಣಕಾಸು ಸಂಬಂಧಿಸಿದ ಗ್ರಾಮ ಸಭೆ ನಡೆಯಿತು.

ನೋಡಲ್ ಅಧಿಕಾರಿ ರೇಚಣ್ಣ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪಿಡಿಒ ನಟರಾಜು ಮಾತನಾಡಿ ಒಟ್ಟು 255 ಕಾಮಗಾರಿ ನಡೆದಿದೆ ಹಾಗೂ 15ನೇ ಹಣಕಾಸು ಅಭಿವೃದ್ಧಿ ಕಾರ್ಯಗಳಿಗೆ ಬಳಕೆಯಾಗಿದೆ ನೋಡಲ್ ಅಧಿಕಾರಿ ರೇಚಣ್ಣ ಮಾತನಾಡಿ, ನರೇಗಾ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕು ಗ್ರಾಮದ ಜನರು ಉದ್ಯೋಗಕ್ಕೆ ನಗರ ಪ್ರದೇಶಗಳಿಗೆ ಹೋಗುವುದನ್ನು ತಪ್ಪಿಸಬೇಕೆಂದು ಕೇಂದ್ರ ಸರ್ಕಾರ ನರೇಗಾ ಯೋಜನೆಯನ್ನು ಜಾರಿಗೆ ತಂದು ಗ್ರಾಮದ ಕೂಲಿ ಕಾರ್ಮಿಕರಿಗೆ ವರ್ಷದಲ್ಲಿ ನೂರು ದಿನ ಉದ್ಯೋಗ ನೀಡಬೇಕೆಂದು ತಿಳಿಸಿದೆ. ವೇತನದಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಸಮಾನ ವೇತನವನ್ನು ನೀಡಿದೆ ಎಂದರು.

ಗ್ರಾಪಂ ಅಧ್ಯಕ್ಷ ಪುಟ್ಟು ಮಾಧವಿ, ಸದಸ್ಯರಾದ ನಂಜನಾಯಕ, ಮಹೇಶ್, ಶ್ರೀನಿವಾಸ್, ನಟರಾಜ್, ರಾಜಣ್ಣ, ಬಿಲ್ ಕಲೆಕ್ಟರ್ ಕೃಷ್ಣ ನಾಯಕ ತೋಟಗಾರಿಕೆ ಇಲಾಖೆಯ ಶಿವರಂಜಿನಿ, ಸಾಮಾಜಿಕ ಲೆಕ್ಕ ಪರಿಶೋಧನೆ ಪ್ರಸನ್ನ, ಗ್ರಾಮ ಪಂಚಾಯಿತಿ ವ್ಯಾಪ್ತಿ ಗ್ರಾಮಸ್ಥರು ಹಾಜರಿದ್ದರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. Security guard-Salary-14000 to 20,000/- ಪಾತ್ರತೋಳೆಯುವ ಹುಡುಗರು KST BOYS- ಸಂಬಳ : 16000/-ವಯಸ್ಸು-19 ರಿಂದ 50, ESI,PF ಊಟ ವಸತಿ ಸೌಲಭ್ಯವಿರುತ್ತದೆ

Mob :9880116412 9900663249, 9060106667

ಮನೆ ಭೋಗ್ಯಕ್ಕೆ ಇದೆ
ಮೈಸೂರಿನ ಜೆ.ಪಿ. ನಗರದಲ್ಲಿ ಮೂರು ಅಂತಸ್ತಿನ ನಾಲ್ಕು ರೂಂ ಮತ್ತು ಎಲ್ಲಾ ಸೌಲಭ್ಯಗಳಿರುವ ಮನೆ ಭೋಗ್ಯಕ್ಕೆ ಇದೆ.

Mob : 8217050749, 8951320813

ಮನೆ ಮಾರಾಟಕ್ಕಿದೆ
20X30 ಹೊಸಮನೆ ಪೂರ್ವದಿಕ್ಕು ನೆಲ ಮತ್ತು ಮೊದಲ ಅಂತಸ್ತು. ಹೆಬ್ಬಾಳು ಒಂದನೇ ಹಂತ, ನಿಸರ್ಗ ಬಡಾವಣೆ, ಮೈಸೂರು

Mob :7204253999, 9972124626

Fund ಆರ್ಡರ್‌ಗಳನ್ನು ತೆಗೆದುಕೊಳ್ಳುತ್ತೇವೆ
Estimate ಸಹ ಕೇಳುತ್ತೇವೆ. ಹೋಲ್‌ಸೇಲ್ ರೇಟ್, ಉಚಿತ ಡೆಲಿವರಿ, ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್, ನಜರ್‌ಬಾದ್

Mob :9739816440

WANTED
ELECTRICAL ENGINEERS (EEE) BE / DIPLOMA. FRESHERS/ EXPERIENCED.

Ph: 09035000016

Email: epowerele@gmail.com www.epowerelectricals.com

SITE FOR SALE
30x40 N/F Visvesvaraiah Layout Gayatri Layout

Mob: 9740088990

RAI ESTATES
RERA APPROVED · MUDA APPROVED

ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ

9448181488, 9945061604

#10, 1st Floor, New Sayyaji Rao Road, Bamboo Bazar, Mysuru - 570 001

ಸೈಟು ಮಾರಾಟಕ್ಕೆ
40x60, N/F, RMP Layout, Vijayanagar 4th Stage.

7338445401

MUDA PLOTS
Behind Mysore Airport, Offer price 3,000 per sq.ft.

9538459944

ಸೈಟು ಬೇಕಾಗಿದೆ
ದೇವನೂರು 3ನೇ ಹಂತ ಮತ್ತು ಸಾತಗಳ್ಳಿಯಲ್ಲಿ ಎಲ್ಲಾ ಅಳತೆಯ ಸೈಟು ಬೇಕಾಗಿದೆ

ಸಂಪರ್ಕಿಸಿ : ಶಿವಪ್ಪ ಬನ್ನಿಮಂಟಪ್ಪ

Mob : 9141050266

ಸೈಟು ಮಾರಾಟಕ್ಕಿದೆ
30X40, ವಿಜಯನಗರ 4ನೇ ಹಂತ ಹೊಂದಿಕೊಂಡಿರುವ ರೇಷುಬ್ ಲೇಔಟ್ ಮೂಡ ಅಪ್ರೂವ್ಡ್ E/F ಸೈಟ್ 40feet ರೋಡ್‌ಗೆ ಇದೆ, ಬೆಲೆ 5900 per sqft

MOB : 8884616461, 7411356023

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

WANTED
1) HOUSE KEEPING SUPERVISOR 2 to 10 years of experience in the industries (Only Male Candidates)
2) HOUSE KEEPING - CLEANER (Only Female)
3) HOUSE MAID SERVICES Cooking & Cleaning (Only Female)
4) FIELD WORK WITH IN CITY (Two Wheeler DL mandatory)
5) CAR DRIVERS (Mercedes benz)

Call:8748991416 & 7090715155

ಸುವರ್ಣ ಯಾತ್ರಾ
3 ದಿನಗಳ ಶಿರಡಿ ಪ್ರವಾಸ 15/8/25
3 ದಿನಗಳ ಪುರಿ ಪ್ರವಾಸ 15/8/25
4 ದಿನಗಳ ಕಾಶಿ ಪ್ರವಾಸ 29/8/25
8 ದಿನಗಳ ಕಾಮಾಕ್ಯ ಪ್ರವಾಸ 23/9/25
9 ದಿನಗಳ ಅಯೋಧ್ಯಾ ಮತ್ತು ನೇಪಾಳ ಪ್ರವಾಸ 11/9/25

6360146483 / 9008381022

HOUSE FOR SALE
30x40, W/N Door 2 BHK, 8 years old, Single Floor, Dattagalli, Mysore. 1.55 Cr Final. Brokers Excuse

Call: 9663166809

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಸೈಟು ಮಾರಾಟಕ್ಕಿದೆ
30X40, N/F ವಿನಾಯಕ ಎನ್‌ಕ್ಲೇವ್ ಹೂಟಗಳ್ಳಿ

MOB : 7338445413

ಜಮೀನು ಬೇಕಾಗಿದೆ
ಮೈಸೂರು ನಗರದಿಂದ 15 ಕಿ.ಮೀ. ವ್ಯಾಪ್ತಿಯೊಳಗೆ ಬಡಾವಣೆ ನಿರ್ಮಿಸಲು ಯೋಗ್ಯವಾದ ಜಮೀನುಳ್ಳ ಮಾಲಿಕರು ಮಾತ್ರ ಸಂಪರ್ಕಿಸಿ

MOB : 8073300783, 7411356023

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

6361056646, 7676844160

Villa Plots FOR SALE
30x40,30x50,40x60 28 Acres Project,MUDA App 1 Kms from Adithya Circle, Dattagalli, Kergalli,Mysore

8660105902

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಎಂ.ಇ.ಎಸ್ ಕೈಗಾರಿಕಾ ತರಬೇತಿ ಸಂಸ್ಥೆ ತಿಲಕನಗರ, ಮೈಸೂರು-01ರಲ್ಲಿ
Electrician, Electronics Mechanic & Fitter

ವೃತ್ತಿಗಳಲ್ಲಿ ಕೆಲವೊಂದು ಸೀಟುಗಳು ಮಾತ್ರ ಲಭ್ಯವಿದೆ. ಕೂಡಲೇ ಸಂಪರ್ಕಿಸಿ

0821-2494654 9880547325

ಬೇಕಾಗಿದ್ದಾರೆ
ಸಸ್ಯಾಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. ವಸತಿ, ESI, PF ಸೌಲಭ್ಯವಿರುತ್ತದೆ. ವಿಕ್ರಂ ಕಾಲೇಜ್ ಆಫ್ ನರ್ಸಿಂಗ್ ಮೈಸೂರು

8310846772 9900302287

Looking For
40x60 And 30x40 east or north facing facing site in SBM bogadi Vijayanagara 1st/2nd/3rd/4th dattagalli to Buy immediately only owners can call

MOB : 8073300783,8884616461

ಸೈಟು ಮಾರಾಟಕ್ಕಿದೆ
30X50 W/F KHB ಕೆಂಚಲಗೂಡು

MOB : 7338445482

CHANGE OF NAME
I, SATEESH INGALE Residing at 7363, Shanti Nilaya Near KHB colony, Thomas Layout Nanjangud Town, Mysuru Dist. Karnataka. Have Changed My Name from SATEESH INGALE to SATEESH B INGALE Vide affidavit Sworn before Notary Suresha Nanjangud Date: 19-07-2025

ಸೋಲಾರ್ ಸರ್ವೀಸ್
ಅನ್ನು ಕಂಪನಿ ಕಡೆಯಿಂದ 700 ರೂ. ಗೆ 1-7-2025 ರಿಂದ 1-8-2025 ರವರೆಗೆ ಮಾಡಿಕೊಡಲಾಗುತ್ತದೆ.

Mob: 9008711654

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.

Mob: 9686071750

SBIT TRAVELS
FIXED DEPARTURE
SINGAPORE 5N 6D AUGUST 12th ,30th
JAPAN 9N 10D OCTOBER 04th
VIETNAM 6N 7D AUGUST 30TH
(Saraswathipuram, Mysuru)

9343524127

PRAKRUTHI PROPERTIES
FOR SALE 30x40@ 22 lakhs Near BT Nagar BSNL Lyt Sites Also Avl.

Apartments @ Ramakrishna Nagar

20x30 New 2BHK House, As Per your Plan With Interiors @ Just 40 Lakh in Bogadi

95386 90359, 90359 90359

ಆಲ್ಟ್ರೇಷನ್ ಟೈಲರ್
ಇರ್ವಿನ್ ರಸ್ತೆ, ಮೈಸೂರು. ನಮ್ಮಲ್ಲಿ ಪುರುಷರ, ಮಹಿಳೆಯರ, ಮಕ್ಕಳ ಉಡುಪುಗಳನ್ನು ರಿಪೇರಿ ಮಾಡಿ ಕೊಡಲಾಗುವುದು ಹಾಗೂ ಸೀರೆಗಳಿಗೆ ಫಾಲ್ಸ್ ಹಾಕುತ್ತೇವೆ.

MOB : 9880496212, 9591614440

Site For Sale
30X40 site for sale j cube palacia bannimantap near Manipal hospital attach to ring road gated community muda approved price 65 lakh

MOB : 8073300783, 7676439578

ಹೊಸ ಮನೆ ಮಾರಾಟಕ್ಕಿದೆ
30x35 ಡ್ಯೂಪ್ಲೆಕ್ಸ್ 4 ಬಿಹೆಚ್‌ಕೆ, ದಟ್ಟಗಳ್ಳಿ, ಆದಿತ್ಯ ಸರ್ಕಲ್ ಹತ್ತಿರ, ಮೈಸೂರು

7204401199, 7795269272

ಕ್ವಿಕ್ ಮ್ಯಾರೇಜಸ್
ಎಲ್ಲಾ ಜಾತಿಯ ವಧು-ವರರಿಗಾಗಿ & ವಿಧುರ-ವಿಚ್ಛೇದಿತ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ:

Mob: 9343175000

ವರ ಬೇಕಾಗಿದೆ
ಶೀಘ್ರ ವಿವಾಹಕ್ಕಾಗಿ ಎಲ್ಲಾ ಜಾತಿಯ ವಧು-ವರರಿಗಾಗಿ ಸಂಪರ್ಕಿಸಿ: (ಬ್ರಾಹ್ಮಣ) ವಧುವಿನ ವಯಸ್ಸು 28, ಎಸ್‌ಎಸ್‌ಎಲ್‌ಸಿ ಕಲಿತಿರುವ / (ಒಕ್ಕಲಿಗ ಗೌಡ) ವಧುವಿನ ವಯಸ್ಸು 25, ಪಿಯುಸಿ / (ಲಿಂಗಾಯತ) ವಧುವಿನ ವಯಸ್ಸು 27, ಎಸ್‌ಎಸ್‌ಎಲ್‌ಸಿ / (ಬ್ರಾಹ್ಮಣ) ವಧುವಿನ ವಯಸ್ಸು 32, ಪಿಯುಸಿ ಕಲಿತಿರುವ ವಧುವಿಗೆ ಸರ್ಕಾರಿ ನೌಕರ, ಆದಾಯವಿರುವ ವರ ಬೇಕಾಗಿದೆ.

Mob: 8904834199

2 SITES FOR SALE
(30x40) Abhi Enclave (Near Manuganahally), Mysore-Hunsur Road. Ready to build, good location. DTCP Approved. 14 Lakhs.

Mob: 95388-39926

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಬೇಕಾಗಿದ್ದಾರೆ
ಹೆಲ್ಪರ್ ಕ್ಯಾಷಿಯರ್ ಮತ್ತು ಅಕೌಂಟೆಂಟ್ ನಜರ್‌ಬಾದ್ ಭಾರತ್ ಪೆಟ್ರೋಲಿಯಂ ನಾಗನೋಜ ಫ್ಯೂಯಲ್ ಬಂಕ್ ನಲ್ಲಿ ಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ಉಚಿತ ವ್ಯವಸ್ಥೆ ಇರುತ್ತದೆ.

ಪುನೀತ್ : 9019230313

Site For Sale
40x50, Sout face Hale kesare Mysuru Direct Owner Broker Excuse

Mob: 9036134221, 8277796999

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ / ಸೂಪರ್ ವೈಸರ್ ಕಂಪ್ಯೂಟರ್ ಸೆಂಟರ್ ಸ್ಟೂಲ್ / ಕಾಲೇಜು 12 ಗಂಟೆ ಪಾಳಿ ಆಕರ್ಷಕ ಸಂಬಳ ESI/PF ಸೌಲಭ್ಯವಿದೆ. ವಿದ್ಯಾರ್ಹತೆ SSLC/PUC - PASS / FAIL AGE - 45 ರಿಂದ 55 ವರ್ಷ

Mob :9341866418, 9343666415

Sites For Sale
JNANABHARATHI Layout, Behind Airport, On DADADAHALLI Highway, 30X40 East Facing And corner Sites, MUDA Khata & E-Khatha Ready. Direct Owner

Mob: 9342123373

ಕೆಲಸಕ್ಕೆ ಬೇಕಾಗಿದ್ದಾರೆ
ಕುರುಕ್ ತಿಂಡಿ ಹೋಳಿಗೆ ಮನೆ
- ಹೋಳಿಗೆ ಮಾಡುವವರು (2ಜನರು)
- ಪಾನಿಪುರಿ, ಮಸಾಲಪುರಿ ಮಾಡುವವರು (2ಜನರು)
- ಮ್ಯಾನೇಜರ್ (1ಬ್ಬರು)
- ಕ್ಯಾಷಿಯರ್ (1ಬ್ಬರು)

Mob : 8296240149

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ದೇವೇಗೌಡ ಸರ್ಕಲ್ ಹಾಗೂ ರಾಮಸ್ವಾಮಿ ಸರ್ಕಲ್‌ನಲ್ಲಿರುವ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು ನಿರ್ವಹಿಸಲು ಚೈನೀಸ್, ಸೌತ್ ಕುಕ್, ಹೆಲ್ಪರ್, ಟೀ ಮಾಸ್ಟರ್ ಹಾಗೂ ಕೌಂಟರ್ಸ್ ಬೇಕಾಗಿದ್ದಾರೆ

Mob : 9606970941, 7795525899

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು

ಸ್ಥಳ :
1) ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯ
2) ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾ
3) ಹೆಬ್ಬಾಳ್
4) ಚಾಮರಾಜಪುರಂ

9686566261, 9686422400

FOR SALE
30x40 Site in Vijayanagar 4th Stage

Mob: 8884133677

Sites For Sale
Residential & Semi commercial Sites Measuring 30x40 for Sale in Hale Kesare main Road Adjacent to Army Layout from city only 6.5 km

Mob: 9606975149

ಸೈಟು ಮಾರಾಟಕ್ಕಿದೆ
30x50 N/F KBL Silicon City Phase 2 Near BEML KRS Road

Mob :9243536373

WANTED TEACHERS
- MA, BEd in English
- Computer Teacher
- Female PE Teachers And
- Nursery Teachers

Mob : 8495983613

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ತಡಕೊಳ ಬಳಿಯಿರುವ TVS FACTORY ಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ : 48 ವರ್ಷದೊಳಗೆ ಸಂಬಳ: 18500/- 8HRS W/O ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು

Mob: 9620667819. 9880727819

HOUSE FOR SALE
1st floor 2 bed Rooms & Hall. ground floor 2 bed room & Hall. Terrace 10x20 Hall & Wash room. Modern house With All Facilities Only 62 Lacks Nego...

Mob :9845116744

HOUSE FOR RENT/LEASE
2BHK House North Facing With Solar &Ward Robes.(30x40) Bogadi 2nd Stage (north)

Mob: 8867779326

ಮನೆ ಮಾರಾಟಕ್ಕಿದೆ
30X50 ಡುಪ್ಲೆಕ್ಸ್
20X30 ಡುಪ್ಲೆಕ್ಸ್
40X60 ಗ್ರೌಂಡ್ ಫ್ಲೋರ್ ಮನೆ
ಹೊಸಮನೆ, ಹಳೆಮನೆ, ಸೈಟು ಮಾರಾಟಕ್ಕಿದೆ

Mob: 9945042875

Sites For Sale
MUDA APPROVED 30x40, 30x50 Bank Loan Available Near Srirampura Ring Road (opposite University Layout)

Mob: 8296832513

ಹೊಸಮನೆ ಮಾರಾಟಕ್ಕಿದೆ
ಗುರುರೂ ಕೊಪ್ಪಲೂರು ಮೈಸೂರು 4TH BLOCK NORTH FACE 42LK FULLY FURNISHED

Mob : 9379056972

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನೆ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷಗಳಿಂದ ಜ್ಯೋತಿಷ್ಯ ನಡೆಸುತ್ತಿದ್ದಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿದ್ದಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.

Mob: 9663466548

Solar Water Heaters

Modern Living · Jupiter Solar · Solar Water Heater SALES & SERVICE

SUNZONE SOLAR SYSTEM VM Double Road, Kuvempunagar, Mysuru

9845175443

ಕೆಲಸಕ್ಕೆ ಬೇಕಾಗಿದ್ದಾರೆ
ವಿಜಯನಗರ ಮೈಸೂರಿನಲ್ಲಿ ನೂತನವಾಗಿ ಪ್ರಾರಂಭವಾಗಿರುವ ವೆಜ್ & ನಾನ್‌ವೆಜ್ ರೆಸ್ಟೋರೆಂಟ್‌ಗೆ ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ (ಒಬ್ಬರು) ಸಮಯ ಬೆಳಗ್ಗೆ 11.ರಿಂದ ರಾತ್ರಿ 11.00 ವರೆಗೆ ವಸತಿ ಸೌಲಭ್ಯವಿದೆ

ಸಂಪರ್ಕಿಸಿ: 9353263974

OFFICE SPACE FOR RENT
1st Floor, (700 sqft) no: 22, 8th main, 3rd cross Saraswathi Puram Mysore -570009

Mob: 9448762797, 9538307050

ಕಳೆದಿದೆ
ಶೇಷಾಚಲ, ಕೆ.ಕನಗನಹಳ್ಳಿ, ಚಿನಕುರುಳಿ ಹೋಬಳಿ ಪಾಂಡವಪುರ ತಾಲ್ಲೂಕು,ಮಂಡ್ಯಜಿಲ್ಲೆ, ಇವರಿಗೆ ಸೇರಿದ ಮನೆ ಹಾಗೂ ನಿವೇಶನದ ದಾನ ಪತ್ರವು ಮನೆ ಬದಲಾವಣೆ ಮಾಡುವಾಗ ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ.

Mob: 9980181936

AFFIDAVIT
I, Gunashekhara A., S/o Yadiyurappa, residing at Sri Vinayaka Nilaya, No. 375, KNS Ethos Layout, Opposite Race Course, near Mall of Mysore, Chamundipuram, Mysore-570 010, state do hereby solemnly affirm and state on oath before Notary S.N. Hemalatha, Mysuru, Dt. 25-7-2025. That, I swear on oath that my name is Gunashekhara A. and the same name is mentioned in my Aadhar Card and all other documents. But my name is mentioned as Gunashekara Anuvalu in my passport. I swear on oath that my name is Gunashekhara A. The above facts stated are true and correct.

Sd/- Deponent

Premium Plots for sale
C.V. Raman Enclave CHUDA Approved A-khatha loans, Opp. to Nijaguna Hotels & Resorts, Chamarajanagar.

7349113666

(Brokers Excuse)

ಬೇಕಾಗಿದ್ದಾರೆ
Cook / Heler - 1 post
H.R. - 1 post

9972494094, 8553348827

Sutha Food & Healthcare Solutions, Mysuru

ತಕ್ಷಣ ಬೇಕಾಗಿದ್ದಾರೆ Wanted
Sri Sapthagiri Builders & Developers, Mysore.
1) Marketing Head - 1
2) Driver - 2

9980524644, 9591828444

HOUSE FOR RENT
3 BHK ground floor for rent Vijayanagar 2nd Stage, Near K.D. Circle.

9945516373

SC ಆದಿಕರ್ನಾಟಕ (ಬಲಗೈ)
BE M Tech, MBBS, MS, MD BAMS Msc Mcom MCA, MBA MA Phd Bsc Bcom, BCA, BA Bed

ವಧು ವರರಿಗೆ ಸಂಪರ್ಕಿಸಿ "ನವಿಲೂರು ರಂಗಸ್ವಾಮಿ" ಮೈಸೂರು ಎಸಿ ವಧು ವರರ ಮಾಹಿತಿ ಕೇಂದ್ರ ಎನ್.ಆರ್ ಮೊಹಲ್ಲಾ ಮೈಸೂರು

Mob: 8711974172

ಸೈಟು ಮಾರಾಟಕ್ಕಿದೆ
30X40, 30X50, 40X60 EF ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ 60X80, 40X60, 30X50 EF ಇಲವಾಲ ಹತ್ತಿರ. ಸಂಪರ್ಕಿಸಿ

Mob: 9341624462

WANTED
1) Cook cum Caretaker
2) ANM Nurse
3) Home Nurse

Contact: Sandhyaraaga Joyful Senior Living

9886510555

SITE FOR SALE
Bannur Road, Yelawala Bypass Road, MUDA Approved. Adjacent to Telecom Layout, Next to MDR Road. Contact:

9035385672

HOUSE FOR LEASE OR RENT
D.No. 33, Bhogadi 2nd Stage, Mysore. 20x30 South face (1st Floor), Near CFTRI Layout.

9880047018

SITE FOR SALE
35X33 (N/F) Srirampura BEML Layout, 2nd Stage, near to BEML arch.

9686014349

ಜಾಗ ಖಾಲಿ ಇದೆ
ಪ್ರನಾಳ ಶಿಶು ಕೇಂದ್ರ ತೆರೆಯಲು ಹಾಗೂ ನಡೆಯುತ್ತಿರುವ ನರ್ಸಿಂಗ್ ಹೋಂ, ಬಸ್ ಡಿಪೋ, ಕುವೆಂಪುನಗರ ಇಲ್ಲಿ ಸ್ಥಳಾವಕಾಶವಿದೆ.

6363434782

WANTED IMMEDIATELY
- Senior Pharma Aide for medical shop (Exp: 10-20 years)
- Sales person for super market.
- Location: Bogadi.

9880587586

JNANAJYOTHI VIDYALAYA BEERIHUNDI
WANTED

CBZ Science Teacher immediately. Contact:

9845390377, 8197057626

ಕಳೆದಿದೆ
ಡಾ. ಎಸ್. ನಿತ್ಯಾನಂದ ರಾವ್, 15, ಯದು ನಿವಾಸ, 1ನೇ ಮೇನ್, ಯಾದವಗಿರಿ, ಮೈಸೂರು, ನನಗೆ ಸೇರಿದ ಮೈಸೂರು, ಹಂಚ್ಯಾ ಸಾತಗಳ್ಳಿ ವಲಯ ಬಡಾವಣೆಯ 1217ನೇ ನಂಬರಿಗೆ ಸಂಬಂಧಿಸಿದ ಅಲಾಟ್‌ಮೆಂಟ್ ಲೆಟರ್, ಸ್ವಾಧೀನ ಪತ್ರ, ಖಾತೆ ಕಂದಾಯ ಮೂಲ ಪತ್ರಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:

9686618001

Money fiest Royal Pvt. Ltd. (DSA)
Branch Manager 1 12 L per an. Asst Branch Manager 8LA Field Manager 2, 8 LA Telecalling - 5, 15,000 Experience persons can apply.

7348911669

Commercial Site for sale
44x60 E/F, Opposite to Light House Bar & Restaurant, Ilavala - Srirangapatna Road.

9448958332

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಬ್ಯಾಂಕ್ ನಕಲಿ ಸೀಲ್ ಬಳಸಿ ಪುರಸಭೆಗೆ ವಂಚನೆ ಪ್ರಕರಣ

ನಂಜುಂಡಸ್ವಾಮಿ ಸದಸ್ಯತ್ವ ರದ್ದತಿಗೆ ಡಿಸಿಗೆ ಪತ್ರ

ಪುರಸಭೆ ತುರ್ತು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ

ತಿ.ನರಸೀಪುರ, ಜು.25– ಕೆನರಾ ಬ್ಯಾಂಕ್ ಸೀಲ್ ಅನ್ನು ನಕಲು ಮಾಡಿ ಪುರಸಭೆಗೆ ಲಕ್ಷಾಂತರ ರೂ. ಆಸ್ತಿ ತೆರಿಗೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪುರಸಭೆ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಸದಸ್ಯತ್ವ ರದ್ದುಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಶುಕ್ರವಾರ ತಿ.ನರಸೀಪುರ ಪುರಸಭೆಯಲ್ಲಿ ಅಧ್ಯಕ್ಷೆ ವಸಂತ ಜಿ.ಶ್ರೀಕಂಠ ಅಧ್ಯಕ್ಷತೆಯಲ್ಲಿ ನಡೆದ ತುರ್ತು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ನಿಕಟಪೂರ್ವ ಅಧ್ಯಕ್ಷ ಎಸ್.ಮದನ್ ರಾಜ್ ಮಾತನಾಡಿ, ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಮಾಡಿರುವ ಅವ್ಯವಹಾರಗಳ ಬಗ್ಗೆ ತೀವ್ರವಾಗಿ ಕಿಡಿಕಾರಿದರು. ಆರೋಪಿ ಸದಸ್ಯ ಮಾಡಿರುವುದು ಅಕ್ಷಮ್ಯ ಅಪರಾಧ. ಸಾರ್ವಜನಿಕರ ಹಣ ಲಪಟಾಯಿಸಿ ಮೋಸ ಮಾಡಿರುವುದನ್ನು ಸಹಿಸಲಾಗುವುದಿಲ್ಲ. ಕೂಡಲೇ ಈತನಿಗೆ ಕಠಿಣ ಶಿಕ್ಷೆಯಾಗಬೇಕಾದ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ನಂಜುಂಡಸ್ವಾಮಿ ಸದಸ್ಯತ್ವ ರದ್ದುಗೊಳಿಸುವ ನಿಟ್ಟಿನಲ್ಲಿ ನಿರ್ಣಯ ಕೈಗೊಂಡು ಜಿಲ್ಲಾಧಿಕಾರಿಗಳಿಗೆ ವರದಿ ನೀಡಬೇಕು.

ಟಿ.ಎಂ.ನಂಜುಂಡಸ್ವಾಮಿ ಮಾಡಿರುವ ಅವ್ಯವಹಾರದಿಂದ ಇಡೀ ಪುರಸಭೆ ಸದಸ್ಯರು ಜನತೆಯ ದೃಷ್ಟಿಯಲ್ಲಿ ಆರೋಪಿಗಳಂತೆ ಕಾಣುತ್ತಿದ್ದಾರೆ. ಇಡೀ ನಾಗರಿಕ ಸಮಾಜ ತಲೆ ತಗ್ಗಿಸುವ ಕೆಲಸವನ್ನು ಆತ ಮಾಡಿದ್ದು ಕ್ಷಮೆಗೆ ಅರ್ಹನಲ್ಲ. ಹಾಗಾಗಿ ಕೂಡಲೇ ಆತನ ಸದಸ್ಯತ್ವವನ್ನು ರದ್ದುಗೊಳಿಸಿ ಆತನಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಮಾಜಿ ಅಧ್ಯಕ್ಷ ಎಸ್.ಸೋಮು ಮಾತನಾಡಿ, ನಂಜುಂಡಸ್ವಾಮಿ ಮಾಡಿರುವ ಕೃತ್ಯದಿಂದ ಪುರಸಭೆಗೆ ಕೆಟ್ಟ ಹೆಸರು ಬಂದಿದೆ. ಜನರೆಲ್ಲಾ ಪುರಸಭೆಯನ್ನು ಹಾಗೂ ಸದಸ್ಯರನ್ನು ವಿಲನ್‌ಗಳಂತೆ ನೋಡುತ್ತಿದ್ದಾರೆ. ಹಾಗಾಗಿ ಇಂತಹ ಆರೋಪಿಯ ಸದಸ್ಯತ್ವವನ್ನು ರದ್ದು ಮಾಡಬೇಕು. ನಂಜುಂಡಸ್ವಾಮಿ ಬಳಿ ಕಂದಾಯ ಕಟ್ಟುವಂತೆ ಹಣ ನೀಡಿರುವ ಸಾರ್ವಜನಿಕರು ನಡೆದಿರುವ ಪ್ರಕರಣದಿಂದ ಆತಂಕಕ್ಕೊಳಗಾಗುವುದು ಬೇಡ. ಪುರಸಭೆಗೆ ಧೈರ್ಯವಾಗಿ ಬಂದು ನಿಮ್ಮ ಕಂದಾಯ ಪುರಸಭೆ ಖಾತೆಗೆ ಜಮೆಯಾಗಿದೆಯೋ ಎಂಬುದನ್ನು ಖಚಿತ ಪಡಿಸಿಕೊಳ್ಳಿ ಎಂದರು.

ಬಿಜೆಪಿ ಸದಸ್ಯ ಎಸ್.ಕೆ.ಕಿರಣ್ ಮಾತನಾಡಿ, ಕಂದಾಯ ವಂಚನೆ ಆರೋಪಿ ನಂಜುಂಡಸ್ವಾಮಿ ಮೇಲೆ ಹಿಂದೊಮ್ಮೆ ಲೋಕಾಯುಕ್ತ ದಾಳಿಯಾಗಿದೆ. ಈಗ ಬ್ಯಾಂಕ್ ನಕಲಿ ಸೀಲ್ ಬಳಸಿದ ವಂಚನೆ ಆರೋಪವಿದೆ. ಈ ಬಗ್ಗೆ ಪುರಸಭೆ ವತಿಯಿಂದ ಪೊಲೀಸರಿಗೆ ದೂರು ನೀಡಲಾಗಿದೆ. ಆದರೆ ಕೇವಲ ಪೊಲೀಸರಿಗೆ ದೂರು ಸಲ್ಲಿಸಿ ಕೂತರೇ ಮತ್ತೆ ಜಾಮೀನು ಪಡೆದು ಮತ್ತೆ ತನ್ನ ದಂದೆ ಆರಂಭಿಸುತ್ತಾನೆ. ನಕಲಿ ಸೀಲ್ ಆರೋಪದಡಿ ಆರ್‌ಬಿಐನವರಿಗೆ ದೂರು ನೀಡಲು ಕ್ರಮ ಕೈಗೊಳ್ಳಬೇಕು. ಬ್ಯಾಂಕನ್ನೇ ವಂಚಿಸಿರುವ ಈತ ಪುರಸಭೆಯ ಸೀಲುಗಳನ್ನು ನಕಲಿ ಮಾಡಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾಗಿ ಅಧಿಕಾರಿಗಳು ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿದರೆ ಒಳ್ಳೆಯದು. ಪುರಸಭೆ ಮುಖ್ಯಾಧಿಕಾರಿಗಳೇ ಹೇಳಿರುವಂತೆ ಈತ ಸಾವಿರಕ್ಕೂ ಹೆಚ್ಚು ಖಾತೆಗಳನ್ನು ಮಾಡಿಸಿದ್ದು ಅದರಲ್ಲಿ ಎಷ್ಟರ ಮಟ್ಟಿನ ಭ್ರಷ್ಟಾಚಾರ ನಡೆದಿದೆ ಎಂಬುದು ತನಿಖೆ ಮೂಲಕ ಹೊರಬರಬೇಕಿದೆ. ಹಾಗಾಗಿ ಎಲ್ಲ ಖಾತೆಗಳ ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಉಪಾಧ್ಯಕ್ಷೆ ಎಂ ರಾಜೇಶ್ವರಿ, ಮಾಜಿ ಉಪಾಧ್ಯಕ್ಷ ಪ್ರೇಮಾ ಮರಯ್ಯ, ಸದಸ್ಯರಾದ ಎಲ್.ಮಂಜುನಾಥ್, ಸೈಯದ್ ಅಹಮದ್, ಬಾದಾಮಿ ಮಂಜು, ರೂಪಾ ಪರಮೇಶ್, ಮೆಡಿಕಲ್ ನಾಗರಾಜು, ಬೇಬಿ ಹೇಮಂತ್, ತೇಜಸ್ವಿನಿ ರಾಜು, ನಾಮನಿರ್ದೇಶನ ಸದಸ್ಯರಾದ ಗುರುಸ್ವಾಮಿ, ಗಣೇಶ್, ನಾಗರತ್ನ, ಸಹೀಲ್ ಖಾನ್, ಚೇತನ್, ಜೋಗಿ ನಾಗರಾಜು, ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಯೋಜನಾಧಿಕಾರಿ ಮಹದೇವಣ್ಣ, ಲೆಕ್ಕಾಧಿಕಾರಿ ವಿನಯ್, ಇಂಜಿನಿಯರ್ ಸಿದ್ದಯ್ಯ, ಜಯಲಕ್ಷ್ಮಿ ಮತ್ತಿತರರಿದ್ದರು.

> ಆರೋಪಿ ನಂಜುಂಡಸ್ವಾಮಿ ನಡೆ ಖಂಡನೀಯ. ಸಾರ್ವಜನಿಕರ ತೆರಿಗೆ ಹಣ ದುರುಪಯೋಗ ಹಾಗು ರಾಷ್ಟ್ರೀಕೃತ ಬ್ಯಾಂಕಿನ ಸೀಲ್ ನಕಲು ಮಾಡಿರುವುದು ಕಾನೂನು ಬಾಹಿರವಾಗಿದೆ. ಪುರಸಭೆ ಇಂತಹ ಚಟುವಟಿಕೆಗೆ ಅವಕಾಶ ನೀಡದು. ಕಾನೂನಿನ ಪ್ರಕಾರ ನಂಜುಂಡಸ್ವಾಮಿಗೆ ಶಿಕ್ಷೆಯಾಗಬೇಕೆಂಬುದು ಎಲ್ಲರ ಅಭಿಮತವಾಗಿದೆ. ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ನಂಜುಂಡಸ್ವಾಮಿ ಸದಸ್ಯತ್ವ ರದ್ದುಗೊಳಿಸುವಂತೆ ಮನವಿ ಮಾಡಲಾಗುತ್ತದೆ.
>
> -ವಸಂತ ಜಿ.ಶ್ರೀಕಂಠ, ಪುರಸಭೆ ಅಧ್ಯಕ್ಷರು.




ತಿ.ನರಸೀಪುರ ಪುರಸಭೆಯ ತುರ್ತು ಸಭೆ ಅಧ್ಯಕ್ಷೆ ವಸಂತ ಶ್ರೀಕಂಠ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆಯಿತು.

> ರಾಷ್ಟ್ರೀಕೃತ ಬ್ಯಾಂಕಿನ ನಕಲಿ ಸೀಲು ಹಾಗೂ ಸಾರ್ವಜನಿಕರ ಕಂದಾಯದ ಹಣ ದುರುಪಯೋಗ ಪಡಿಸಿಕೊಂಡ ಆರೋಪದಡಿ ಬಂಧಿತರಾಗಿರುವ ಸದಸ್ಯ ನಂಜುಂಡಸ್ವಾಮಿ ನಡೆ ತೀವ್ರ ಖಂಡನೀಯ. ಪೊಲೀಸ್ ವಿಚಾರಣೆಯಿಂದ ನಡೆದಿರುವ ಪ್ರಕರಣ ಬಯಲಿಗೆ ಬರಲಿದ್ದು ನಂತರ ಪ್ರಕರಣದಲ್ಲಿ ಆತನ ಕೈವಾಡದ ಬಗ್ಗೆ ಸ್ಪಷ್ಟ ಚಿತ್ರಣ ದೊರಕಲಿದೆ. ನ್ಯಾಯಾಲಯ ಶಿಕ್ಷೆ ವಿಧಿಸುತ್ತದೆ. ಆತ ಪ್ರಕರಣದಲ್ಲಿ ಭಾಗಿಯಾಗಿದ್ದರೆ ಕಠಿಣ ಶಿಕ್ಷೆಯೇ ಆಗಲಿದೆ.ಜನ ಸೇವಕರಾಗಿರುವ ನಾವು ಇಲ್ಲಿ ಕೆಲವೊಮ್ಮೆ ವಾರ್ಡ್‌ನ ಜನರ ಕೆಲಸಗಳನ್ನು ಮಾಡಿಕೊಡಬೇಕಾಗುತ್ತೆ. ಖಾತೆ ಮಾಡಿಸಿ ಕೊಡಲು ಕಂದಾಯ ಕಟ್ಟಲು ನಮ್ಮ ಕೈಗೆ ಹಣ ಕೊಡುತ್ತಾರೆ. ಆದರೆ ಅದನ್ನು ನಾವು ದುರುಪಯೋಗ ಮಾಡಿಕೊಳ್ಳಬಾರದು. ಜನರ ವಿಶ್ವಾಸ ಗಳಿಸುವ ನಿಟ್ಟಿನಲ್ಲಿ ನಮ್ಮ ಕಾರ್ಯವೈಖರಿ ಇರಬೇಕು. ಇಂದು ಆರೋಪಿ ನಂಜುಂಡಸ್ವಾಮಿ ಸದಸ್ಯತ್ವ ರದ್ದು ಕೋರಿ ಜಿಲ್ಲಾಧಿಕಾರಿಗೆ ಪತ್ರ ಬರೆಯುವಂತೆ ನಿರ್ಣಯ ಮಾಡಲಾಗಿದೆ. ಅದರಂತೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಕ್ರಮ ಕೈಗೊಳ್ಳಲು ಮನವಿ ಮಾಡಲಾಗುತ್ತದೆ.
>
> -ಸಿ.ಪ್ರಕಾಶ್, ಸ್ಥಾಯಿ ಸಮಿತಿ ಅಧ್ಯಕ್ಷರು.

ನಂಜುಂಡಸ್ವಾಮಿಯಿಂದ 40 ಕೋಟಿ ವಂಚನೆ

ಪುರಸಭಾ ಮುಖ್ಯಾಧಿಕಾರಿ ವಸಂತಕುಮಾರಿ ಆಡಿಯೋ ವೈರಲ್

ತಿ.ನರಸೀಪುರ, ಜು.25–ಕೆನರಾ ಬ್ಯಾಂಕ್‌ನ ನಕಲಿ ಸೀಲ್ ಬಳಸಿ ಪುರಸಭೆಯ ಲಕ್ಷಾಂತರ ರೂ. ವಂಚಿಸಿರುವ ಆರೋಪದಡಿ ಬಂಧನಕ್ಕೊಳಗಾಗಿರುವ ತಿ.ನರಸೀಪುರ ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಈವರೆಗೆ 40 ಕೋಟಿ ರೂ. ವಂಚನೆ ಎಸಗಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾತನಾಡಿರುವ ಆಡಿಯೋ ವೈರಲ್ ಆಗಿದ್ದು, ಈ ಸಂಬಂಧ ತಾಲೂಕಿನಲ್ಲಿ ತೀವ್ರ ಚರ್ಚೆ ನಡೆಯುತ್ತಿದೆ.



ನಂಜುಂಡಸ್ವಾಮಿ



ವಸಂತಕುಮಾರಿ

ವ್ಯಕ್ತಿಯೊಬ್ಬರೊಂದಿಗೆ ಪುರಸಭಾ ಮುಖ್ಯಾಧಿಕಾರಿ ವಸಂತ ಕುಮಾರಿ ಅವರು ಮಾತನಾಡಿರುವ ಸಂಭಾಷಣೆ ಇದಾಗಿದ್ದು, ನಂಜುಂಡಸ್ವಾಮಿ ಗ್ರಾಮ ಪಂಚಾಯ್ತಿ ಸದಸ್ಯ ಹಾಗೂ ಅಧ್ಯಕ್ಷರಾಗಿದ್ದ ಅವಧಿಯಿಂದ ಹಿಡಿದು ಈವರೆಗೆ 40 ಕೋಟಿ ರೂ. ವಂಚನೆ ಎಸಗಿದ್ದಾರೆ ಎಂದು ಹೇಳಿರುವ ಅವರು, ತಿ.ನರಸೀಪುರ ಪುರಸಭೆಯಲ್ಲಿ 3 ರಿಂದ 4 ಸಾವಿರ ಖಾತೆಗಳಾಗಿದ್ದು, ಅದರಲ್ಲಿ 1 ಸಾವಿರ ಖಾತೆ ನಂಜುಂಡಸ್ವಾಮಿ ಮಾಡಿಸಿದ್ದೇ ಆಗಿದೆ. ಪುರಸಭೆಗೆ ಅವರು ಎಷ್ಟು ವಂಚನೆ ಮಾಡಿದ್ದಾರೆ ಎಂಬುದರ ಬಗ್ಗೆ ಸದ್ಯಕ್ಕೆ ಹೇಳಲು ಸಾಧ್ಯವಿಲ್ಲ. ತನಿಖೆ ನಡೆಸಿದ ನಂತರ ತಿಳಿಯಬೇಕಾಗಿದೆ ಎಂದು ವಸಂತ ಕುಮಾರಿ ಹೇಳಿದ್ದಾರೆ.

ಟಿಎಂ.ನಂಜುಂಡಸ್ವಾಮಿ ಈ ಹಿಂದೆ ಭೈರಾಪುರ ಸದಸ್ಯರಾಗಿದ್ದು, ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ನಂತರ ಭೈರಾಪುರ ಗ್ರಾಮ ಪುರಸಭೆಗೆ ಸೇರ್ಪಡೆಗೊಂಡ ಬಳಿಕ ಪುರಸಭಾ ಸದಸ್ಯರಾಗಿ ಗೆಲುವು ಸಾಧಿಸಿದ್ದಾರೆ.

ನಂ.ಗೂಡು: ಬಾಲ್ಯ ವಿವಾಹ ನಿಷೇಧ ಕುರಿತು ಅರಿವು ಕಾರ್ಯಕ್ರಮ

ನಂಜನಗೂಡು, ಜು.25– ಹೆಣ್ಣು ಮಕ್ಕಳ ಹಕ್ಕು ರಕ್ಷಣೆ ಹಾಗೂ ಅವರ ಮೇಲಿನ ದೌರ್ಜನ್ಯ ತಪ್ಪಿಸಲು ಸರ್ಕಾರ ಪೋಕ್ಸೋ ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಜಾರಿಗೊಳಿಸಿದ್ದು ಅವುಗಳ ಬಗ್ಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೆ.ಎಸ್.ಭವ್ಯಶ್ರೀ ತಿಳಿಸಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಹಾಗೂ ದಕ್ಷಿಣ ಕಾಶಿ ಚಾರಿಟಬಲ್ ಟ್ರಸ್ಟ್ ನಂಜನಗೂಡು ಇವರ ಸಹಯೋಗದಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅನಕ್ಷರಸ್ಥರು ತಮ್ಮ ಜವಾಬ್ದಾರಿ ಕಳೆದುಕೊಳ್ಳಲು ಹಾಗೂ ಬಡತನ ಕಾರಣಗಳಿಂದ ಅಪ್ರಾಪ್ತ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದರಿಂದ ಅವರು ಹಲವು ತೊಂದರೆಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಕಾನೂನಿನ ಬಗ್ಗೆ ಹೆಚ್ಚಿನ ಅರಿವು ಮೂಡಿಸಲಾಗುತ್ತಿದೆ. ದೇಶದ ಎಲ್ಲಾ ಕಾನೂನು ಸಂವಿಧಾನದಡಿ ಬರುವುದರಿಂದ ಎಲ್ಲರೂ ಈ ಬಗ್ಗೆ ಹೆಚ್ಚಿನ ಅರಿವು ಹೊಂದಬೇಕು ಎಂದರು.



ಬಾಲ್ಯ ವಿವಾಹ ನಿಷೇಧ ಕುರಿತು ಅರಿವು ಕಾರ್ಯಕ್ರಮ ನಡೆಯಿತು.

ಬಾಲಕಿಯರು ಗರ್ಭಿಣಿ ಆಗುತ್ತಿರುವುದು ಮತ್ತು ಪ್ರಾಣ ಕಳೆದುಕೊಳ್ಳುತ್ತಿರುವುದು ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿದೆ. ಹದಿಹರೆಯದ ವಯಸ್ಸಿನಲ್ಲಿ ಆಕ್ರಮ ಚಟುವಟಿಕೆಗಳ ಕಡೆ ಗಮನ ಹರಿಸಬಾರದು. 18 ವರ್ಷದೊಳಗಿನವರನ್ನು ನಾವು ಮಕ್ಕಳು ಎಂದು ಪರಿಗಣಿಸುತ್ತೇವೆ. ಮಕ್ಕಳ ಲೈಂಗಿಕ ಚಿತ್ರ ದೃಶ್ಯಗಳನ್ನು ಇಟ್ಟುಕೊಳ್ಳುವುದು, ಮಕ್ಕಳನ್ನು ಲೈಂಗಿಕ ದೃಷ್ಟಿಯಿಂದ ನೋಡುವುದು, ಅಶ್ಲೀಲ ಚಿತ್ರ ವಾಕ್ಯಗಳನ್ನು ಮಕ್ಕಳಿಗೆ ತೋರಿಸುವುದು, ಅವರೊಂದಿಗೆ ಅಶ್ಲೀಲವಾಗಿ ಮಾತನಾಡುವುದು ಅಪರಾಧ ಆಗುತ್ತದೆ. ರಸ್ತೆ ಬದಿ ಹೋಗುವ ಸಂದರ್ಭ ಯಾರಾದರೂ ರೇಗಿಸುವುದು, ಕಾಟ ಕೊಡುವುದು, ಹಿಂದೆ ಸುತ್ತಾಡುವುದು ಕಂಡುಬಂದಲ್ಲಿ ಪೊಲೀಸರಿಗೆ ಅಥವಾ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದರು.

ದಕ್ಷಿಣ ಕಾಶಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಸಿ.ಎಂ.ಸುಂದರೇಶನ್ ಮಾತನಾಡಿದರು. ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ್ ಬಾಬು ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಕುಮಾರ್, ದಕ್ಷಿಣ ಕಾಶಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಶಿವಕುಮಾರ್, ಟ್ರಸ್ಟ್ ನಿರ್ದೇಶಕ ಹಾಗೂ ಕವಲಂದೆ ಗ್ರಾಮ ಉಪಾಧ್ಯಕ್ಷ ಸಿ.ಮಂಜುನಾಥ್, ಪತ್ರಕರ್ತರಾದ ವೆಂಕಟೇಶ್, ಕುಮಾರ್, ಉಪನ್ಯಾಸಕ ರಾದ ಎಂ.ಎನ್.ಮಹದೇವಯ್ಯ, ನಾರಾಯಣಸ್ವಾಮಿ, ರಾಘವೇಂದ್ರ, ಶಿವಕುಮಾರ್, ಚಿನ್ನಸ್ವಾಮಿ, ರಂಜನ, ನಟರಾಜು, ರಾಜಣ್ಣ ನಂಜುಂಡಯ್ಯ ಸೇರಿದಂತೆ ಹಲವರಿದ್ದರು.

ಸಿಡಿಮದ್ದು ಸ್ಫೋಟ: ಮಹಿಳೆಗೆ ತೀವ್ರ ಗಾಯ

ಹುಣಸೂರು, ಜು.25– ಸಿಡಿಮದ್ದು ಸ್ಫೋಟಗೊಂಡು ಮಹಿಳೆ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಹುಯಿಲಾಳು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಕುಳ್ಳಮ್ಮ(55) ತೀವ್ರ ಗಾಯಗೊಂಡವರು. ಈಕೆ ಅಡಿಕೆ ತೋಟ ಎಂದು ಭಾವಿಸಿ ಸಿಡಿಮದ್ದನ್ನು ಚೆಚ್ಚಿದ್ದು ಈ ವೇಳೆ ಸ್ಫೋಟಗೊಂಡು ಆಕೆ ಗಾಯಗೊಂಡಿದ್ದಾಳೆ. ಕಾಡು ಹಂದಿಗಳ ಹಾವಳಿ ತಪ್ಪಿಸಲು ರೈತರು ಸಿಡಿಮದ್ದು ಇಟ್ಟಿದ್ದರು ಎನ್ನಲಾಗಿದೆ. ಈ ಸಿಡಿಮದ್ದನ್ನು ಅಡಿಕೆ ಎಂದು ಭಾವಿಸಿ ಸುತ್ತಿಗೆಯಿಂದ ಚಚ್ಚಿದ್ದಾರೆ. ಈ ವೇಳೆ ಅದು ಸ್ಫೋಟಗೊಂಡು ಆಕೆಯ ಮುಖ, ಕೈಕಾಲು, ಹೊಟ್ಟೆ ಭಾಗಕ್ಕೆ ತೀವ್ರ ಗಾಯಗಳಾಗಿವೆ. ಆಕೆಯನ್ನು ಕೆ.ಆರ್. ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.


ಡಿ.ರಾಮಕೃಷ್ಣ ನಿಧನ



ತಿ.ನರಸೀಪುರ, ಜು.25– ಪಟ್ಟಣದ ವಿವೇಕಾನಂದ ನಗರದ ನಿವಾಸಿ ಡಿ.ರಾಮಕೃಷ್ಣ (61) ಶುಕ್ರವಾರ ನಿಧನರಾದರು. ಅವಿವಾಹಿತರಾಗಿದ್ದ ಡಿ.ರಾಮಕೃಷ್ಣ ತಾಲೂಕಿನ ಖ್ಯಾತ ಕ್ರೀಡಾಪಟುವಾಗಿದ್ದು ಖೋಖೋ, ಕುಸ್ತಿ ಕ್ರೀಡೆಯಲ್ಲಿ ಜಿಲ್ಲೆಯನ್ನು ಪ್ರತಿನಿಧಿಸಿದ್ದರು. ಮೃತರು ತಾಯಿ, ಇಬ್ಬರು ಸಹೋದರಿಯರು ಹಾಗೂ ಪಶು ಪರೀಕ್ಷಕ ಡಿ.ಪ್ರಕಾಶ್ ಸೇರಿದಂತೆ ಇಬ್ಬರು ಸಹೋದರರನ್ನು ಅಗಲಿದ್ದು, ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಇ–ಖಾತೆ ದಾಖಲೆಗಳು ಪತ್ತೆ



ಮರಿ ಸಲ್ಲಿಸಲು ಮೈಸೂರು ಲೋಕಾಯುಕ್ತ ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ. ಎಲ್ಲಾ ಆಸ್ತಿಗಳಿಗೂ ಇ–ಖಾತೆಯನ್ನು ಸರ್ಕಾರ ಕಡ್ಡಾಯಗೊಳಿಸಿದೆ. ಯಾವುದೇ ಆಸ್ತಿಗೂ ಇ–ಖಾತೆ ಇಲ್ಲದಿದ್ದರೆ ನೋಂದಣಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಎಲ್ಲಾ ಆಸ್ತಿ ಮಾಲೀಕರು ತಮ್ಮ ಆಸ್ತಿಗಳಿಗೆ ಇ–ಖಾತೆ ಮಾಡಿಸಿಕೊಳ್ಳಲು ಕಚೇರಿಗೆ ಲಗ್ಗೆ ಇಡುತ್ತಿದ್ದಾರೆ. ಇದುವೇ ಅಧಿಕಾರಿಗಳಿಗೆ ವರದಾನವಾಗಿದ್ದು ಮಧ್ಯವರ್ತಿಗಳ ಮೂಲಕ ನಿವೇಶನದ ಅಳತೆಗೆ ತಕ್ಕಂತೆ ಸಾವಿರದಿಂದ ಲಕ್ಷದವರೆಗೆ ಲಂಚ ಪಡೆಯುತ್ತಿದ್ದಾರೆ. ಮಧ್ಯವರ್ತಿಗಳ ಮೂಲಕ ಹೋಗದೇ ಆಸ್ತಿ ಮಾಲೀಕರು ತಾವಾಗಿಯೇ ನೇರವಾಗಿ ಅರ್ಜಿ ಸಲ್ಲಿಸಿದರೆ, ಎಲ್ಲಾ ದಾಖಲೆಗಳು ಸರಿ ಇದ್ದರೂ, ಇಲ್ಲ–ಸಲ್ಲದ ಸಬೂಬು ಹೇಳಿ ಇ–ಖಾತೆ ಅರ್ಜಿಗಳನ್ನು ವಿಲೇವಾರಿ ಮಾಡದೇ ಆಸ್ತಿ ಮಾಲೀಕರನ್ನು ಅಲೆದಾಡಿಸಲಾಗುತ್ತಿದೆ ಎಂಬ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಇಂದು ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಸೀಟು ಹಂಚಿಕೆ ಅಣಕು ಫಲಿತಾಂಶ ಪ್ರಕಟ

ಪ್ರಕಟಣೆ ನಂತರ ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ಇಚ್ಛೆ, ಆಯ್ಕೆಗಳನ್ನು ಹೊಸದಾಗಿ ಸೇರಿಸಲು ಅಥವಾ ಬೇಡದಿದ್ದಲ್ಲಿ ಅಳಿಸಲು ಅಥವಾ ಕ್ರಮಾಂಕ ಬದಲಿಸಲು ಅಥವಾ ಮಾರ್ಪಡಿಸಲು ಜುಲೈ 26ರಿಂದ ಜುಲೈ 29ರ ಸಂಜೆ 5 ಗಂಟೆವರೆಗೆ ಅವಕಾಶ ನೀಡಲಾಗಿದೆ.

ಆಗಸ್ಟ್ 1ರಂದು ಬೆಳಿಗ್ಗೆ 11ಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಿಸಲಾಗುವುದು, ಆಗಸ್ಟ್ 2ರಂದು ಮಧ್ಯಾಹ್ನ 2ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು. ಬಳಿಕ ಛಾಯ್ಸ್ ಆಯ್ಕೆಗೆ ಆಗಸ್ಟ್ 4ರಿಂದ 7ರವರೆಗೆ ಅವಕಾಶ ನೀಡಲಾಗುವುದು. ಇದುವರೆಗೂ ಇಚ್ಛೆ, ಆಯ್ಕೆಗಳನ್ನು ದಾಖಲಿಸದ ಅಭ್ಯರ್ಥಿಗಳು ಇಷ್ಟವಿದ್ದಲ್ಲಿ 750 ರೂ. ಪಾವತಿಸಿ, ಆಪ್ಷನ್ಸ್ ದಾಖಲಿಸಬಹುದು, ಮೊದಲ ಸುತ್ತಿಗೆ ನಿಗದಿಪಡಿಸಿರುವ ಕೊನೆ ದಿನಾಂಕದ ನಂತರ ಮುಂದಿನ ಯಾವುದೇ ಸುತ್ತಿಗೆ ಇಚ್ಛೆ/ಆಯ್ಕೆಗಳನ್ನು ದಾಖಲಿಸಲು ಅವಕಾಶ ಇರುವುದಿಲ್ಲ. ಕೋರ್ಸ್ ಶುಲ್ಕ ಇತ್ಯಾದಿ ಪರಿಶೀಲಿಸಿ, ತಮಗೆ ಇಷ್ಟವಾದ ಕಾಲೇಜು, ಕೋರ್ಸ್‌ಗಳಿಗೆ ಈಗಲೇ ಇಚ್ಛೆ, ಆಯ್ಕೆಗಳನ್ನು ದಾಖಲಿಸಬಹುದು ಎಂದಿದ್ದಾರೆ.

ಕೊಡಗಿನ ನಾಲ್ವರು ದುರ್ಮರಣ

ಮಾರ್ಗ ಮಧ್ಯೆ ಗಾಯಗೊಂಡಿದ್ದ ಯುವಕ ಸಾವನ್ನಪ್ಪಿದ್ದಾನೆ. ಅಪಘಾತದ ವಿಷಯ ತಿಳಿಯುತ್ತಿದ್ದಂತೆಯೇ ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ಸ್ಥಳಕ್ಕೆ ತೆರಳಿ ಕಾರು ಮತ್ತು ಕ್ಯಾಂಟರ್ ಅನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ. ಸುಳ್ಯ ಆಸ್ಪತ್ರೆಯಿಂದ ನಾಲ್ಕು ದೇಹಗಳನ್ನು ಮಡಿಕೇರಿಗೆ ತರಲಾಗಿದ್ದು, ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಪೋಷಕರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜಕೀಯದಲ್ಲಿ ಸಿಎಂ ಸಿದ್ದರಾಮಯ್ಯ ಹವಾ

ಆಡಳಿತದಲ್ಲಿರುವ ಕೆಲವೇ ಕೆಲವು ರಾಜ್ಯಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಸಿದ್ದರಾಮಯ್ಯ ಪ್ರಭಾವಿ ನಾಯಕರಾಗಿದ್ದಾರೆ ಹೀಗಾಗಿ ಅವರನ್ನು ಹಿಂದುಳಿದ ವರ್ಗಗಳ ಸಂಘಟನೆಗೆ ಕಾಂಗ್ರೆಸ್ ಪಕ್ಷ ರಾಷ್ಟ್ರಮಟ್ಟದಲ್ಲೇ ಅವರ ನೇತೃತ್ವದಲ್ಲೇ ಮುನ್ನಡೆಯಬೇಕಾಗಿದೆ. ಇಂದಿನ ದೆಹಲಿ ಸಮಾವೇಶದಲ್ಲಿ ಸಿದ್ದರಾಮಯ್ಯ ಪ್ರಮುಖ ಭಾಷಣಕಾರರಾಗಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮ ಉದ್ಘಾಟಿಸಿದರೆ, ರಾಹುಲ್ ಗಾಂಧಿ ಸಮಾರೋಪ ಭಾಷಣ ಮಾಡಿದರು.

ರಾಷ್ಟ್ರಮಟ್ಟದಲ್ಲಿ ಹಿಂದುಳಿದ ವರ್ಗಗಳ ಮೇಲಾಗುತ್ತಿರುವ ದೌರ್ಜನ್ಯ ಹಾಗೂ ತಾರತಮ್ಯದ ಬಗ್ಗೆ ಸಮಾವೇಶದಲ್ಲಿ ಪ್ರಮುಖವಾಗಿ ಚರ್ಚಿಸಲಾಯಿತು.ಈ ಮೊದಲು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ವರದಿಗೆ ಹೈಕಮಾಂಡ್ ಬ್ರೇಕ್ ಹಾಕಿತ್ತು. ಇದಕ್ಕೆ ಸಿದ್ದರಾಮಯ್ಯ ಪರೋಕ್ಷವಾಗಿ ತಮ ಅಸಹನೆಯನ್ನು ಹೊರಹಾಕಿದ್ದರು. ಹಿಂದುಳಿದ ವರ್ಗ ಗಳಲ್ಲಿ ಕಾಂಗ್ರೆಸ್‌ನ ಧೋರಣೆಗಳ ಬಗ್ಗೆ ನಕಾರಾತ್ಮಕ ಸಂದೇಶ ರವಾನೆಯಾಗಿತ್ತು. ಈ ಕಾರಣಕ್ಕೆ ಪರಿಸ್ಥಿತಿಯನ್ನು ತಿಳಿಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ನವರನ್ನು ಮುನ್ನಲೆಗೆ ತಂದಿದೆ ಈ ಮೂಲಕ ಕರ್ನಾಟಕದಲ್ಲೂ ತಪ್ಪಿಹೋಗಬಹುದಾದ ಹಿಂದುಳಿದ ವರ್ಗಗಳ ಮತಬ್ಯಾಂಕನ್ನು ಗಟ್ಟಿಗೊಳಿಸಿಕೊಳ್ಳುವುದು ಜೊತೆಗೆ ರಾಷ್ಟ್ರಮಟ್ಟದಲ್ಲಿ ಸಿದ್ದರಾಮಯ್ಯ ನವರ ಮೂಲಕವೇ ಹಿಂದುಳಿದ ವರ್ಗಗಳ ಮತಬ್ಯಾಂಕನ್ನು ಭದ್ರ ಗೊಳಿಸುವ ತಯಾರಿಯನ್ನು ಕಾಂಗ್ರೆಸ್ ಮಾಡಿಕೊಂಡಿದೆ.

ಜು.28ರಂದು ಲೋಕಸಭೆಯಲ್ಲಿ ಚರ್ಚೆ

ವಾರದಲ್ಲಿ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ. ಅಧಿವೇಶನ ಪ್ರಾರಂಭವಾಗುವ ಮೊದಲು, ಅನೇಕ ವಿರೋಧ ಪಕ್ಷದ ಸಂಸದರು ಪಹಲ್ಗಾಮ್ ದಾಳಿ ಮತ್ತು ಆಪರೇಷನ್ ಸಿಂಧೂರ್ ಕುರಿತು ಚರ್ಚೆಗೆ ವಿನಂತಿಸಿದರು. ನಾವು ಅದಕ್ಕೆ ಸಿದ್ಧರಿದ್ದೇವೆ ಎಂದು ಅವರು ಹೇಳಿದರು. ಆಪರೇಷನ್ ಸಿಂಧೂರ್ ಕುರಿತು ಚರ್ಚಿಸಲು ನಾವು ಸಿದ್ಧರಿದ್ದೇವೆ ಮತ್ತು ವಿರೋಧ ಪಕ್ಷ ನಿಯಮಗಳ ವಿರುದ್ಧ ಪ್ರತಿಭಟಿಸಲು ಪ್ರಾರಂಭಿಸಿದರು ಎಂದು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರು. ಐದು ದಿನಗಳಲ್ಲಿ ನಾವು ಕೇವಲ ಒಂದು ಮಸೂದೆಯನ್ನು ಅಂಗೀಕರಿಸಲು ಸಾಧ್ಯವಾಯಿತು.

ನಾವು ಹೆಚ್ಚಿನ ಮಸೂದೆಗಳನ್ನು ಅಂಗೀಕರಿಸಲು ಬಯಸಿದ್ದೇವೆ. ಆದರೆ ಅದು ಸಂಭವಿಸಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು. ಸದನದ ಕಲಾಪಕ್ಕೆ ಅಡ್ಡಿಪಡಿಸದಂತೆ ಕಿರಣ್ ರಿಜಿಜು ವಿರೋಧ ಪಕ್ಷಗಳಿಗೆ ಮನವಿ ಮಾಡಿದರು. ಸಂಸದರು ಕೇಳುವ ಪ್ರಶ್ನೆಗಳಿಗೆ ಸರ್ಕಾರವು ಹೆಚ್ಚಿನ ಪ್ರಯತ್ನದಿಂದ ಉತ್ತರಗಳನ್ನು ಸಿದ್ಧಪಡಿಸುತ್ತದೆ ಎಂದು ಹೇಳಿದರು. ಇಂದು ನಡೆದ ವ್ಯವಹಾರ ಸಲಹಾ ಸಮಿತಿಯ ಸಭೆಯಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ್ ಮೂಲಕ ಸರ್ಕಾರ ನೀಡಿದ ಉತ್ತರದ ಕುರಿತು ವಿಶೇಷ ಚರ್ಚೆ ನಡೆಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಪ್ರಧಾನಿ ಮೋದಿಯವರ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ಬೇಡಿಕೆಯ ಮೇರೆಗೆ, ಸಂಸದೀಯ ವ್ಯವಹಾರಗಳ ಸಚಿವರು ಸರ್ಕಾರದ ಕಡೆಯಿಂದ ಸ್ಪೀಕರ್ ಯಾರು ಎಂದು ಹೇಳಿದರು? ಪ್ರತಿಪಕ್ಷವು ಇದನ್ನು ನಿರ್ಧರಿಸಲು ಸಾಧ್ಯವಿಲ್ಲ. ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವಿಷಯದ ಬಗ್ಗೆಯೂ ವಿರೋಧ ಪಕ್ಷವು ಆಕ್ರಮಣಕಾರಿಯಾಗಿದೆ. ಮತದಾರರ ಪಟ್ಟಿ ಪರಿಷ್ಕರಣೆ ವಿಷಯದ ಬಗ್ಗೆ ಚರ್ಚೆಗೆ ವಿರೋಧ ಪಕ್ಷವು ಒತ್ತಾಯಿಸುತ್ತಿದೆ. ಸರ್ಕಾರದ ಉನ್ನತ ಮೂಲಗಳನ್ನು ನಂಬುವುದಾದರೆ, ಅದು ಸಂಸತ್ತಿನಲ್ಲಿ ಈ ವಿಷಯದ ಬಗ್ಗೆ ಚರ್ಚೆಗೆ ಒತ್ತಾಯಿಸುತ್ತಿದೆ. SIR ಕುರಿತ ವಿರೋಧ ಪಕ್ಷದ ಬೇಡಿಕೆಯು ಸಂಸತ್ತಿಗೆ ಯಾವುದೇ ಸಂಬಂಧವಿಲ್ಲ ಎಂದು ಮೂಲಗಳು ಹೇಳುತ್ತವೆ. ನಾವು ಸುಧಾರಣೆಗಳನ್ನು ಮಾತ್ರ ಚರ್ಚಿಸಬಹುದು, ಯಾವುದೇ ಸ್ವತಂತ್ರ ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ಅಲ್ಲ ಎಂದು ಹೇಳಿದರು.

ಭಾರತದ ಎರಡನೇ ದೀರ್ಘಾವಧಿ ಪ್ರಧಾನಿ

ಜವಾಹರಲಾಲ್ ನೆಹರೂ ದಾಖಲೆ ಇದೆ. 74 ವರ್ಷ ವಯಸ್ಸಿನ ಪ್ರಧಾನಿ ಮೋದಿ, ಸ್ವಾತಂತ್ರ್ಯದ ನಂತರ ಜನಿಸಿದ ಮೊದಲ ಪ್ರಧಾನಿ ಮತ್ತು ಅತೀ ಹೆಚ್ಚು ಕಾಲ ಸೇವೆ ಸಲ್ಲಿಸಿದ ಕಾಂಗ್ರೆಸ್ಸೇತರ ಪ್ರಧಾನಿ ಕೂಡ ಆಗಿದ್ದಾರೆ. ಗುಜರಾತ್‌ನಲ್ಲಿ ಜನಿಸಿದ ಬಿಜೆಪಿ ನಾಯಕ, ಕೇಂದ್ರ ಸರ್ಕಾರದ ಮುಖ್ಯಸ್ಥರಾಗಿ ಎರಡು ಪೂರ್ಣ ಅವಧಿಗಳನ್ನು ಪೂರ್ಣಗೊಳಿಸಿದ ಏಕೈಕ ಕಾಂಗ್ರೆಸ್ಸೇತರ ನಾಯಕ ನರೇಂದ್ರ ಮೋದಿ. 2002, 2007 ಮತ್ತು 2012 ರಲ್ಲಿ ಗುಜರಾತ್ ವಿಧಾನಸಭಾ ಚುನಾವಣೆಗಳಲ್ಲಿ ಮತ್ತು 2014, 2019 ಮತ್ತು 2024 ರಲ್ಲಿ ನಡೆದ ರಾಷ್ಟ್ರೀಯ ಚುನಾವಣೆಗಳಲ್ಲಿ ಸತತ ಆರು ಚುನಾವಣೆಗಳಲ್ಲಿ ಪಕ್ಷದ ನಾಯಕರಾಗಿ ಗೆದ್ದ ಭಾರತದ ಎಲ್ಲಾ ಪ್ರಧಾನಿಗಳು ಮತ್ತು ಮುಖ್ಯಮಂತ್ರಿಗಳಲ್ಲಿ ಮೋದಿ ಏಕೈಕ ನಾಯಕರಾಗಿದ್ದಾರೆ.

ಮೊದಲೇ ಜಾತಿಗಣತಿ: ರಾಹುಲ್ ಗಾಂಧಿ

ಜೊತೆಗೆ, ತಪ್ಪಾಗಿರುವುದು ಒಳ್ಳೆಯದೇ ಆಯಿತು. ಆ ಸಮಯದಲ್ಲಿ ಜಾತಿ ಜನಗಣತಿ ನಡೆದಿದ್ದರೆ, ಈಗ ನಡೆದಂತೆ ನಡೆಯುತ್ತಿರಲಿಲ್ಲ. ನಾವು ತೆಲಂಗಾಣದಲ್ಲಿ ಮಾಡಿರುವುದು ರಾಜಕೀಯ ಭೂಕಂಪವನ್ನೇ ಸೃಷ್ಟಿಸಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ ರಾಹುಲ್, ಅವರದ್ದು ತೋರಿಕೆ, ಒಳಗೆಲ್ಲಾ ಟೊಳ್ಳು ಎಂದರು. ಕೇವಲ ಮಾಧ್ಯಮಗಳು ಪ್ರಧಾನ ಮಂತ್ರಿಯವರ ಬಲೂನ್ ಅನ್ನು ಊದಿದ್ದಾರೆ. ಆದರೆ, ಅವರ ಒಳಗೆ ಅಂತಹ ಯಾವುದೇ ಅಂಶಗಳಿಲ್ಲ ಎಂದು ಛೇಡಿಸಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಮೋದಿ ಅವರು ಸುಳ್ಳು ಹೇಳುವವರು. ಅವರಿಂದ ದೇಶಕ್ಕೆ ಏನೂ ಒಳಿತು ಮಾಡಲು ಸಾಧ್ಯವಿಲ್ಲ ಎಂದು ಟೀಕಿಸಿದರು.

ಒಬಿಸಿ ಮತ್ತು ಇತರ ನಿರ್ಲಕ್ಷಿತ ವರ್ಗಗಳು ಬಿಜೆಪಿಯ ವಿರುದ್ಧ ಒಂದಾಗಬೇಕು ಎಂದು ಕರೆ ನೀಡಿರುವ ಖರ್ಗೆ, ಒಬ್ಬ ಮನುಷ್ಯನಲ್ಲಿ ಮೂರು ಅಂಶಗಳಿರಬೇಕು. ಮಾನಸಿಕ ಬಲ, ಮನುಷ್ಯ ಬಲ ಮತ್ತು ಆರ್ಥಿಕ ಬಲ. ಇದರಿಂದ ಆತ ಸಮಾಜದಲ್ಲಿ ಮುಂದೆ ಬರಬಹುದು. ಇದರಲ್ಲಿ ಒಂದು ಇಲ್ಲದಿದ್ದರೂ ದೇಶದಲ್ಲಿ ನೀವು ಮುಂದಕ್ಕೆ ಬರಲಾಗದು ಎಂದರು.

18ನೇ ಲೋಕಸಭೆಯಲ್ಲಿ ನಾವು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಜನರ ಮುಂದೆ ಹೋಗಿದ್ದೆವು ಮತ್ತು 'ಸ್ವಲ್ಪ ಯಶಸ್ಸು' ಗಳಿಸಿದೆವು. ನಾವು ಇನ್ನೂ 20?25 ಹೆಚ್ಚಿನ ಸೀಟುಗಳನ್ನು ಗಳಿಸಿದ್ದರೆ, ಮೋದಿ ಅವರ ಸರ್ಕಾರ ಬುಡಮೇಲಾಗುತ್ತಿತ್ತು ಎಂದರು.

ಒಂದು ಭಾರತದ ಕನಸು: ಸಿಎಂ ನಾವು ಒಂದು ಭಾರತದ ಕನಸು ಕಾಣುತ್ತೇವೆ. ಅಲ್ಲಿ ನೇಕಾರನ ಮಗಳು ನೀತಿನಿರೂಪಕಳಾಗುತ್ತಾಳೆ, ಕುರಿಗಾಹಿಯ ಮಗ ಒಬ್ಬ ವಿದ್ವಾಂಸನಾಗುತ್ತಾನೆ ಮತ್ತು ಕಾರ್ಮಿಕನ ಮಗು ಬದುಕಿನ ಆಚೆಗೆ ಕನಸು ಕಾಣುತ್ತದೆ. ಆ ಭಾರತವನ್ನು ಘೋಷಣೆಗಳಿಂದ ನಿರ್ಮಿಸಲಾಗದು. ಇದಕ್ಕೆ ರಾಜಕೀಯ ಧೈರ್ಯ ಮತ್ತು ನೈತಿಕ ಸ್ಪಷ್ಟತೆಯ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮ್ಮೇಳನದಲ್ಲಿ ಮಾತನಾಡಿದ ಅವರು ಪ್ರತಿಯೊಬ್ಬ ಒಬಿಸಿ ನಾಯಕ ಪ್ರತಿಯೊಬ್ಬ ಗ್ರಾಮೀಣ ಕಾರ್ಯಕರ್ತ ಸಂವಿಧಾನದಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದಂತೆ ಶಿಕ್ಷಣ ಆಂದೋಲನ ಸಂಘಟನೆಯ ಅಗತ್ಯ ಇದೆ. ಕಾಯುವ ಸಮಯ ಮುಗಿದಿದೆ. ನಾವು ನ್ಯಾಯವನ್ನು ವಿಳಂಬಗೊಳಿಸದ, ಪ್ರಾತಿನಿಧ್ಯವನ್ನು ನಿರಾಕರಿಸದ ಮತ್ತು ಘನತೆಯು ಷರತ್ತುಬದ್ಧವಾಗಿರದ ಗಣರಾಜ್ಯವನ್ನು ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ಸಿಎಂ, ಡಿಸಿಎಂಗೆ 'ರಾಹುಲ್' ದರ್ಶನವಿಲ್ಲ

- ನಿಗಮ–ಮಂಡಳಿ ನೇಮಕಾತಿಗೆ ಸುರ್ಜೇವಾಲ ಅನುಮೋದನೆ
- ಆದರೆ ಪರಿಷತ್‌ಗೆ ನಾಮಕರಣ ಸಮಸ್ಯೆಗೆ ರಾಹುಲ್ ಪರಿಹಾರ

ಬೆಂಗಳೂರು, ಜು. 25(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳಿಗೆ ಈ ಬಾರಿಯೂ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭೇಟಿ ಸಾಧ್ಯವಾಗಿಲ್ಲ.

ರಾಹುಲ್ ಭೇಟಿ ಸಾಧ್ಯವಾಗದಿದ್ದರೂ 35 ನಿಗಮ–ಮಂಡಳಿಗಳ ಅಧ್ಯಕ್ಷ ಪಟ್ಟಿಗೆ ಪಕ್ಷದ ವರಿಷ್ಠರಿಂದ ಹಸಿರು ನಿಶಾನೆ ದೊರಕಿಸಿಕೊಂಡಿದ್ದಾರೆ. ವರಿಷ್ಠರ ಜೊತೆ ರಾಜಕೀಯ ವಿಚಾರ ಚರ್ಚೆ ಹಾಗೂ ಪಕ್ಷದ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕಳೆದ ಎರಡು ದಿನಗಳಿಂದ ಇಬ್ಬರು ಮುಖಂಡರು ದೆಹಲಿಯಲ್ಲೇ ಬಿಡಾರ ಹೂಡಿದ್ದಾರೆ.

ಸತತ ಮೂರನೇ ಬಾರಿ ರಾಹುಲ್ ಭೇಟಿಗಾಗಿ ಮಾಡಿದ ಪ್ರಯತ್ನ ಸಫಲವಾಗಿಲ್ಲ. ಮುಂದಿನ ವಾರ ಮತ್ತೆ ಬರುವಂತೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರಿಗೆ ಎಐಸಿಸಿ ತಿಳಿಸಿದೆ. ಬಹುತೇಕ ಆಗಸ್ಟ್ 1ರಂದು ರಾಹುಲ್ ಭೇಟಿ ಸಾಧ್ಯತೆ ಇದ್ದು, ಜುಲೈ 31ರಂದೇ ದೆಹಲಿಗೆ ಬರುವಂತೆ ಹೇಳಿದೆ. ಖಾಲಿ ಇರುವ ನಿಗಮ–ಮಂಡಳಿಗಳಿಗೆ ಅಧ್ಯಕ್ಷರ ಹಾಗೂ 1,200 ನಿರ್ದೇಶಕರ ನೇಮಕಾತಿಗೆ ಎಐಸಿಸಿ ಹಸಿರು ನಿಶಾನೆ ತೋರಿದೆ.

ಆದರೆ, ವಿಧಾನ ಪರಿಷತ್‌ನ ತೆರವಾದ ನಾಲ್ಕು ಸದಸ್ಯ ಸ್ಥಾನಗಳಿಗೆ ನಾಮಕರಣ ಕುರಿತು ಗೊಂದಲ ಮುಂದುವರಿದಿದ್ದು, ಈ ಬಗ್ಗೆ ರಾಹುಲ್ ಅವರೇ ಅಂತಿಮ ತೀರ್ಮಾನ ಕೈಗೊಳ್ಳಬೇಕಿದೆ. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಕಳೆದ ಗುರುವಾರ ರಾತ್ರಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ ನಿಗಮ–ಮಂಡಳಿ ಅಧ್ಯಕ್ಷ ಹಾಗೂ ನಿರ್ದೇಶಕರ ನೇಮಕಾತಿಗೆ ಅನುಮತಿ ಪಡೆದುಕೊಂಡರು.

ಇದೇ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರ ನೇಮಕಾತಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ನಡುವೆ ಸ್ವಲ್ಪ ಭಿನ್ನಾಭಿಪ್ರಾಯ ಇದ್ದಿದ್ದರಿಂದ ಸುರ್ಜೇವಾಲ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಕೆಲವು ಸಂಪುಟ ಸಚಿವರ ವರ್ತನೆ ಬಗ್ಗೆ ಸಭೆಯಲ್ಲೇ ಸುರ್ಜೇವಾಲ ಆಕ್ಷೇಪ ವ್ಯಕ್ತಪಡಿಸಿ, ಇವರ ಕುರಿತು ಗಮನಹರಿಸಿ ಎಂಬ ಕಿವಿಮಾತು ಹೇಳಿದ್ದಾರೆ.

ಕಳೆದ ಚುನಾವಣೆಯಲ್ಲಿ ಪಕ್ಷಕ್ಕೆ ಕರ್ನಾಟಕದ ಜನತೆ ದೊಡ್ಡ ಸಂಖ್ಯೆಯಲ್ಲಿ ಶಾಸಕರನ್ನು ಆಯ್ಕೆ ಮಾಡಿಕೊಟ್ಟಿದ್ದಾರೆ. ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ, ಅಭಿವೃದ್ಧಿ ಮತ್ತು ಇತರ ವಿಚಾರಗಳಿಗೆ ಸಂಬಂಧಿಸಿದಂತೆ ಅಹವಾಲು ಪರಿಹರಿಸಲು ಮುಂದಾಗಿ ಎಂದಿದ್ದಾರೆ.

ಶಾಸಕರು ಮತ್ತು ಸಚಿವರ ಜೊತೆ ನಾನು ನಡೆಸಿದ ಮುಖಾಮುಖಿ ಚರ್ಚೆಯ ಪೂರ್ಣ ವಿವರವನ್ನು ಎಐಸಿಸಿ ಅಧ್ಯಕ್ಷರಿಗೆ ತಲುಪಿಸಿದ್ದೇನೆ, ಅವರು ನೀಡಿದ ಸಲಹೆ–ಸೂಚನೆಯನ್ನು ನಿಮ್ಮ ಗಮನಕ್ಕೂ ತಂದಿದ್ದೇನೆ ಎಂದಿದ್ದಾರೆ.

ಆಧಾರರಹಿತ, ದಾರಿ ತಪ್ಪಿಸುವ ಆರೋಪ

ರಾಹುಲ್ ಗಾಂಧಿಗೆ ಸಾಕ್ಷಿ ಸಮೇತ ಉತ್ತರ ಕೊಟ್ಟ ಚುನಾವಣಾ ಆಯೋಗ

ನವದೆಹಲಿ, ಜು.25– ಕರ್ನಾಟಕ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಅನುಭವಿಸುವುದಕ್ಕೆ ಚುನಾವಣೆಯಲ್ಲಿ ನಡೆದ ವಂಚನೆಯೇ ಕಾರಣ ಎಂದಿದ್ದ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ಚುನಾವಣಾ ಆಯೋಗ ಕರ್ನಾಟಕದಲ್ಲಿ ಅಕ್ರಮ ಎಸಗಲು ಅವಕಾಶ ನೀಡಿರುವುದಕ್ಕೆ ನಮ್ಮ ಬಳಿ 100% ಸಾಕ್ಷಿ ಇದೆ! ಚುನಾವಣಾ ಆಯೋಗ ಅನಗತ್ಯವಾಗಿ ಮತದಾರರ ಹೆಸರು ಸೇರಿಸುವುದು, ತೆಗೆಯುವುದು ಮಾಡಿರುವುದನ್ನು ಪತ್ತೆ ಮಾಡಿದ್ದೇವೆ! ನೀವು, ನಿಮ್ಮ ಅಧಿಕಾರಿಗಳು ಇದರಿಂದ ಪಾರಾಗುತ್ತೇವೆ ಎಂದು ಭಾವಿಸಿದ್ದರೆ ಅದು ತಪ್ಪು. ನೀವು ಪಾರಾಗಲು ಸಾಧ್ಯವಿಲ್ಲ. ಏಕೆಂದರೆ, ನಾವು ನಿಮ್ಮ ಹಿಂದೆ ಬಿದ್ದಿದ್ದೇವೆ ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ತಿರುಗೇಟು ನೀಡಿರುವ ಚುನಾವಣಾ ಆಯೋಗ ದಾಖಲೆ ಸಮೇತ ರಾಹುಲ್ ಗಾಂಧಿಯ ಆರೋಪಕ್ಕೆ ತಕ್ಕ ಉತ್ತರ ನೀಡಿದೆ.

ಕರ್ನಾಟಕದ ಒಂದು ಸ್ಥಾನದಲ್ಲಿ ಮತಗಳನ್ನು ಕದಿಯಲು ಇಸಿಐ ಅವಕಾಶ ನೀಡಿದೆ ಎಂಬುದಕ್ಕೆ ತಮ್ಮ ಬಳಿ 100% ಪುರಾವೆಗಳಿವೆ. ಅಂತಹ ವಿಷಯ ಎಲ್ಲೆಡೆ ನಡೆಯುತ್ತಿದೆ ಎಂಬ ರಾಹುಲ್ ಗಾಂಧಿಯವರ ಹೇಳಿಕೆಯನ್ನು ಆಯೋಗ ಬಲವಾಗಿ ನಿರಾಕರಿಸಿತು. ತಮ್ಮ ಆರೋಪಕ್ಕೆ ಶೇ. 100ರಷ್ಟು ಪುರಾವೆಯಿದೆ ಎಂದು ಹೇಳಿಕೊಂಡಿದ್ದ ರಾಹುಲ್ ಗಾಂಧಿಯ ಹೇಳಿಕೆಯನ್ನು ಚುನಾವಣಾ ಆಯೋಗವು ಸತ್ಯ ಪರಿಶೀಲನೆ ಮಾಡಿದೆ. ಕಾಂಗ್ರೆಸ್ ಪಕ್ಷ ಮತ್ತು ಅದರ ಸೋತ ಅಭ್ಯರ್ಥಿಗಳು ಚುನಾವಣೆಯ ನಂತರ ಒಂದೇ ಒಂದು ಅರ್ಜಿಯನ್ನು ಸಲ್ಲಿಸಲಿಲ್ಲ ಎಂದು ಆಯೋಗ ಹೇಳಿದೆ. ಕರ್ನಾಟಕದ ಚುನಾವಣಾ ಅಧಿಕಾರಿ ಕೂಡ ಈ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿದ್ದು, ಎಲ್ಲಾ ಮತದಾರರ ಪಟ್ಟಿಯನ್ನು ಪಾರದರ್ಶಕವಾಗಿ ಸಿದ್ಧಪಡಿಸಲಾಗಿದೆ. ಆ ಪ್ರತಿಗಳನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗದ ವಕ್ತಾರರು ಹೇಳಿದ್ದಾರೆ.

ಭಾರತೀಯ ಚುನಾವಣಾ ಆಯೋಗದ ವಿರುದ್ಧ ಇಂತಹ ಆಧಾರರಹಿತ ಮತ್ತು ಬೆದರಿಕೆ ಆರೋಪಗಳನ್ನು ಏಕೆ ಮಾಡಲಾಗುತ್ತಿದೆ ಎಂದು ಚುನಾವಣಾ ಆಯೋಗಕ್ಕೆ ಆಶ್ಚರ್ಯವಾಗುತ್ತಿದೆ. ಈಗ ಕೂಡ ಅದೇ ಆರೋಪವನ್ನು ಮಾಡುತ್ತೀರಾ ಎಂದು ಚುನಾವಣಾ ಸಮಿತಿ ದಾಖಲೆಗಳನ್ನು ಲಗತ್ತಿಸಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಕರ್ನಾಟಕ ಲೋಕಸಭಾ 2024ರ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿಯ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಒಂದೇ ಒಂದು ಮೇಲ್ಮನವಿ ಸಲ್ಲಿಸಿಲ್ಲ ಎಂದು ಇಸಿಐ ವಕ್ತಾರರು ಹೇಳಿದ್ದಾರೆ.

2024ರ ಲೋಕಸಭಾ ಚುನಾವಣೆಯ ನಡಾವಳಿಗೆ ಸಂಬಂಧಿಸಿದಂತೆ 10 ಚುನಾವಣಾ ಅರ್ಜಿಗಳಲ್ಲಿ ಸೋತ ಯಾವುದೇ ಕಾಂಗ್ರೆಸ್ ಅಭ್ಯರ್ಥಿ ಒಂದೇ ಒಂದು ಚುನಾವಣಾ ಅರ್ಜಿಯನ್ನು ಕೂಡ ಸಲ್ಲಿಸಿಲ್ಲ ಎಂದು ಇಸಿಐ ವಕ್ತಾರರು ಹೇಳಿದ್ದಾರೆ. ಕರ್ನಾಟಕದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯ ಪ್ರತಿಗಳನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದಂತೆ ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ ಹೊರಡಿಸಿದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಮತದಾರರ ಪಟ್ಟಿಗಳ ಕರಡು ಮತ್ತು ಅಂತಿಮ ಪ್ರಕಟಣೆಯ ನಡುವೆ, 917928 ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದೆ ಎಂದು ಅದು ಹೇಳಿದೆ. ಮತದಾರರ ಪಟ್ಟಿಗಳಲ್ಲಿ ತಪ್ಪಾದ ಸೇರ್ಪಡೆ ಅಥವಾ ಅಳಿಸುವಿಕೆಯ ವಿರುದ್ಧ ಮೇಲ್ಮನವಿ ಸಲ್ಲಿಸಬಹುದಾದರೂ ಅಂತಹ ಯಾವುದೇ ಮೇಲ್ಮನವಿಯನ್ನು ಇದುವರೆಗೂ ಸ್ವೀಕರಿಸಲಾಗಿಲ್ಲ ಎಂದು ಹೇಳಿಕೆಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ಮೈಸೂರು ಮಹಾರಾಣಿ ಸರ್ಕಾರಿ ಪಿಯು ಕಾಲೇಜಲ್ಲಿ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳಿಗೆ ಚಾಲನೆ

ಶ್ರದ್ಧೆಯಿಂದ ಶೈಕ್ಷಣಿಕ ಸಾಧನೆಗೆ ಶಾಸಕ ಹರೀಶ್‌ಗೌಡ ಕರೆ



ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಜು.25(ಎಂಕೆ)- ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 2025-26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಶುಕ್ರವಾರ ಚಾಲನೆ ದೊರೆಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ(ಪದವಿ ಪೂರ್ವ ಶಿಕ್ಷಣ) ಇಲಾಖೆ ಸಹಯೋಗದೊಂದಿಗೆ ಕಾಲೇಜಿನ ಕೆಂಪನಂಜಮ್ಮಣ್ಣಿ ವೇದಿಕೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿನಿಯರು ಓದಿನ ಮೇಲೆ ಗಮನ ಕೊಡಬೇಕು. ಮಾತೃ ಭಾಷೆಗೆ ಮೊದಲ ಪ್ರಾಶಸ್ತ್ಯ ನೀಡಬೇಕು. ಶ್ರದ್ಧೆ ಮತ್ತು ಏಕಚಿತ್ತದಿಂದ ಅಧ್ಯಯನ ನಡೆಸಿದರೆ, ಉತ್ತಮ ಅಂಕಗಳನ್ನು ಗಳಿಸಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಮೈಸೂರು ವಿವಿ ಜೆನೆಟಿಕ್ಸ್ ವಿಭಾಗದ ಮುಖ್ಯಸ್ಥರಾದ ಸುತ್ತೂರು ಎಸ್.ಮಾಲಿನಿ ಮಾತನಾಡಿ, ಕಾಲೇಜು ವಿದ್ಯಾರ್ಥಿಗಳ ಈ ಹದಿಹರೆಯದ ಹಂತ ಅತ್ಯಂತ ಮುಖ್ಯವಾದ ಘಟ್ಟವಾಗಿದ್ದು, ಈ ಹಂತದಲ್ಲಿ ಗೆದ್ದರೆ ಜಗತ್ತನ್ನೇ ಗೆಲ್ಲಬಹುದು. ಹಾಗಾಗಿ ಓದು ಮತ್ತು ಆರೋಗ್ಯದ ಕಡೆಗೆ ಗಮನ ಹರಿಸುವಂತೆ ಸಲಹೆ ನೀಡಿದರು.

ನೂತನ ಕಟ್ಟಡ ಉದ್ಘಾಟನೆ...

ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ 2022-23ನೇ ಸಾಲಿನ ವಿವೇಕ ಶಾಲೆ ಯೋಜನೆಯಡಿ ಅಂದಾಜು 75 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಿರುವ 3 ತರಗತಿ ಕೊಠಡಿಗಳನ್ನು ಒಳಗೊಂಡ ನೂತನ ಕಟ್ಟಡವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ವಿಶ್ವ ಆರೋಗ್ಯ ಸಂಸ್ಥೆಯು ದೈಹಿಕ ಮತ್ತು ಮಾನಸಿಕ ಆರೋಗ್ಯದ ಜೊತೆಗೆ ಎಲ್ಲರೊಂದಿಗೆ ಬೆರೆಯುವ, ಸಹಬಾಳ್ವೆಯಿಂದಿರುವ ಸಾಮಾಜಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತೀ ಮುಖ್ಯ ಎಂದು ತಿಳಿಸಿದೆ. ಮುಂದಿನ ದಿನಗಳಲ್ಲಿ ಒಬ್ಬಂಟಿತನ ಹೆಚ್ಚಾಗಿ ಕಾಡಲಿದ್ದು, ಒಂಟಿಯಾಗಿರುವುದು ಸಹ ಅನಾರೋಗ್ಯವಾಗಿದೆ ಎಂದರು.


ವಿದ್ಯಾರ್ಥಿನಿಯರು ಮುಖ್ಯವಾಗಿ ಆರೋಗ್ಯದ ವಿಚಾರವನ್ನು ತಿಳಿದುಕೊಳ್ಳಬೇಕು. ಋತುಸ್ರಾವದ ಸಂದರ್ಭದಲ್ಲಿ ಶುಚಿತ್ವ ಕಾಪಾಡಿಕೊಳ್ಳದೇ ಇದ್ದರೆ, ಕ್ಯಾನ್ಸರ್‌ನಂತಹ ರೋಗಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿರಲಿದೆ. ಹಾಗೆಯೇ ಪೌಷ್ಟಿಕ ಆಹಾರ ಸೇವನೆ, ನಿತ್ಯ ವ್ಯಾಯಾಮ, ಯೋಗಭ್ಯಾಸ ಮಾಡಿದಲ್ಲಿ ಆರೋಗ್ಯ ವೃದ್ಧಿಸಲಿದೆ. ಜೀವನ ಶೈಲಿಯಲ್ಲಾಗುತ್ತಿರುವ ಬದಲಾವಣೆಯಿಂದಲೇ ಅಸಾಂಕ್ರಾಮಿಕ ಕಾಯಿಲೆಗಳು ಹೆಚ್ಚಾಗುತ್ತಿವೆ ಎಂದು ಎಚ್ಚರಿಸಿದರು.

ಪ್ರತಿಭಾ ಪುರಸ್ಕಾರ: ಬಳಿಕ ಕಾಲೇಜಿನ ಪ್ರತಿಭಾನ್ವಿತ 65 ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾಲೇಜಿಗೆ ಟಾಪರ್‌ಗಳಾದ ಮಾಹೀನ್ ಸುರೂರ್ (ವಿಜ್ಞಾನ ವಿಭಾಗ), ಮಂಗಳಗೌರಿ (ವಾಣಿಜ್ಯ) ಹಾಗೂ ಕೆ.ಅಮೂಲ್ಯ(ಕಲಾ) ಅವರನ್ನು ಸನ್ಮಾನಿಸಿ, ಪ್ರೋತ್ಸಾಹ ಧನ ನೀಡಲಾಯಿತು.

ಮಹಾರಾಣಿ ಸರ್ಕಾರಿ ಪ್ರೌಢಶಾಲೆ ಉಪ ಪ್ರಾಂಶುಪಾಲರಾದ ತಿರುಮಲಾಂಬ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಹದೇವು, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಪಿ.ಸೋಮಣ್ಣ, ಇಂಜಿನಿಯರ್ ಶ್ರೀನಿವಾಸ್, ಮಂಗಳಮ್ಮ, ಚೆಲುವ, ಲೀಲಾ, ಮಂಜುಳಾ, ಶಾಂತ, ನವೀನ್, ರವಿಕುಮಾರ್, ಮಮತ, ಸಂದೀಪ್ ಮತ್ತಿತರರು ಉಪಸ್ಥಿತರಿದ್ದರು.

ಮುರುಕಲು ಡೆಸ್ಕ್, ಹದಗೆಟ್ಟ ಶೌಚಾಲಯಗಳ ನಡುವೆ ಮಹಾರಾಣಿಯರ ಕಲಿಕೆ...!





ಮುರಿದಿರುವ ಡೆಸ್ಕ್‌ಗಳು, ತರಗತಿ ಗೋಡೆ ಗಾರೆ ಕಿತ್ತು ಬಂದಿರುವುದು, ಅಶುಚಿತ್ವದಿಂದ ಕೂಡಿರುವ ವಿದ್ಯಾರ್ಥಿನಿಯರ ಶೌಚಾಲಯವನ್ನು ಕಾಣಬಹುದು.

ಮೈಸೂರಿನ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬಹುತೇಕ ತರಗತಿ ಕೊಠಡಿ ಗೋಡೆಗಳು ಶಿಥಿಲಗೊಂಡಿದ್ದು, ಗಾರೆ ಕಿತ್ತು ಬರುತ್ತಿದೆ. ನಾಲ್ಕು ಬ್ಲಾಕ್‌ಗಳಲ್ಲಿ ಪದವಿ ಪೂರ್ವ ತರಗತಿಗಳು ನಡೆಯುತ್ತಿದ್ದು, ಅವುಗಳಲ್ಲಿ ಪ್ರಾಂಶುಪಾಲರು, ಅಧ್ಯಾಪಕರ ಕೊಠಡಿಗಳನ್ನು ಒಳಗೊಂಡ 2 ಹಳೆ ಬ್ಲಾಕ್‌ಗಳಲ್ಲಿ 20ಕ್ಕೂ ಹೆಚ್ಚು ಕೊಠಡಿಗಳಿದ್ದು, ಬಹುತೇಕ ಎಲ್ಲಾ ಕೊಠಡಿಗಳ ಗೋಡೆಗಳು ಶಿಥಿಲಗೊಂಡು ಗಾರೆ ಕಿತ್ತು ಬಂದಿದೆ. ತರಗತಿ ಕೊಠಡಿಗಳಲ್ಲಿ ತೆರೆದ ಕರೆಂಟ್ ಸ್ವಿಚ್‌ಬೋರ್ಡ್‌ಗಳಿದ್ದು, ಯಾವಾಗ ಬೇಕಾದರೂ ಅವಘಡ ಸಂಭವಿಸುವ ಸಾಧ್ಯತೆ ಇದೆ. ಹಾಗೆಯೇ ವಿದ್ಯಾರ್ಥಿನಿಯರು ಮತ್ತು ಅಧ್ಯಾಪಕರ ಶೌಚಾಲಯ ಗಬ್ಬೆದ್ದು ನಾರುತ್ತಿವೆ.

ಮುರುಕಲು ಬೆಂಚ್‌ಗಳು: ಸುಮಾರು 2000ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿರುವ ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ಬಹುತೇಕ ಡೆಸ್ಕ್‌ಗಳು ಮುರಿದಿವೆ. ನಟ್ಟು-ಬೋಲ್ಟ್ ಲೂಸ್ ಆಗಿ ಬೆಂಚ್‌ಗಳು ಅಲುಗಾಡುತ್ತಿವೆ. ಇಂತಹ ಡೆಸ್ಕ್‌ಗಳಲ್ಲಿಯೇ ವಿದ್ಯಾರ್ಥಿನಿಯರು ಕುಳಿತು ಪಾಠ ಕೇಳಬೇಕಾದ ದುಸ್ಥಿತಿ ಇದೆ. ಎರಡು ಹೊಸ ಕಟ್ಟಡದಲ್ಲಿರುವ ತರಗತಿಗಳಲ್ಲಿ ಹೊಸ ಡೆಸ್ಕ್‌ಗಳಿದ್ದು, ಹಳೆ ಕಟ್ಟಡದಲ್ಲಿರುವ 20ಕ್ಕೂ ಹೆಚ್ಚು ತರಗತಿಗಳಲ್ಲಿ ಹಳೆಯ ಮತ್ತು ಮುರುಕಲು ಡೆಸ್ಕ್‌ಗಳೇ ವಿದ್ಯಾರ್ಥಿನಿಯರಿಗೆ ಆಸರೆಯಾಗಿದ್ದು, ಯಾವಾಗ ಬೇಕಾದರೂ ಮುರಿದು ಅನಾಹುತ ಸಂಭವಿಸಬಹುದು ಎಂದು 'ಮೈಸೂರು ಮಿತ್ರ'ನಲ್ಲಿ ಕೆಲ ವಿದ್ಯಾರ್ಥಿನಿಯರು, ಅಧ್ಯಾಪಕರು ದುಸ್ಥಿತಿ ವಿವರಿಸಿದರು.

ಮೈಸೂರು ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರಕ್ಕೆ ಸದಸ್ಯರ ನೇಮಕಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.25-ಮೈಸೂರು ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರವು ಸರ್ಕಾರದ ಆದೇಶದಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈಗಾಗಲೇ ರಚಿಸಲಾಗಿದ್ದು, ಪ್ರಾಧಿಕಾರದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷರಾಗಿ, ಪೊಲೀಸ್ ಆಯುಕ್ತರು, ಸದಸ್ಯ ಕಾರ್ಯದರ್ಶಿಯಾಗಿದ್ದು, ಪೊಲೀಸ್ ಅಧೀಕ್ಷಕರು, ನಿವೃತ್ತ ಅಧಿಕಾರಿ (ಉಪವಿಭಾಗಾಧಿಕಾರಿಗಳ ಕಡಿಮೆ ಇಲ್ಲದ ದರ್ಜೆ ನಿವೃತ್ತ ಅಧಿಕಾರಿ) ಮತ್ತು ನಾಗರಿಕ ಸಮಾಜದ ಸದಸ್ಯರಾಗಿರುತ್ತಾರೆ. ಮೈಸೂರು ಜಿಲ್ಲಾ ದೂರು ಪ್ರಾಧಿಕಾರದಲ್ಲಿ ನಾಗರಿಕ ಸಮಾಜದ ಸದಸ್ಯರ ಹುದ್ದೆಯು ಖಾಲಿ ಇದ್ದು ಸದಸ್ಯರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಲು ಇಚ್ಛಿಸುವವರು ಜು.25ರಿಂದ ಆ.8ರವರೆಗೆ ಡಿಸಿ ಕಚೇರಿ, ಕೊಠಡಿ ಸಂಖ್ಯೆ 108, ಜಿಲ್ಲಾ ಮಟ್ಟದ ಅಧಿಕಾರಿಗಳ ಸಂಕೀರ್ಣ, ಸಿದ್ಧಾರ್ಥನಗರ, ಮೈಸೂರು ಇಲ್ಲಿಗೆ ಅರ್ಜಿಯನ್ನು ತಮ್ಮ ವ್ಯಕ್ತಿ ಪರಿಚಯ, ಆಧಾರ ಕಾರ್ಡ್, ಸೇವೆ ಸಲ್ಲಿಸಿರುವ ಕ್ಷೇತ್ರದ ವಿವರ ಹಾಗೂ ದಾಖಲಾತಿಗಳೊಂದಿಗೆ ಸಲ್ಲಿಸಬೇಕಾಗಿದೆ ಎಂದು ಡಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದಗ್ರಹಣ ಸಮಾರಂಭ



ಮೈಸೂರಿನ ಶ್ರೀರಾಂಪುರದಲ್ಲಿರುವ ಮಹಾವೀರ ವಿದ್ಯಾಮಂದಿರದಲ್ಲಿ ಪದಗ್ರಹಣ ಸಮಾರಂಭ ನಡೆಯಿತು. ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷ ಡಾ.ಬಾಹುಬಲಿ ಜೆ ನಾಗಾವಿ, ಗೌರವ ಕಾರ್ಯದರ್ಶಿ ಶ್ರೀಮತಿ ಇಚ್ಛಾ ಜೆ., ಪ್ರಾಂಶುಪಾಲರಾದ ಶ್ರೀಮತಿ ಅನಿತಾ ಡಿ., ಉಪ ಪ್ರಾಂಶುಪಾಲರಾದ ಆಶಾ ಎಸ್. ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಇಂದು ಚಲನಚಿತ್ರಗಳ ಗಾಯನ

ಮೈಸೂರು,ಜು.25(ಎಂಟಿವೈ)- ಮೈಸೂರಿನ ವಿಶ್ವೇಶ್ವರ ನಗರದ ಬಿಲ್ವರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ನಾಳೆ(ಜು.26) ಸಂಜೆ 4ಕ್ಕೆ ಗಾನ ಮಹೋತ್ಸವ ಶೀರ್ಷಿಕೆಯಲ್ಲಿ ಪ್ರಸಿದ್ಧ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಹಾರಾಜ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮೈಸೂರು ಎಂ. ಮಹಾಲಿಂಗ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಗಾಯನ ಆರಂಭವಾಗಲಿದೆ. ಬಳಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಆ ನಂತರ ಮತ್ತೆ ಗಾಯನ ಕಾರ್ಯಕ್ರಮ ಮುಂದುವರೆಯಲಿದೆ. ಒಟ್ಟು 24 ಗಾಯಕ, ಗಾಯಕಿಯರು ಸುಮಾರು 48 ಗೀತೆಗಳನ್ನು ಹಾಡಲಿದ್ದಾರೆ ಎಂದರು.

ಕಾರ್ಯಕ್ರಮವನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಉದ್ಘಾಟಿಸಲಿದ್ದಾರೆ. ಬ್ರಾಹ್ಮಣ ಮಹಾಸಭಾದ ಡಿ.ಟಿ. ಪ್ರಕಾಶ್, ನಾಗರಾಜು ವಿ. ಬೈರಿ., ಸಿ.ವಿ. ಪಾರ್ಥಸಾರಥಿ, ರೂಪ, ಎಂ. ನಾಗರತ್ನ ಇನ್ನಿತರರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಸದಸ್ಯರಾದ ಆಂಡಾಳ್, ರೂಪ, ಸಂದೇಶ್‌ಕುಮಾರ್, ನಾಗರತ್ನ ಇದ್ದರು.

ಉಚಿತ ಸಂಧಿವಾತ, ಮೂಳೆರೋಗ ತಪಾಸಣಾ, ಚಿಕಿತ್ಸೆ ಶಿಬಿರ



ಮೈಸೂರು, ಜು. 25-ಮೈಸೂರಿನ ಹಾರ್ಟ್ ಸಂಸ್ಥೆ ವತಿಯಿಂದ ಜು. 27 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಅಗ್ರಹಾರದಲ್ಲಿರುವ ಸಂಧಿವಾತ ಮತ್ತು ಕೀಲು ರೋಗ ಕ್ಲಿನಿಕ್‌ನಲ್ಲಿ ಉಚಿತ ಸಂಧಿವಾತ, ಮೂಳೆರೋಗ ತಪಾಸಣಾ ಹಾಗೂ ಚಿಕಿತ್ಸೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ 7338463486, 8867525114 ಸಂಪರ್ಕಿಸಬಹುದು.

ಇಂದು ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ಜು. 25- ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಆಶೀರ್ವಾದಗಳೊಂದಿಗೆ ನಾಳೆ (ಜು. 26) ಸಂಜೆ 6ಕ್ಕೆ 327ನೆಯ ಶಿವಾನುಭವ ದಾಸೋಹ ಉಪನ್ಯಾಸ ಕಾರ್ಯಕ್ರಮವನ್ನು ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ನಾಗಲೇ ಶಿವಕುಮಾರ ಶರಣರ ವಿಚಾರಧಾರೆ ಕುರಿತು ಉಪನ್ಯಾಸ ನೀಡಲಿದ್ದಾರೆ. ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ಜಿ. ಬಸವರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಕು. ಎನ್. ಚೂಡಾಮಣಿ ವಚನ ಗಾಯನ ನಡೆಸಿಕೊಡಲಿದ್ದಾರೆ.

ಜಲಜೀವನ್ ಮಿಷನ್ ಯೋಜನೆ ಕಾಮಗಾರಿ ಪರಿಶೀಲಿಸಿದ ಜಿಪಂ ಸಿಇಓ

ಮೀಟರ್ ರೀಡಿಂಗ್ ಪ್ರಾರಂಭಿಸಿ, ಅರಿವು ಮೂಡಿಸಲು ಸೂಚನೆ



ಮೈಸೂರಿನ ಹೆಚ್.ಡಿ.ಕೋಟೆ, ಸರಗೂರು ತಾಲೂಕುಗಳಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಪ್ರಗತಿ, ಕಾಮಗಾರಿಗಳ ಸ್ಥಳಕ್ಕೆ ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು,ಜು.25(ಜಿಎ)-ಮೈಸೂರಿನ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕುಗಳಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಪ್ರಗತಿ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳ ಸ್ಥಳಕ್ಕೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್. ಯುಕೇಶ್‌ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹೆಚ್.ಡಿ.ಕೋಟೆ ತಾಲೂಕಿನ ಆಲನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷ್ಣಯ್ಯನ ಮುದ್ದಯ್ಯನ ಹುಂಡಿಯಲ್ಲಿ ಕಾಮಗಾರಿಗಳನ್ನು ಪರಿಶೀಲಿಸಿ, ಈಗಾಗಲೇ ಮೀಟರ್ ಅಳವಡಿಸಿ ನಲ್ಲಿ ಸಂಪರ್ಕ ಪೂರ್ಣಗೊಂಡು ನೀರನ್ನು ಪೂರೈಸುತ್ತಿದ್ದು, ಮೀಟರ್ ರೀಡಿಂಗ್ ಪ್ರಾರಂಭಿಸಿ ಅರಿವು ಮೂಡಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು.

ಅಣ್ಣೂರಿನ ಭುಕ್ತನ ಮಾಳ, ಬೀಚನಹಳ್ಳಿ ಅಂತರ ಸಂತೆ, ಹೊಸ್ನೂರು, ಕುಪ್ಪೆ ಹಾಗೂ ಅಂತರಸಂತೆ ಬಹು ಗ್ರಾಮ ಕುಡಿಯುವ ನೀರು ಯೋಜನೆಯ ಕಾಮಗಾರಿಗಳನ್ನು ಪರಿಶೀಲಿಸಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡುವಂತೆ ಗ್ರಾಮೀಣ ಕುಡಿಯುವ ನೀರು ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಿದರು.

ಸರಗೂರು ತಾಲೂಕಿನ ಬಿದರಹಳ್ಳಿಯ ನಂಜನಾಥಪುರ ಹಾಗೂ ಬಿ.ಮಟಕೆರೆಯ ಕೂಡಗಿ ಹಾಡಿಗೂ ಭೇಟಿ ನೀಡಿ ಕಾಮಗಾರಿಗಳ ಪರಿವೀಕ್ಷಿಸಿ ಮಾತನಾಡಿದ ಅವರು, ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿನ ಪ್ರತಿ ಮನೆಗೂ ನಲ್ಲಿ ಮೂಲಕ ಶುದ್ಧ ಕುಡಿಯುವ ನೀರನ್ನು ಮನೆ ಮನೆ ಗಂಗೆ ಕಾರ್ಯಕ್ರಮದ ಮೂಲಕ ಪೂರೈಸಲಾಗುತ್ತಿದೆ ಎಂದರು.

ಈ ವೇಳೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಎ.ಎಸ್.ರಂಜಿತ್‌ಕುಮಾರ್, ಹೆಚ್.ಡಿ.ಕೋಟೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗೋವಿಂದ ನಾಯಕ, ಕಿರಿಯ ಕಾರ್ಯಪಾಲಕ ಇಂಜಿನಿಯರ್‌ಗಳಾದ ಮೋನಶ್ರೀ, ಕೆ.ಸುನೀಲ್, ನಾಗೇಶ್, ಮೋಹನ್ ರಾಜ್, ಜಲಜೀವನ್ ಮಿಷನ್ ಜಿಲ್ಲಾ ಸಮಾಲೋಚಕರಾದ ಚೇತನ್‌ಕುಮಾರ್, ಓಡಿಓ ಹೆಚ್.ಟಿ. ಪ್ರಭಾಕರ, ಅಶ್ವಿನಿ, ಸಂತೋಷ್‌ನಾಗ್, ಕೆ.ಪಿ.ಸುರೇಶ್, ನರಸಿಂಹಮೂರ್ತಿ, ಭಾಗ್ಯ ಮತ್ತಿತರರು ಇದ್ದರು.

ಕೃಷಿ ಇಳುವರಿಯ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವ ವೈರಸ್

- ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಗಣ್ಯರ ಕಳವಳ
- ವಾರ್ಷಿಕ 15 ಬಿಲಿಯನ್ ಡಾಲರ್ ಕೃಷಿ ಉತ್ಪಾದನಾ ನಷ್ಟ
- 2030ರ ವೇಳೆಗೆ 5 ಬಿಲಿಯನ್ ಆಹಾರ ಬೇಡಿಕೆ
- 'ರೆಡಿ ಟು ಈಟ್'ಗೆ ಆದ್ಯತೆ ಕೊಡುತ್ತಿರುವ ಜನರು

ಮೈಸೂರು, ಜು.25(ಜಿಎ)-ದೇಶದಲ್ಲಿ ವೈರಸ್ ಕಾರಣದಿಂದ ವಾರ್ಷಿಕ ಶೇ.10 ರಿಂದ 30 ರಷ್ಟು ಪ್ರಮಾಣ ಕೃಷಿ ಇಳುವರಿ ಕಡಿಮೆ ಆಗುತ್ತಿದೆ ಎಂದು ಜೀವ ರಸಾಯನ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕಿ ಡಾ.ಹೆಚ್.ಎಸ್.ಸಾವಿತ್ರಿ ಕಳವಳ ವ್ಯಕ್ತಪಡಿಸಿದ್ದಾರೆ.

ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ಶುಕ್ರವಾರ 'ಪ್ಲಾಂಟ್ ಪ್ರೋಟೀನ್ಸ್ : ಸ್ಟ್ರಕ್ಚರ್ ಫಂಕ್ಷನ್, ಹ್ಯೂಮನ್ ನ್ಯೂಟ್ರಿಷನ್ ಅಂಡ್ ಟೆಕ್ನಾಲಜಿ ಅಡ್ವಾನ್ಸಸ್' ವಿಷಯ ಕುರಿತು ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ವೈರಸ್‌ಗಳು ಕೃಷಿ ಇಳುವರಿ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ವೈರಸ್ ಸಮಸ್ಯೆಗೆ ವೈಜ್ಞಾನಿಕ ಪರಿಹಾರ ಕಂಡುಕೊಳ್ಳುವ ಅವಶ್ಯಕತೆ ಇದೆ. ಇಲ್ಲದಿದ್ದರೇ ಆಹಾರ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಈಗಾಗಲೇ ದೇಶದಲ್ಲಿ ವೈರಸ್ ಕಾರಣದಿಂದ ವಾರ್ಷಿಕ ಶೇ.10 ರಿಂದ 30 ರಷ್ಟು ಪ್ರಮಾಣ ಕೃಷಿ ಇಳುವರಿ ಕಡಿಮೆ ಆಗುತ್ತಿದೆ ಎಂದು ತಿಳಿಸಿದರು.

ದೇಶ ವಾರ್ಷಿಕ 15 ಬಿಲಿಯನ್ ಡಾಲರ್ ನಷ್ಟು ಕೃಷಿ ಉತ್ಪಾದನಾ ನಷ್ಟವನ್ನು ಅನುಭವಿಸುತ್ತಿದೆ. ಬಾಳೆ, ಭತ್ತ, ಟೊಮ್ಯಾಟೋ ಮುಂತಾದ ಆಹಾರ ಬೆಳೆಗಳಿಗೆ ವೈರಸ್ ಸಮಸ್ಯೆ ಹೆಚ್ಚಾಗಿ ಕಾಡುತ್ತಿದೆ. ಬಾಳೆಗೆ ಕಾಣಿಸಿಕೊಂಡ ವೈರಸ್‌ನಿಂದ 2007 ರಿಂದ 2010ರ ಅವಧಿಯಲ್ಲಿ 350 ಕೋಟಿ ರೂ.ನಷ್ಟ ಉಂಟಾಗಿತ್ತು. ಭತ್ತದ ವೈರಸ್‌ನಿಂದ ವಾರ್ಷಿಕ 1 ಬಿಲಿಯನ್ ಡಾಲರ್‌ನಷ್ಟು ನಷ್ಟವಾಗುತ್ತಿದೆ. ಈ ನಷ್ಟವನ್ನು ತಡೆಗಟ್ಟುವ ಅವಶ್ಯಕತೆ ಇದೆ ಎಂದು ಎಚ್ಚರಿಸಿದರು.

ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್ ಮಾತನಾಡಿ, ದೇಶದಲ್ಲಿ 2030ರ ಹೊತ್ತಿಗೆ ಪ್ರತಿನಿತ್ಯ 5 ಬಿಲಿಯನ್ ಆಹಾರದ ಅವಶ್ಯಕತೆ ನಿರ್ಮಾಣವಾಗಲಿದ್ದು, ಇಷ್ಟೊಂದು ದೊಡ್ಡ ಪ್ರಮಾಣದ ಆಹಾರ ಪೂರೈಕೆ ಮಾಡುವುದು ಎಲ್ಲರ ಮುಂದಿರುವ ಸವಾಲಾಗಿದೆ ಎಂದು ತಿಳಿಸಿದರು.

ಜನರು ಪ್ರತಿನಿತ್ಯ ಸೇವಿಸುವ ಆಹಾರ, ಸಭೆ, ಸಮಾರಂಭ, ವಿವಾಹ ಮುಂತಾದ ಕಾರ್ಯಕ್ರಮಗಳನ್ನು ಒಳಗೊಂಡು ಪ್ರತಿನಿತ್ಯ 5 ಬಿಲಿಯನ್ ಆಹಾರದ ಅವಶ್ಯಕತೆ ಇದೆ. ಒಂದು ಆಹಾರ ಉತ್ಪಾದನಾ ಕಾರ್ಖಾನೆಯಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಹಾರ ಪೂರೈಕೆ ಮಾಡಲು ಸಾಧ್ಯವಿಲ್ಲ, ಹಾಗಾಗಿ ಸಾವಿರಾರು ಕಾರ್ಖಾನೆಗಳ ಅವಶ್ಯಕತೆ ಇದೆ. ಪ್ರಸ್ತುತ ಜನರು 'ರೆಡಿ ಟು ಈಟ್' ಆಹಾರಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಆಹಾರ ಉತ್ಪಾದನೆಯಲ್ಲಿ ಆಹಾರ ತಂತ್ರಜ್ಞಾನಗಳು ಹಾಗೂ ಆಹಾರ ತಾಂತ್ರಿಕ ಸಂಶೋಧನಾಲಯಗಳು, ಕಾರ್ಖಾನೆಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.



ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ವತಿಯಿಂದ ಸಂಸ್ಥೆಯ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಗುಡ್‌ಫುಡ್ ಇನ್‌ಸ್ಟಿಟ್ಯೂಟ್‌ನೊಂದಿಗೆ ಸಿಎಫ್‌ಟಿಆರ್‌ಐ 'ಸಂಶೋಧನೆ ಮತ್ತು ಅಭಿವೃದ್ಧಿ' ವಿಷಯವಾಗಿ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಮೆಕ್ ಡೊನಾಲ್ಡ್ಸ್ ಬರ್ಗರ್ ಬಳಕೆ ಮಾಡಲು ಸಿಎಫ್‌ಟಿಆರ್‌ಐ ತಯಾರಿಸಿದ 'ಪ್ರೋಟೀನ್ ಸ್ಲೈಸ್'ಅನ್ನು ಬಿಡುಗಡೆ ಮಾಡಲಾಯಿತು ಹಾಗೂ ಗುಡ್‌ಫುಡ್ ಇನ್‌ಸ್ಟಿಟ್ಯೂಟ್‌ನೊಂದಿಗೆ ಸಿಎಫ್‌ಟಿಆರ್‌ಐ 'ಸಂಶೋಧನೆ ಮತ್ತು ಅಭಿವೃದ್ಧಿ' ವಿಷಯವಾಗಿ ಒಡಂಬಡಿಕೆಗೆ ಸಹಿ ಹಾಕಿತು. ಈ ವೇಳೆ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯದ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಉಪಸ್ಥಿತರಿದ್ದರು.

ವಿಶೇಷ ಪೂಜೆ



ಸಿಎಂ ಸಿದ್ದರಾಮಯ್ಯನವರ ಪರ ಸುಪ್ರೀಂ ಕೋರ್ಟ್ ಆದೇಶ ಬಂದಿರುವ ಹಿನ್ನೆಲೆಯಲ್ಲಿ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಾಲಯದಲ್ಲಿ ಅಖಿಲ ಕರ್ನಾಟಕ ರಾಕೇಶ್ ಸಿದ್ದರಾಮಯ್ಯ ಅಭಿಮಾನಿ ಬಳಗದ ವತಿಯಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಗದ ಅಧ್ಯಕ್ಷ ವಿಶ್ವನಾಥ್ (ವಿಶ್ವ), ಉಪಾಧ್ಯಕ್ಷ ರಾಮಪ್ಪ ರಮೇಶ್, ಜಗದೀಶ್, ಶ್ರೀಧರ್, ಮಾದೇವ್, ಶಾಂತಮ್ಮ, ಪೈಲ್ವಾನ ಯಶ್ವಂತ್, ನಿಖಿಲ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಮ್ಮುಂಟೆ ಕಾಸ್ಕೊ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸ್ಟೈಯಾರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಮಾರೀಚನ್ (ತ)	4 ಪ್ರದರ್ಶನಗಳು
ಸಂಗಂ	
ಹರಿಹರ ವೀರಮಲ್ಲು (ತೆ)	4 ಪ್ರದರ್ಶನಗಳು
ಲಿಡೋ	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ ರಾ.7.55ಕ್ಕೆ ಡಿಎನ್‌ಎ (ತೆ): ಮ1.10ಕ್ಕೆ ಕುಬೇರಾ (ತೆ): ಸಂ.4.05ಕ್ಕೆ ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ
ಸ್ಕ್ರೀನ್ 2	ಇಲೆಯೋ (3ಡಿ)(ಇಂ): ಬೆ11.30ಕ್ಕೆ ಮ1.45ಕ್ಕೆ ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ ರಾ.7.10ಕ್ಕೆ ಮಿಷನ್ ಇಂಪಾಸಿಬಲ್ ದಿ ಫೈನಲ್ ರೆಕನಿಂಗ್ ಬಂಧುಮಿತ್ರ (ಮ): ರಾ.10.20ಕ್ಕೆ
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ಬಂಧುಮಿತ್ರ (ಮ): ರಾ.10ಕ್ಕೆ
ಸ್ಕ್ರೀನ್ 4	ಕುಬೇರಾ (ತೆ): ಬೆ10.30ಕ್ಕೆ ಸಂ.6.25ಕ್ಕೆ ರಾ.10.15ಕ್ಕೆ ಕುಬೇರಾ (ತ): ಮ.2.20ಕ್ಕೆ

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಬ್ಲ್ಯಾಕ್ ನ್ಯೂಸ್ (ಹಿಂ): ಬೆ10ಕ್ಕೆ, ಮ1ಕ್ಕೆ, ಸಂ4ಕ್ಕೆ, ರಾ.7ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ11.40ಕ್ಕೆ, ಸಂ.6.05ಕ್ಕೆ, ಟ್ರಿಪ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ರಿಪ್ಸ್ (ಇಂ): ಮ.1.20ಕ್ಕೆ ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವೆರಿ (ತ): ರಾ.10.30ಕ್ಕೆ
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ ಮಾದೇವ (ಕ): ರಾ.9.15ಕ್ಕೆ
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪ್ಸ್ (ಇಂ): ಬೆ10ಕ್ಕೆ, ಮ1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ10ಕ್ಕೆ, ಮ1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಣ್ಮನೈ 4 (ತ): ಮ12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಥ್ನಂ (ತ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ಯಾಂಗ್ಸ್ ಆಫ್ ಗೋದಾವರಿ (ತೆ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾಲಿವಿಲನ್ ಗೋಪಾಲಗಾಲಿ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಂದಿರಗಳಲ್ಲಿ ಪ್ರದರ್ಶನದ ಸಮಯದಲ್ಲಿ ಪರಿವರ್ತನೆ ಮಾಡಲಾಗುವ ಸಾಧ್ಯತೆ ಇರುವುದರಿಂದ ಚಿತ್ರಮಂದಿರಗಳಿಗೆ ಕರೆ ಮಾಡಿ ಖಚಿತಪಡಿಸಿಕೊಳ್ಳಲು ಕೋರಲಾಗಿದೆ.


ಜೆ.ಡಿ.ಎಸ್ ಮುಖಂಡರು ಹಾಗೂ ಲಕ್ಷ್ಮಿ ನಾರಾಯಣ ಗ್ರಾಮ ಸೀನರಿ ಮಾಲೀಕರಾದ
ಶ್ರೀ ಮುಳ್ಳೂರು ದೇವರಾಜು ರವರ ಹುಟ್ಟು ಹಬ್ಬದ ಅಂಗವಾಗಿ
26-07-2025 ರಿಂದ 7-8-2025ರ ತನಕ ನಾಟಕೋತ್ಸವ ಪುರಭವನ, ಮೈಸೂರು
ಶುಭಕೋರುವವರು
ಮುಳ್ಳೂರು ದೇವರಾಜು ಸ್ನೇಹ ಬಳಗ


ಆತ್ಮೀಯ ಸ್ನೇಹಿತರಾದ
ಎನ್. ಚಂದ್ರಶೇಖರ್ (ಕಾಳಪ್ಪ)
ನಿರ್ದೇಶಕರಾದ ಜನಹಿತ ವಿವಿಧೋದ್ದೇಶ ಸಹಕಾರ ಸಂಘ (ಪಡುವಾರಹಳ್ಳಿ) ಮೈಸೂರು
ಹಾಗೂ ಮುಂಬರುವ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರ ಸ್ಥಾನದ ಆಕಾಂಕ್ಷಿ
ಜನ್ಮದಿನದ ಶುಭಾಶಯಗಳು
VISMAYA